# ಜನನ, ಮರಣ ನೋಂದಣಿಯ ಸ್ಪಷ್ಟೀಕರಣಗಳು

## ಆರ್ಥಿಕ ನೆರವು: Plan India

ಪ್ರಕಟಣೆ:
ಜನನ, ಮರಣಗಳ ಮುಖ್ಯ ನೋಂದಣಾಧಿಕಾರಿಗಳು,
ಜನನ, ಮರಣಗಳ ಮುಖ್ಯ ನೋಂದಣಾಧಿಕಾರಿಯವರ ಕಛೇರಿ.
7ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ
ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001
ದೂರವಾಣಿ ಸಂಖ್ಯೆ: 080-22869741, 22867224
ಫ್ಯಾಕ್ಸ್ ನಂ: 080-22863025

ಸಮನ್ವಯ

ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್
ನಂ.9, 8ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು -560 003
www.issin.org Ph: 080-23315017

ಜನವರಿ - 2010

| ಕ್ರಮ ಸಂಖ್ಯೆ | ಪರಿವಿಡಿ | ಪುಟ ಸಂಖ್ಯೆ |
|---|---|---|
| 1 | ಜನನ, ಮರಣ ನೋಂದಣಿ ಅಧಿನಿಯಮ, 1969ರ ಉಪಬಂಧಗಳ ಬಗ್ಗೆ ಸ್ಪಷ್ಟೀಕರಣಗಳು | 1–51 |
| 2. | ಹೆಚ್ಚುವರಿ ಪ್ರಶ್ನೆ ಮತ್ತು ಸ್ಪಷ್ಟೀಕರಣಗಳು | 52–54 |
| 3. | ಭಾರತದಿಂದ ಹೊರಗಡೆಯಿರುವ ಭಾರತ ಪ್ರಜೆಗಳ ಜನನ, ಮರಣ | 55–56 |
| 4. | ದತ್ತು ಮಗುವಿನ ಜನನ ನೋಂದಣಿ ಮಾಡುವ ಬಗ್ಗೆ. | 57–60 |
| 5. | ಕಾಣೆಯಾದ ವ್ಯಕ್ತಿಗಳ ಮರಣ ನೋಂದಣಿ ಬಗ್ಗೆ. | 61–63 |
| 6. | ಜನನ ಪ್ರಮಾಣ ಪತ್ರದ ನೋಂದಣಿ ಬಗ್ಗೆ. | 64–65 |
| 7. | ಜನನ, ಮರಣ ನೋಂದಣಿ ಮಾಡಲು ಅಲಭ್ಯ ಪ್ರಮಾಣಪತ್ರ ನೀಡುವ ಬಗ್ಗೆ. | 66 |
| 8. | ಜನನ, ಮರಣ ದಾಖಲೆಗಳನ್ನು ರದ್ದುಪಡಿಸುವ ಬಗ್ಗೆ. | 67–68 |
| 9. | ಜನನ ದಾಖಲೆಯಲ್ಲಿ ತಂದೆಯ ಹೆಸರನ್ನು ಸೇರಿಸುವ ಬಗ್ಗೆ. | 69 |
| 10. | ಧರ್ಮದ ದೃಷ್ಟಿಯಿಂದ ಮರಣ ಪ್ರಮಾಣ ಪತ್ರದಲ್ಲಿ ಹೆಸರನ್ನು ಬದಲಾವಣೆ ಮಾಡುವ ಬಗ್ಗೆ | 70–71 |
| 11. | ಹೊಸ ಜಿಲ್ಲೆಗಳ ಹೆಸರನ್ನು ಜನನ, ಮರಣ ಪ್ರಮಾಣ ಪತ್ರಗಳಲ್ಲಿ ನಮೂದಿಸುವ ಬಗ್ಗೆ. | 72 |

## ಅಧ್ಯಾಯ–13

# ಅಧಿನಿಯಮದ ಕಾನೂನುಸಮ್ಮತ ಉಪಬಂಧಗಳ ಬಗ್ಗೆ ಸ್ಪಷ್ಟೀಕರಣಗಳು

ಅಧಿನಿಯಮದ ಬೇರೆ ಬೇರೆ ಉಪಬಂಧಗಳನ್ನು ಜಾರಿಗೆ ತರುವ ಕಾರ್ಯವಿಧಾನದಲ್ಲಿ ಜನನ ಮತ್ತು ಮರಣಗಳ ನೋಂದಣಿಗೆ ಸಂಬಂಧಿಸಿದ ಕಾನೂನುಸಮ್ಮತ ಉಪಬಂಧಗಳಿಗೆ ಕೆಲವು ಉಲ್ಲೇಖಗಳನ್ನು ಮಾಡಲಾಗಿದೆ. ಇವುಗಳನ್ನು ಸಂಬಂಧಿಸಿದ ರಾಜ್ಯದ ಇಲಾಖೆಗಳ ಮೂಲಕ ರಿಜಿಸ್ಟ್ರಾರ್ ಜನರಲ್, ಭಾರತ ಇವರ ಕಚೇರಿಗೆ ಕಳುಹಿಸಲಾಯಿತು. ರಿಜಿಸ್ಟ್ರಾರ್ ಜನರಲ್, ಭಾರತ ಇವರ ಕಚೇರಿಯು ಅವಶ್ಯವಿರುವಲ್ಲೆಲ್ಲಾ ಕೇಂದ್ರ ಕಾನೂನು ಮಂತ್ರಾಲಯದೊಂದಿಗೆ ಸಮಾಲೋಚಿಸಿ ಕೆಲವು ಸ್ಪಷ್ಟೀಕರಣಗಳನ್ನು ನೀಡಿದೆ. ತದನಂತರದ ವರ್ಷಗಳಲ್ಲಿ, ಅಧಿನಿಯಮದ ಬಹುತೇಕ ಪ್ರತಿಯೊಂದು ಪ್ರಕರಣವನ್ನೊಳಗೊಂಡಂತೆ ಅನೇಕ ವಿಷಯಗಳ ಮೇಲೆ ಸ್ಪಷ್ಟೀಕರಣವನ್ನು ನೀಡಲಾಯಿತು. ಇಲ್ಲಿಯವರೆಗೆ ಹಾಗೆ ನೀಡಲಾದ ಮುಖ್ಯ ಸ್ಪಷ್ಟೀಕರಣಗಳನ್ನು ಈ ಅಧ್ಯಾಯದಲ್ಲಿ ಸೇರಿಸಲಾಗಿದೆ.

### ಪ್ರಕರಣ 4:

1. ಪ್ರಶ್ನೆ : ಜಿಲ್ಲಾ ರಿಜಿಸ್ಟ್ರಾರರಿಂದ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಪ್ರಾಧಿಕಾರಿಯು ನೋಂದಣಿ ಕಚೇರಿಗಳನ್ನು ಪರಿವೀಕ್ಷಿಸತಕ್ಕದ್ದು ಮತ್ತು ಅಲ್ಲಿರುವ ರಿಜಿಸ್ಟರುಗಳನ್ನು ಪರೀಕ್ಷಿಸತಕ್ಕದ್ದೆಂದು ಅಧಿನಿಯಮದ ಪ್ರಕರಣ 18ರಲ್ಲಿ ಉಪಬಂಧಿಸಿರುವುದರಿಂದ, ಅಧಿನಿಯಮದ 4(4)ನೇ ಪ್ರಕರಣದ ಮೇರೆಗೆ ಮುಖ್ಯ ರಿಜಿಸ್ಟ್ರಾರರು ಅಥವಾ ಅವರ ನಾಮನಿರ್ದೇಶಿತರು ನೋಂದಣಿಯ ಕೆಲಸವನ್ನು ಪರೀಕ್ಷಿಸಬಹುದೆ?

ಸ್ಪಷ್ಟೀಕರಣ : ರಿಜಿಸ್ಟ್ರಾರ್‌ರು ಜಿಲ್ಲಾ ರಿಜಿಸ್ಟ್ರಾರರ ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಅಡಿಯಲ್ಲಿ ಕೆಲಸ ಮಾಡಬೇಕು ಮತ್ತು ಜಿಲ್ಲಾ ರಿಜಿಸ್ಟ್ರಾರರು ಮುಖ್ಯ ರಿಜಿಸ್ಟ್ರಾರರ ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಅಡಿಯಲ್ಲಿ ಕೆಲಸ ಮಾಡಬೇಕು. ಪ್ರಕರಣ 4(4)ರ ಮೇರೆಗೆ ಮುಖ್ಯ ರಿಜಿಸ್ಟ್ರಾರರು ಸೂಕ್ತ ನಿರ್ದೇಶನಗಳನ್ನು ನೀಡುವುದರ ಮೂಲಕ ಅಥವಾ ಇತರೆ ರೀತಿಯಲ್ಲಿ ರಾಜ್ಯದಲ್ಲಿ ನೋಂದಣಿ ಕಾರ್ಯವನ್ನು ಸಮನ್ವಯಗೊಳಿಸಲು, ಏಕೀಕರಿಸಲು ಅಥವಾ ಮೇಲ್ವಿಚಾರಣೆ ಮಾಡಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು. "ಮೇಲ್ವಿಚಾರಣೆ" ಎಂಬ ಪದವು ತಪಾಸಣೆ ಎಂಬುದನ್ನು ಒಳಗೊಳ್ಳುತ್ತದೆ. "ಮೇಲ್ವಿಚಾರಣೆ" ಎಂಬ ಪದದ ನಿಘಂಟಿನ ಅರ್ಥ ಯಾವುದೇ ಕಾರ್ಯದ ಅನುಷ್ಠಾನ ಅಥವಾ ಕಾರ್ಯವಿಧಾನ ಅಥವಾ ಪ್ರಗತಿಯನ್ನು ಯುಕ್ತ ಅಧಿಕಾರದೊಂದಿಗೆ ನಿರ್ದೇಶಿಸುವುದು ಅಥವಾ ಗಮನಿಸುವುದು ಆಗಿದೆ. ಪರಿವೀಕ್ಷಣೆ ಎಂದರೆ ನಿಕಟವಾಗಿ ಗಮನಿಸುವುದು, ಅಧಿಕೃತವಾಗಿ ಪರೀಕ್ಷಿಸುವುದು ಇತ್ಯಾದಿ. ಯಾರೇ ವ್ಯಕ್ತಿಗೆ ನಿಕಟವಾಗಿ ಪರೀಕ್ಷಿಸುವ ಅಥವಾ ನೋಡುವ ಹಕ್ಕು ಇದ್ದ ಹೊರತು, ಅವನು ಅಧಿಕಾರಯುತವಾಗಿ ನಿರ್ದೇಶಿಸಲಾರ ಅಥವಾ ಗಮನಿಸಲಾರ. ಆದ್ದರಿಂದ ನೋಂದಣಿಕಾರ್ಯವನ್ನು ಪರಿವೀಕ್ಷಿಸಲು ಮುಖ್ಯ ರಿಜಿಸ್ಟ್ರಾರರು ಅಥವಾ ಅವರ ನಾಮನಿರ್ದೇಶಿತರಿಗೆ ಅಧಿಕಾರವಿದೆ ಎಂಬುದು ಪ್ರಕರಣ 4(4) ಮೇರೆ ಮೇಲ್ವಿಚಾರಣೆ ಮಾಡಲು ಅವರಿಗಿರುವ ಅಧಿಕಾರದೊಂದಿಗೆ ಸೂಚಿತವಾಗಿದೆ. ಅಲ್ಲದೆ, ಜಿಲ್ಲಾ ರಿಜಿಸ್ಟ್ರಾರರು ಮುಖ್ಯ ರಿಜಿಸ್ಟ್ರಾರರ ನಿರ್ದೇಶನಗಳಿಗೊಳಪಟ್ಟು ಕಾರ್ಯನಿರ್ವಹಿಸಬೇಕು ಮತ್ತು ಮುಖ್ಯ ರಿಜಿಸ್ಟ್ರಾರರ ಆದೇಶಗಳ

ಜಾರಿಯನ್ನು ಪಾಲಿಸಬೇಕು ಎಂದು ಉಪಬಂಧಿಸುವ ಅಧಿನಿಯಮದ 6ನೇ ಪ್ರಕರಣದ (2)ನೇ ಉಪಪ್ರಕರಣವೂ ಸಹ ಇದನ್ನು ಸಮರ್ಥಿಸುತ್ತದೆ. ಪ್ರಕರಣ 18ರಲ್ಲಿ ಜಿಲ್ಲಾ ರಿಜಿಸ್ಟ್ರಾರರ ಅಧಿಕಾರ ವ್ಯಾಪ್ತಿಯೊಳಗಿರುವ ನೋಂದಣಿ ಕಚೇರಿಗಳನ್ನು ಆಂತರಿಕವಾಗಿ ಪರಿವೀಕ್ಷಣೆ ಮಾಡಲು ಉಪಬಂಧ ಕಲ್ಪಿಸುತ್ತದೆ. ಆದರೆ, ಇದು ಇಡೀ ರಾಜ್ಯದ ನೋಂದಣಿ ಕಾರ್ಯವನ್ನು ಮೇಲ್ವಿಚಾರಣೆ ಮಾಡುವ 4(4)ನೇ ಪ್ರಕರಣದ ಮೇರೆಗೆ ಮುಖ್ಯ ರಿಜಿಸ್ಟ್ರಾರನಿಗೆ ಇರುವ ಹಕ್ಕನ್ನು ಇಲ್ಲವಾಗಿಸುವುದಿಲ್ಲ. ಎಂದರೆ ರಾಜ್ಯದ ಯಾವುದೇ ಜಿಲ್ಲೆಯಲ್ಲಿರುವ ಯಾವುದೇ ನೋಂದಣಿ ಕಚೇರಿಯನ್ನು ಮೇಲ್ವಿಚಾರಣೆ ಮಾಡಬಹುದೆಂಬ ಇಂಗಿತಾರ್ಥವನ್ನು ಒಳಗೊಂಡಿದೆ.

## ಪ್ರಕರಣ 6:

**2. ಪ್ರಶ್ನೆ** : ಪ್ರಕರಣ 6(1) ರಲ್ಲಿ ಸೂಚಿಸಿರುವ ರೆವಿನ್ಯೂ ಜಿಲ್ಲೆಯ ನಿಖರ ವ್ಯಾಪ್ತಿ ಯಾವುದು?

**ಸ್ಪಷ್ಟೀಕರಣ** : "ರೆವಿನ್ಯೂ" ಎಂಬ ಪದವನ್ನು ಅಧಿನಿಯಮದಲ್ಲಿ ವ್ಯಾಖ್ಯಾನಿಸಿಲ್ಲ. ಆದರೆ, ಸಾಮಾನ್ಯವಾಗಿ ರಾಜ್ಯದ ರೆವಿನ್ಯೂ ಆಡಳಿತದ ಉದ್ದೇಶಗಳಿಗಾಗಿ ಸೃಜಿಸಲಾದ ಜಿಲ್ಲೆ ಎಂದು ಅರ್ಥೈಸಲಾಗುತ್ತದೆ. ತದನುಸಾರವಾಗಿ, ಜನನ ಮತ್ತು ಮರಣಗಳ ಅಧಿನಿಯಮದ ಪ್ರಕರಣ 6(1)ರ ಸಂದರ್ಭದಲ್ಲಿ "ರೆವೆನ್ಯೂ ಜಿಲ್ಲೆ" ಎಂಬ ಪದದ ಅರ್ಥ ರೆವೆನ್ಯೂ ಆಡಳಿತದ ಉದ್ದೇಶಗಳಿಗಾಗಿ ಸೃಜಿಸಲಾದ ಒಂದು ಜಿಲ್ಲೆ ಎಂದು ಮಾತ್ರ ಮತ್ತು ಆ ಪ್ರಕರಣದ ಉಪಬಂಧಗಳ ಅನುಸಾರವಾಗಿ ಯಾವುದೇ ಅಂಥ ಜಿಲ್ಲೆಯಲ್ಲಿ ಒಬ್ಬರು ಮಾತ್ರ ಜಿಲ್ಲಾ ರಿಜಿಸ್ಟ್ರಾರರಿರತಕ್ಕದ್ದು ಮತ್ತು ಆ ಜಿಲ್ಲಾ ರಿಜಿಸ್ಟ್ರಾರರಿಗೆ ನೆರವು ನೀಡುವ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಷ್ಟು ಸಂಖ್ಯೆಯ ಅಪರ ಜಿಲ್ಲಾ ರಿಜಿಸ್ಟ್ರಾರರನ್ನು ನೇಮಕ ಮಾಡಿಕೊಳ್ಳಲು ಅಧಿಕಾರ ಹೊಂದಿದೆ.

## ಪ್ರಕರಣ 7:

**3. ಪ್ರಶ್ನೆ** : ರಾಜ್ಯ ಸರ್ಕಾರವು ಪ್ರತಿಯೊಬ್ಬ ರಿಜಿಸ್ಟ್ರಾರರಿಗೆ ಪ್ರತ್ಯೇಕ ನೇಮಕಾತಿ ಆದೇಶ ನೀಡಬೇಕೆ ಅಥವಾ ಪದನಾಮದ ಮೇಲೆ ರಿಜಿಸ್ಟ್ರಾರರಿಗೆ ಸಾರ್ವತ್ರಿಕ ಸಾಮಾನ್ಯ ನೇಮಕಾತಿ ಆದೇಶ ನೀಡಬೇಕು?

**ಸ್ಪಷ್ಟೀಕರಣ** : 7ನೇ ಪ್ರಕರಣದ ಮೇರೆಗೆ ತನಗಿರುವ ಅಧಿಕಾರವನ್ನು ಚಲಾಯಿಸಿ ಅವರಿಗೆ ಯಾವ ಮಾದರಿಯ ಆದೇಶ ನೀಡಬೇಕೆಂಬುದನ್ನು ರಾಜ್ಯ ಸರ್ಕಾರವು ತೀರ್ಮಾನಿಸಬೇಕಾಗುತ್ತದೆ. ಪ್ರಾಧಿಕಾರವು ಇಚ್ಛಿಸಿದರೆ ಸಾರ್ವತ್ರಿಕ ಆದೇಶವನ್ನು ನೀಡುವುದಕ್ಕೆ ಯಾವುದೇ ಆಕ್ಷೇಪಣೆ ಇಲ್ಲ.

**4. ಪ್ರಶ್ನೆ** : ದಂಡು ಪ್ರದೇಶಗಳಿಗೆ ರಿಜಿಸ್ಟ್ರಾರರನ್ನು ನೇಮಕ ಮಾಡುವವರು ಯಾರು–ರಾಜ್ಯ ಸರ್ಕಾರವೇ ಅಥವಾ ಕೇಂದ್ರ ಸರ್ಕಾರವೇ (ರಕ್ಷಣಾ ಮಂತ್ರಾಲಯ)? ರಾಜ್ಯ ಸರ್ಕಾರವು ರಚಿಸಿದ ನಿಯಮಗಳೇ ದಂಡು ಪ್ರದೇಶಕ್ಕೆ ಅನ್ವಯವಾಗುತ್ತವೆಯೇ, ಅಥವಾ ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಾಲಯ (ನಿರ್ದೇಶಕರು, ಸೇನಾ ಭೂದಾಖಲೆಗಳು) ಇವರು ಎಲ್ಲಾ ದಂಡು ಪ್ರದೇಶಗಳಿಗೂ ಏಕರೂಪ ನಿಯಮಗಳನ್ನು ಮಾಡುತ್ತಾರೆಯೆ?

ಸ್ಪಷ್ಟೀಕರಣ : ದಂಡು ಪ್ರದೇಶಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಸಂವಿಧಾನದ ಸಮವರ್ತಿ ಪಟ್ಟಿಯ 30ನೇ ನಮೂದಿನ ಉದ್ದೇಶಕ್ಕಾಗಿ, "ರಾಜ್ಯ ಸರ್ಕಾರ" ಕೇಂದ್ರ ಸರ್ಕಾರವಲ್ಲ ರಾಜ್ಯ ಸರ್ಕಾರವೇ, ಕೇಂದ್ರ ಪಟ್ಟಿಯ 3ನೇ ನಮೂದಿನಲ್ಲಿ ನಿರ್ದಿಷ್ಟಪಡಿಸಿರುವ ಎಂದರೆ ಕೇಂದ್ರ ಸರ್ಕಾರದ ಕಾಳಜಿಗಳಾದ ಪರಿಸೀಮನ, ಸ್ಥಳೀಯ ಸ್ವಯಂ ಸರ್ಕಾರ ಇತ್ಯಾದಿಗಳ ಕೆಲವು ವಿಷಯಗಳಿಗೆ ಸಂಬಂಧಪಟ್ಟಂತೆ ಮಾತ್ರ ಕೇಂದ್ರ ಸರ್ಕಾರ ಎಲ್ಲ ಇತರ ಪ್ರಕಾರ್ಯಗಳೂ, ರಾಜ್ಯ ಸರ್ಕಾರದ ಪ್ರಕಾರ್ಯಗಳೆಂದು ತೋರುತ್ತದೆ. ಆದರೂ, ರಾಜ್ಯ ಸರ್ಕಾರದ ಕೋರಿಕೆ ಮೇಲೆ ಈ ಪ್ರದೇಶಗಳಲ್ಲಿ ದಂಡು ಪ್ರದೇಶದ ಪ್ರಾಧಿಕಾರಿಗಳನ್ನು ಜನನ ಮತ್ತು ಮರಣಗಳ ರಿಜಿಸ್ಟ್ರಾರರುಗಳನ್ನಾಗಿ ನೇಮಕ ಮಾಡುವುದು ಅನುಕೂಲಕರ. ಆಗ ಅಧಿನಿಯಮವನ್ನು ಸಮರ್ಪಕವಾಗಿ ಕಾರ್ಯಗತಗೊಳಿಸುವುದು ಕಷ್ಟವಾಗುವುದಿಲ್ಲ.

5. ಪ್ರಶ್ನೆ : "ಎ" ಎಂಬಾತ "ಬಿ" ಎಂಬ ತನ್ನ ಹೆಂಡತಿಗೆ ಜನಿಸಿದ ಶಿಶುವಿನ ತಂದೆ ಎಂಬುದಾಗಿ ಜನನ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ತಂದೆ ಎಂಬುದಾಗಿ ನಮೂದಿಸಿರುವ ಬಗ್ಗೆ ತಾವು ಒಟ್ಟಿಗೆ ಬಾಳುತ್ತಿಲ್ಲ ಮತ್ತು ವೈವಾಹಿಕ ಜೀವನದ ಹೊರಗಿನ ಸಂಬಂಧದ ಫಲವಾಗಿ ಅವಳು ಗರ್ಭಿಣಿಯಾದಳು ಎಂಬ ಆಧಾರದ ಮೇಲೆ ಆಕ್ಷೇಪಿಸುತ್ತಾನೆ. ಶಿಶುವಿನ ತಂದೆ "ಎ" ಎಂದು "ಬಿ" ನೀಡಿದ್ದಾಳೆ. ಇಂಥ ಪ್ರಕರಣಗಳಲ್ಲಿ ಮತ್ತು ವಿಶೇಷವಾಗಿ ಪ್ರಸ್ತುತ ಪ್ರಕರಣದಲ್ಲಿ ಅನುಸರಿಸಬೇಕಾದ ಸರಿಯಾದ ಕ್ರಮ ಯಾವುದು?

ಸ್ಪಷ್ಟೀಕರಣ : ಮಗುವಿನ ಜನನ ಕಾನೂನುಬದ್ಧವಾಗಿ ವಿವಾಹವಾಗಿರುವ ಆ ತಂದೆ ತಾಯಿಯರಿಗೆ ಆಗಿರುವುದರಿಂದ ಮತ್ತು ಅವರು ಪ್ರತ್ಯೇಕಗೊಂಡಿರುವ ಬಗ್ಗೆ ಡಿಕ್ರಿ ಇಲ್ಲದಿರುವುದರಿಂದ ವೈವಾಹಿಕ ಜೀವನದ ಹೊರಗೆ ಗರ್ಭಧಾರಣೆಯಾಗಿದೆ ಎಂಬ ವಾದವನ್ನು ಮಂಡಿಸಿ "ಎ" ತಾನು ಶಿಶುವಿನ ತಂದೆಯಲ್ಲವೆಂದು ನಿರಾಕರಿಸುವಂತಿಲ್ಲ. ಮಾಹಿತಿಯನ್ನು "ಬಿ" ಕೊಟ್ಟಿರುವುದರಿಂದ ಮತ್ತು ದಾಖಲೆ ಜನನಕ್ಕೆ ಸಾಕ್ಷಿ ಮಾತ್ರ ಆಗಿರುವುದರಿಂದ, "ಎ" ಆಕ್ಷೇಪಣೆಯನ್ನು ಮಾನ್ಯ ಮಾಡಬೇಕಿಲ್ಲ.

6. ಪ್ರಶ್ನೆ : ಜನನ ಮತ್ತು ಮರಣಗಳು ಘಟಿಸಿದ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳದೆ ಯಾವುದೇ ಸ್ಥಳದಲ್ಲಿ ಅದರ ನೋಂದಣಿ ಮಾಡಿಸಬಹುದೇ? ಮುಂಬಯಿಯಲ್ಲಿ ನಡೆದ ಘಟನೆಯನ್ನು ಗೋವಾದಲ್ಲಿ ನೋಂದಾಯಿಸಬಹುದೇ?

ಸ್ಪಷ್ಟೀಕರಣ : ಘಟನೆ ಸಂಭವಿಸಿದ ಸ್ಥಳದಲ್ಲಿ ಮಾತ್ರವೇ ನೋಂದಾಯಿಸಬೇಕು. ಘಟನೆಯ ಮುಂಬಯಿಯಲ್ಲಿ ಸಂಭವಿಸಿದರೆ ಘಟನೆ ನಡೆದ ಸ್ಥಳದ ಅಧಿಕಾರ ವ್ಯಾಪ್ತಿಯುಳ್ಳ ಆ ಸ್ಥಳೀಯ ರಿಜಿಸ್ಟ್ರಾರರಲ್ಲಿ ನೋಂದಾಯಿಸಿಬೇಕು. ಘಟನೆಯನ್ನು ಗೋವಾದಲ್ಲಿ ನೋಂದಾಯಿಸಲಾಗುವುದಿಲ್ಲ.

7. ಪ್ರಶ್ನೆ : ವಿದೇಶಿ ರಾಷ್ಟ್ರೀಯರ ಜನನ ಅಥವಾ ಮರಣಗಳು ಭಾರತದಲ್ಲಿ ಸಂಭವಿಸಿದರೆ, ಘಟನೆ ನಡೆದ ಭಾರತದಲ್ಲಿ ನೋಂದಾಯಿಸಬಹುದೇ? ಅಥವಾ ಭಾರತದಲ್ಲಿ ವಿದೇಶಿ ರಾಷ್ಟ್ರೀಯರ ಜನನ ಅಥವಾ ಮರಣಗಳನ್ನು ಅಧಿನಿಯಮದ ಪ್ರಕರಣ 20(1) ಮೇರೆಗೆ ವಿದೇಶದಲ್ಲಿರುವ ಭಾರತೀಯ ಪ್ರಜೆಯ ಜನನ ಮತ್ತು ಮರಣಗಳ ಸಂದರ್ಭದಲ್ಲಿ ಅಗತ್ಯಪಡಿಸಿದಂತೆ ಸಂಬಂಧಿಸಿದ ವಿದೇಶಿ ಕೌನ್ಸುಲೆಟ್ ಕಚೇರಿಗಳಲ್ಲಿ ಮಾತ್ರ ನೋಂದಾಯಿಸಬೇಕೆ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋದಣಿ ಅಧಿನಿಯಮ, 1969ರ ಪ್ರಕರಣ 7(2)ರಲ್ಲಿ ರಾಷ್ಟ್ರೀಯತೆಯನ್ನು ಗಣನೆಗೆ ತೆಗೆದುಕೊಳ್ಳದೆ ಪ್ರತಿಯೊಂದು ಜನನ ಮತ್ತು ಮರಣದ ನೋಂದಣಿಗಾಗಿ ಅವಕಾಶ ಕಲ್ಪಿಸಿದೆ. ವಿದೇಶಿ ರಾಷ್ಟ್ರೀಯನ ಶಿಶುವಿನ ಜನನವನ್ನು ಸ್ಥಳೀಯ ರಿಜಿಸ್ಟ್ರಾರರಲ್ಲಿ ನೋಂದಾಯಿಸಬಹುದು ಮತ್ತು ಆ ಬಗ್ಗೆ ಜನನ ಪ್ರಮಾಣ ಪತ್ರವನ್ನು ಅಧಿನಿಯಮದ 12ನೇ ಪ್ರಕರಣದ ಮೇರೆಗೆ ನೀಡಬಹುದು, ಅಧಿನಿಯಮದ 20(1)ನೇ ಪ್ರಕರಣ ಇಂಥ ಸಂದರ್ಭಗಳಲ್ಲಿ ಅನ್ವಯವಾಗುವುದಿಲ್ಲ.

8. ಪ್ರಶ್ನೆ : 7ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ರಿಜಿಸ್ಟ್ರಾರರು ಸಬ್ ರಿಜಿಸ್ಟ್ರಾರರನ್ನು ನೇಮಕ ಮಾಡಬಹುದು ಮತ್ತು ತನ್ನ ಯಾವುದೇ ಅಥವಾ ಎಲ್ಲ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅವರಿಗೆ ವಹಿಸಿಕೊಡಬಹುದು. ಪ್ರಕರಣ 12 ಮತ್ತು 15ರ ಮೇರೆಗೆ ರಿಜಿಸ್ಟ್ರಾರನಿಗೆ ಪ್ರಧಾನ ಮಾಡಿದ ಅಧಿಕಾರಗಳನ್ನು ಸಬ್‌ರಿಜಿಸ್ಟ್ರಾರರಿಗೆ ವಹಿಸಿಕೊಡಬಾರದೆಂದು ಪ್ರಕರಣ 3(3)ರ ಮೇರೆಗೆ ಭಾರತದ ರಿಜಿಸ್ಟ್ರಾರ್ ಜನರಲ್‌ರು ನಿಯಮಗಳನ್ನು ಮಾಡಿದರೆ ಅಥವಾ ನಿರ್ದೇಶನವನ್ನು ನೀಡಿದರೆ ಅದು ಅಧಿನಿಯಮಕ್ಕೆ ಅಸಂಗತವಾದುದಾಗುತ್ತದೆಯೆ?

ಸ್ಪಷ್ಟೀಕರಣ : ಅಧಿನಿಯಮದ 3(3)ನೇ ಪ್ರಕರಣದ ಮೇರೆಗೆ ಭಾರತದ ರಿಜಿಸ್ಟ್ರಾರ್ ಜನರಲ್‌ರು ಮಾಡುವ ಯಾವುದೇ ಅಂಥ ನಿಯಮ ಅಥವಾ ನೀಡುವ ನಿರ್ದೇಶನ ಪ್ರಕರಣ 7(5)ರ ಉಪಬಂಧಗಳಿಗೆ ಸುಸಂಗತವಾಗಿರುವುದಿಲ್ಲ. ಆದರೂ, ಮುಖ್ಯ ರಿಜಿಸ್ಟ್ರಾರರು ಪ್ರಕರಣ 7(5)ರ ಮೇರೆಗೆ ಸಬ್‌ರಿಜಿಸ್ಟ್ರಾರರುಗಳ ನೇಮಕಾತಿಗಾಗಿ ಅನುಮೋದನೆ ನೀಡುವಾಗ ಸಬ್‌ರಿಜಿಸ್ಟ್ರಾರುಗಳಿಗೆ ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಾರದೆಂದು ರಿಜಿಸ್ಟ್ರಾರರಿಗೆ ತಿಳಿಸತಕ್ಕದ್ದು.

9. ಪ್ರಶ್ನೆ : ಜನನ ಮತ್ತು ಮರಣಗಳ ಅಧಿನಿಯಮ, 1969ರ ಯಾವ ಪ್ರಕರಣ ಘಟನೆ ನಡೆದ ಸ್ಥಳದಲ್ಲಿಯೇ ಘಟನೆಗಳ ನೋಂದಣಿ ಮಾಡಬೇಕೆಂದು ಸೂಚಿಸುತ್ತದೆ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ಅಧಿನಿಯಮ 1969ರ 23 (2)ನೇ ಪ್ರಕರಣದೊಂದಿಗೆ 7(2) ಪ್ರಕರಣದಲ್ಲಿ ರಿಜಿಸ್ಟ್ರಾರರು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸಂಭವಿಸಿದಂಥ ಜನನ ಮತ್ತು ಮರಣಗಳ ಘಟನೆಗಳನ್ನು ಮಾತ್ರ ನೋಂದಣಿ ಮಾಡಬೇಕೆಂಬುದು ಸ್ಪಷ್ಟವಾಗಿದೆ.

10. ಪ್ರಶ್ನೆ : ಹೈದ್ರಾಬಾದಿನ ಒಂದು ರಸ್ತೆ ಅಪಘಾತದಲ್ಲಿ ಸಂಭವಿಸಿದ ಮರಣದ ಘಟನೆಯನ್ನು ಮೃತ ವ್ಯಕ್ತಿಯ ಮೃತ ದೇಹದ ಶವ ಸಂಸ್ಕಾರವನ್ನು ಗೋವಾದಲ್ಲಿ ಮಾಡಲಾಯಿತು ಎಂಬ ಕಾರಣದ ಮೇಲೆ ಅಲ್ಲಿನ ವಾಸಸ್ಥಾನದ ಪ್ರದೇಶದಲ್ಲಿ ನೋಂದಾಯಿಸಬಹುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ಅಧಿನಿಯಮ, 1969ರ ಪ್ರಕರಣ (7)2ರ ಉಪಬಂಧಗಳ ಪ್ರಕಾರ, ಜನನ/ ಮರಣಗಳನ್ನು ಘಟನೆ ಸಂಭವಿಸಿದ ಸ್ಥಳದಲ್ಲಿ ಮಾತ್ರ ನೋಂದಣಿ ಮಾಡಬೇಕು. ಘಟನೆಯು ಹೈದ್ರಾಬಾದಿನಲ್ಲಿ ಸಂಭವಿಸಿರುವುದಿಂದ ಘಟನೆ ಸಂಭವಿಸಿದ ಪ್ರದೇಶದ ಅಧಿಕಾರ ವ್ಯಾಪ್ತಿ ಹೊಂದಿರುವ ಸಂಬಂಧಪಟ್ಟ ರಿಜಿಸ್ಟ್ರಾರರು ನೋಂದಣಿ ಮಾಡಬೇಕು. ಆದರೆ, ಪ್ರಸ್ತುತ ಸಂದರ್ಭಕ್ಕೆ ಸಂಬಂಧಿಸಿದಂತೆ, ಅಂಥ ಮರಣದ ಘಟನೆಯನ್ನು ಗೋವಾದಲ್ಲಿ ನೋಂದಣಿ ಮಾಡಲು ಆಗುವುದಿಲ್ಲ. ಅಂಥ ಸಂದರ್ಭಗಳಲ್ಲಿ, ಆ ಮರಣದ ಘಟನೆಯನ್ನು

ಜನನ ಮತ್ತು ಮರಣಗಳ ಅಧಿನಿಯಮ, 1969ರ ಪ್ರಕರಣ 8(1)(ಇ) ಮೇರೆಗೆ ಠಾಣಾ ಪ್ರಭಾರದಲ್ಲಿರುವ ಪೊಲೀಸ್ ಅಧಿಕಾರಿಯು ಮರಣ ಸಂಭವಿಸಿದ ಪ್ರದೇಶದ ಜನನ ಮತ್ತು ಮರಣಗಳ ರಿಜಿಸ್ಟ್ರಾರರಿಗೆ ವರದಿ ಮಾಡಿರಬೇಕು.

**11. (i) ಪ್ರಶ್ನೆ** : ಒಬ್ಬ ವ್ಯಕ್ತಿಯ ಜನನ ಮತ್ತು ಮರಣದ ಘಟನೆಯ ರಾಷ್ಟ್ರೀಯತೆಯನ್ನು ರಿಜಿಸ್ಟ್ರಾರರು ಖಚಿತಪಡಿಸಿಕೊಳ್ಳುವುದು ಹೇಗೆ?

**ಸ್ಪಷ್ಟೀಕರಣ** : ನೋಂದಣಿ ಅಧಿಕಾರಿಯು ಭಾರತೀಯರಲ್ಲದ ತಂದೆ ತಾಯಿಯ ಪಾಸ್‌ಪೋರ್ಟ್‌ಗಳಲ್ಲಿ ನಮೂದಿಸಿರುವ ರಾಷ್ಟ್ರೀಯತೆಯನ್ನು ನೋಂದಣಿ ಮಾಡಬಹುದು. ಸಂದೇಹ ಉದ್ಭವಿಸಿದರೆ, ಇದನ್ನು ಅವನು ಅಥವಾ ಅವಳು ನೋಂದಾಯಿಸಿಕೊಂಡಿರುವ ಮತ್ತು ವಾಸಸ್ಥಳದ ಅನುಮತಿ ಪಡೆದಿರುವ ಸ್ಥಳದ ಪೊಲೀಸ್ ಅಧಿಕಾರಿಯಿಂದ ಖಚಿತಪಡಿಸಿಕೊಳ್ಳಬಹುದು. ಭಾರತದ ರಾಷ್ಟ್ರೀಯರೆಂದು ನಟನೆ ಮಾಡುವ ವಿದೇಶಿಯರ ಮತ್ತು ಸ್ಥಳೀಯ ರಿಜಿಸ್ಟ್ರಾರರಿಗೆ ಅನುಮಾನ ಉದ್ಭವಿಸುವ ಸಂಬಂಧದಲ್ಲಿ, ಸಂಬಂಧಿಸಿದ ಪ್ರದೇಶದ ಪೊಲೀಸರಿಂದ ವಿಚಾರಣೆ ಮಾಡಿಸಿ ಮಾಹಿತಿ ಪಡೆಯುವುದು ಏಕಮಾತ್ರ ಬದಲಿ ವ್ಯವಸ್ಥೆ ಆಗಿದೆ.

**(ii) ಪ್ರಶ್ನೆ** : ವರದಿಗಾರನು ಹೇಳಿದ ರಾಷ್ಟ್ರೀಯತೆಯನ್ನು ನ್ಯಾಯಾಲಯದಲ್ಲಿ ಕಾನೂನು ಮಾನ್ಯ ಸೂಕ್ಷ್ಮವಾಗಿ ತೆಗೆದುಕೊಳ್ಳಬಹುದೇ?

**ಸ್ಪಷ್ಟೀಕರಣ** : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ ಮೇರೆಗೆ ಕಾರ್ಯನಿರ್ವಹಿಸುವ ಮತ್ತು ರಾಜ್ಯ ಸರ್ಕಾರದಿಂದ ನೇಮಕಗೊಂಡಿರುವ ರಿಜಿಸ್ಟ್ರಾರರು ಅಧಿನಿಯಮದ ಪ್ರಕರಣ 7(2)ರ ಮೇರೆಗೆ ರಿಜಿಸ್ಟರಿನಲ್ಲಿ ನಮೂದಿಸಬೇಕೆಂದು ಅಗತ್ಯಪಡಿಸಲಾಗಿರುವ ಮಾಹಿತಿಯು ಜನನ ಮತ್ತು ಮರಣಗಳಿಗೆ ಸಂಬಂಧಿಸಿದ ಮಾಹಿತಿಗೆ ಮಾತ್ರ ಸೀಮಿತವಾಗಿದ್ದರೂ, ನಿಯಮಗಳ ಮೇರೆಗೆ ನಿಯಮಿಸಲಾದ ನಮೂನೆಯಲ್ಲಿರುವ ಪ್ರಕಾರ ನಮೂದು ಮಾಡಿಕೊಳ್ಳಲು ಬದ್ಧನಾಗಿರುತ್ತಾನೆ.

**(iii) ಪ್ರಶ್ನೆ** : ಜನನ ಮತ್ತು ಮರಣಗಳ ರಿಜಿಸ್ಟರಿನಲ್ಲಿ ರಾಷ್ಟ್ರೀಯತೆಗೆ ಸಂಬಂಧಿಸಿದ ವಿವರವನ್ನು ದಾಖಲು ಮಾಡುವುದು ರಿಜಿಸ್ಟ್ರಾರರಿಗೆ ಕಡ್ಡಾಯವೇ?

**ಸ್ಪಷ್ಟೀಕರಣ** : ಒಬ್ಬ ವ್ಯಕ್ತಿಯ ರಾಷ್ಟ್ರೀಯತೆಗೆ ಸಂಬಂಧಿಸಿದ ಸಾಕ್ಷ್ಯದ ಅಂಗೀಕಾರಾರ್ಹತೆಯನ್ನು ಸಾಕ್ಷ ಅಧಿನಿಯಮದ ಪ್ರಕರಣ 136ರ ಹಿನ್ನೆಲೆಯಲ್ಲಿ ನ್ಯಾಯಾಧೀಶರು ತೀರ್ಮಾನಿಸಬೇಕು. ದಾಖಲೆಯ ಸಾಕ್ಷ್ಯದ ಮೌಲ್ಯ ಆ ಸನ್ನಿವೇಶಗಳಲ್ಲಿ ಹೊರಬರುವ ಸತ್ಯವನ್ನು ಅವಲಂಬಿಸಿರುತ್ತದೆ.

ತದನುಸಾರವಾಗಿ, ದಾಖಲೆಗಳ ಸಾಕ್ಷ್ಯದ ಅಂಗೀಕಾರಾರ್ಹತೆ ಮತ್ತು ಮಾಡಿದ ನಮೂದುಗಳ ಸಾಕ್ಷ್ಯದ ಮೌಲ್ಯ ಪ್ರತಿಯೊಂದು ನಿರ್ದಿಷ್ಟ ಪ್ರಕರಣದ ವಾಸ್ತವಾಂಶಗಳನ್ನು ಅವಲಂಬಿಸಿರುತ್ತದೆ.

**12. ಪ್ರಶ್ನೆ** : ಸಮುದ್ರದ ಮೇಲೆ ಚಲಿಸುತ್ತಿರುವಾಗ ಹಡಗುಗಳಲ್ಲಿ ಸಂಭವಿಸುವ ಮರಣಗಳ ಬಗ್ಗೆ ವ್ಯಾಪಾರಿ ಹಡಗು ಅಧಿನಿಯಮ, 1948ರ ಪ್ರಕರಣ 214ರ ಮೇರೆಗೆ ವಾಹನ ನಿಲ್ಲುವ ಮುಂದಿನ ಬಂದರಿನಲ್ಲಿ ಹಡಗಿನ

ಕ್ಯಾಪ್ಟನ್‌ನು ಡೈರೆಕ್ಟರ್ ಜನರಲ್ ಶೀಪಿಂಗ್ ಅವರಿಗೆ ವರದಿ ಮಾಡಬೇಕು. ಭಾರತೀಯ ಪ್ರಜೆಗಳ ಮರಣಗಳ ಸಂಬಂಧದಲ್ಲಿ, ಹಡಗಿನ ಡೈರೆಕ್ಟರ್ ಜನರಲ್ ಅವರು ಆ ಅಧಿನಿಯಮದ ಮೇರೆಗೆ ಮೃತ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುತ್ತಿದ್ದ ರಾಜ್ಯದ ಸಮುಚಿತ ನೋಂದಣಿ ಅಧಿಕಾರಿಗೆ ಅಂಥ ವರದಿಗಳ ಒಂದು ಪ್ರಮಾಣೀಕೃತ ಪ್ರತಿಯನ್ನು ಕಳುಹಿಸತಕ್ಕದ್ದು. ಆದರೆ ಈಗ ಉದ್ಭವವಾಗಿರುವ ಪ್ರಶ್ನೆ ಎಂದರೆ ನೋಂದಣಿ ಮಾಡಲು ಸರಿಯಾದ ಕ್ರಮ ಯಾವುದು ಮತ್ತು ಅಂಥ ಘಟನೆಗಳನ್ನು ಎಲ್ಲಿ ನೋಂದಣಿ ಮಾಡಬೇಕು?

ಸ್ಪಷ್ಟೀಕರಣ : ಸಮುದ್ರದ ಮೇಲೆ ಪ್ರಯಾಣಿಸುವಾಗ ಸಂಭವಿಸುವ ಎಲ್ಲಾ ಮರಣಗಳನ್ನು ಸಾಮಾನ್ಯವಾಗಿ ಮೃತ ವ್ಯಕ್ತಿಯು ವಾಸಿಸುತ್ತಿದ್ದ ಪ್ರದೇಶದ ಸ್ಥಳೀಯ ನೋಂದಣಿ ಪ್ರದೇಶದಲ್ಲಿ ಮಾತ್ರ ನೋಂದಾಯಿಸಲಾಗುತ್ತದೆ. ಮುಖ್ಯ ರಿಜಿಸ್ಟ್ರಾರರು, ಹಡಗಿನ ಡೈರೆಕ್ಟರ್ ಜನರಲ್‌ರಿಂದ ಸ್ವೀಕರಿಸಿದ ಹಡಗುಗಳಲ್ಲಿ ಸಂಭವಿಸಿದ ಮರಣಗಳ ಪ್ರಮಾಣೀಕೃತ ನಕಲುಗಳನ್ನು ಸಂಬಂಧಪಟ್ಟ ಸ್ಥಳೀಯ ರಿಜಿಸ್ಟ್ರಾರರಿಗೆ ಕಳುಹಿಸುವ ವ್ಯವಸ್ಥೆ ಮಾಡತಕ್ಕದ್ದು. ಅವರು ಮೃತ ವ್ಯಕ್ತಿಯ ಹತ್ತಿರದ ಸಂಬಂಧಿಗಳಿಂದ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ಪಡೆದು ಮತ್ತು ಹಡಗಿನ ಡೈರೆಕ್ಟರ್ ಜನರಲ್‌ರ ಮೂಲಕ ಸ್ವೀಕರಿಸಿದ ವರದಿಯ ಬಗ್ಗೆ ವಿಶೇಷ ಷರಾವನ್ನು ಮಾಡಿದ ನಂತರ ಅದನ್ನು ನೋಂದಣಿ ಮಾಡಿಕೊಳ್ಳತಕ್ಕದ್ದು. ಹಾಗೆ ನೋಂದಣಿ ಮಾಡಿದ ನಂತರ, ಅದರ ಉದ್ಧೃತ ಭಾಗವನ್ನು ನಮೂನೆ 6 ರಲ್ಲಿ ಮಾಹಿತಿದಾರನಿಗೆ ನೀಡಬಹುದು,

## ಪ್ರಕರಣ 8:

13. ಪ್ರಶ್ನೆ : ಜನನ ಮತ್ತು ಮರಣ ಘಟನೆಗಳ ನೊಂದಣಿಗಾಗಿ ವರದಿ ಮಾಡಲು ಅರ್ಹರಾಗಿರುವ ವ್ಯಕ್ತಿಗಳನ್ನು ಅಧಿನಿಯಮದ 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿದೆ. ಆದರೆ 1, 2 ಅಥವಾ 3ನೇ ನಮೂನೆಗಳಲ್ಲಿ ಸೂಚಿಸಿರುವ ಮಾಹಿತಿದಾರನ ಹೆಸರಿನಿಂದ ಅವನು ಘಟನೆಯನ್ನು ವರದಿ ಮಾಡಲು ಅರ್ಹನೇ ಅಥವಾ ಅಲ್ಲವೇ ಎಂಬುದನ್ನು ತಿಳಿಸಲು ಸಾಧ್ಯವಿಲ್ಲ. ಘಟನೆಯ ನೋಂದಣಿಯನ್ನು ಕಾನೂನುಸಮ್ಮತಗೊಳಿಸಿರುವುದರಿಂದ ಸಂಬಂಧವನ್ನು ಸೂಚಿಸುವ ಒಂದು ಅಂಕಣವನ್ನು 1,2,3,7,8 ಮತ್ತು 9ನೇ ನಮೂನೆಗಳಲ್ಲಿ ಸೇರಿಸುವುದು ಸರಿಯಾದ ಕ್ರಮವಲ್ಲವೆ?

ಸ್ಪಷ್ಟೀಕರಣ : ವಾಸಸ್ಥಾನದಲ್ಲಿ ನಡೆಯುವ ಘಟನೆಯ ಸಂಬಂಧದಲ್ಲಿ, 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವ್ಯಕ್ತಿಯು ಸಹ ನವಜಾತ ಶಿಶುವಿನ ಜನನಕ್ಕೆ ಅಥವಾ ಸಂದರ್ಭಾನುಸಾರ ಮರಣಕ್ಕೆ ಸಂಬಂಧಿಸಿದಂತೆ ಸಂಬಂಧಿಯಾಗಿರದ ಬೇರೆ ಇತರ ವ್ಯಕ್ತಿಯ ಮೂಲಕ ಮಾಹಿತಿ ನೀಡಲು ಏರ್ಪಾಟು ಮಾಡಬಹುದು.

14. ಪ್ರಶ್ನೆ : ಹಡಗಿನಲ್ಲಿ ಸಂಭವಿಸಿದ ಮರಣದ ಮಾಹಿತಿಯನ್ನು ಹಡಗಿನ ಡೈರೆಕ್ಟರ್ ಜನರಲ್‌ರಿಂದ ವಾಸ್ತವ ಮರಣ ಸಂಭವಿಸಿದ ನಂತರ ತುಂಬಾ ವಿಳಂಬವಾಗಿ ಸ್ವೀಕರಿಸಲಾಗುತ್ತಿದೆ. ಇಂಥ ಘಟನೆಗಳನ್ನು ಅಧಿನಿಯಮದ 13ನೇ ಪ್ರಕರಣದ ಮೇರೆಗೆ ನೋಂದಾಯಿಸಬೇಕೆ?

ಸ್ಪಷ್ಟೀಕರಣ : ಹಡಗಿನ ಡೈರೆಕ್ಟರ್ ಜನರಲ್‌ರಿಂದ ಪಡೆದ ವರದಿಯ ಆಧಾರದ ಮೇಲೆ ಮಾಡುವ ಮರಣದ ನೋಂದಣಿಯು ಭೂಮಿಯ ಮೇಲೆ ಸಂಭವಿಸುವ ಘಟನೆಗಳ ರೀತಿಯಲ್ಲಿ ಅದೇ ಪ್ರವರ್ಗದಲ್ಲಿ ಬರುವುದಿಲ್ಲ. ಆದ್ದರಿಂದ 13ನೇ ಪ್ರಕರಣವು ಹಡಗಿನ ಡೈರೆಕ್ಟರ್ ಜನರಲ್‌ರು ವರದಿ ಮಾಡುವ ಘಟನೆಗಳ ನೋಂದಣಿ ಸಂದರ್ಭದಲ್ಲಿ ಅನ್ವತವಾಗುವುದಿಲ್ಲ.

15. ಪ್ರಶ್ನೆ : ಒಬ್ಬ ಪೊಲೀಸ್ ಅಧಿಕಾರಿಯು ಒಬ್ಬ ವ್ಯಕ್ತಿಯ ಮರಣದ ನೋಂದಣಿಗಾಗಿ ಪಂಚನಾಮೆ ವರದಿ ಸಹಿತ ಮರಣದ ವರದಿ ಕಳುಹಿಸಿದ್ದಾನೆ. ಆದರೆ, ಮೃತನು 9.6.1975ರ ನಂತರ ಕಾಣೆಯಾಗಿದ್ದುದರಿಂದ ಮರಣದ ಸರಿಯಾದ ದಿನಾಂಕವು ತಿಳಿದಿಲ್ಲವಾದ್ದರಿಂದ ಮತ್ತು ಮೃತ ದೇಹವು 14.6.1975ರಂದು ದೊರೆತಿರುವುದರಿಂದ ಮರಣದ ವರದಿಯಲ್ಲಿ ಮರಣದ ದಿನಾಂಕವನ್ನು 9.6.1975 ಮತ್ತು 14.6.1975ರ ನಡುವೆ ಎಂದು ಸೂಚಿಸಿದೆ. ಪಂಚನಾಮೆ ವರದಿಗೆ ಪೊಲೀಸ್ ಅಧಿಕಾರಿಯು 14.6.1975ರಂದು ಸಹಿ ಮಾಡಿದ್ದಾರೆ. ಮರಣದ ವಾಸ್ತವಿಕ ದಿನಾಂಕವನ್ನು ಸರಿಯಾಗಿ ತಿಳಿಸುವುದು ಯಾರಿಗೂ ಸಾಧ್ಯವಿಲ್ಲದಿರುವುದರಿಂದ ಈ ಸಂದರ್ಭಗಳಲ್ಲಿ ಮರಣ ಸಂಭವಿಸಿರಬಹುದಾದ ದಿನಾಂಕವನ್ನು 9.6.1975 ಮತ್ತು 14.6.1975ರ ನಡುವೆ ಎಂದು ರಿಜಿಸ್ಟರಿನಲ್ಲಿ ನಮೂದಿಸಿದರೆ ಸಾಕೆ?

ಸ್ಪಷ್ಟೀಕರಣ : ಅಂಥ ಮರಣದ ಪ್ರಕರಣವನ್ನು ವಿವರವಾದ ತನಿಖೆಗೊಳಪಡಿಸಿರುವ ಸಂಭವವಿರುತ್ತದೆ ಮತ್ತು ಅಂಥ ಪ್ರಕರಣಗಳಲ್ಲಿ, ಸಾಮಾನ್ಯವಾಗಿ ಮೃತ ದೇಹದ ಮರಣೋತ್ತರ ಪರೀಕ್ಷೆಯನ್ನು ಮಾಡಲಾಗಿರುತ್ತದೆ. ಮರಣೋತ್ತರ ಪರೀಕ್ಷೆಯ ವರದಿಯು ಆ ಪ್ರಕರಣದಲ್ಲಿ ಹೆಚ್ಚು ನಿಖರವಾದ ಸಂಭವನೀಯ ಮರಣ ದಿನಾಂಕವನ್ನು ಮತ್ತು ಮರಣದ ವಾಸ್ತವಿಕ ದಿನಾಂಕವನ್ನು ಸೂಚಿಸಬಹುದು.

16. ಪ್ರಶ್ನೆ : ಜನನ ಮರಣಗಳ ನೋಂದಣಿ ಅಧಿನಿಯಮ, 1969ರ 8(1)(ಬಿ) ಪ್ರಕರಣದ ಪ್ರಕಾರ, ಆಸ್ಪತ್ರೆಯಲ್ಲಿ ಸಂಭವಿಸಿದ ಜನನ ಮತ್ತು ಮರಣಗಳ ನೋಂದಣಿಯನ್ನು ವೈದ್ಯರುಗಳು ನೀಡುವ ಮಾಹಿತಿಯ ಆಧಾರದ ಮೇಲೆ ಮಾಡಲು ನಮೂನೆ 1,2,3 ರಲ್ಲಿ ನಿಯಮಿಸಲಾದಂತೆ ಆಸ್ಪತ್ರೆಗಳಿಗೆ ಒದಗಿಸಲಾಗಿದೆ. ಆದರೆ, ಮಾಹಿತಿಯನ್ನು ಮಾತ್ರ ಇನ್ನು ಹಳೆಯ ನಮೂನೆಗಳಲ್ಲಿಯೇ ಸ್ವೀಕರಿಸಲಾಗುತ್ತಿದೆ. ಹಳೆಯ ನಮೂನೆಗಳಲ್ಲಿ ಸ್ವೀಕರಿಸಿದ ಮಾಹಿತಿಯ ಆಧಾರದ ಮೇಲೆಯೇ ನೋಂದಣಿಯನ್ನು ಮಾಡಬಹುದೇ ಎಂಬುದನ್ನು ಸ್ಪಷ್ಟಪಡಿಸಬೇಕು.

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ಅಧಿನಿಯಮ, 1969ರ ಪ್ರಕರಣ 8(1)(ಬಿ) ಮೇರೆಗೆ, 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ರಾಜ್ಯ ಸರ್ಕಾರವು ನಿಯಮಿಸಿದ ನಮೂನೆಗಳಲ್ಲಿ ನಮೂದಿಸಬೇಕೆಂದು ಅಗತ್ಯಪಡಿಸಲಾದ ಅನೇಕ ವಿವರಗಳ ಮಾಹಿತಿಯನ್ನು ನಿಯಮಿಸಬಹುದಾದಂಥ ಸಮಯದೊಳಗಾಗಿ ತಾವು ತಿಳಿದಷ್ಟು ಮಟ್ಟಿಗೆ ಮತ್ತು ನಂಬುವಷ್ಟುಮಟ್ಟಿಗೆ ರಿಜಿಸ್ಟ್ರಾರರಿಗೆ ಮೌಖಿಕವಾಗಿ ಇಲ್ಲವೇ ಲಿಖಿತವಾಗಿ ಕೊಡುವುದು ಅಥವಾ ಕೊಡುವಂತೆ ಮಾಡುವುದು. ಆಸ್ಪತ್ರೆಯ, ಆರೋಗ್ಯಕೇಂದ್ರದ, ಪ್ರಸೂತಿ ಅಥವಾ ನರ್ಸಿಂಗ್ ಹೋಂ ಅಥವಾ ಅದೇ ಬಗೆಯ ಇತರ ಸಂಸ್ಥೆಗಳ ಪ್ರಭಾರಿ ವೈದ್ಯಾಧಿಕಾರಿಗಳ ಪ್ರಾಥಮಿಕ ಕರ್ತವ್ಯವಾಗಿರುತ್ತದೆ. ಯಾವ ಸ್ಥಳದಲ್ಲಿ ಅಂಥ ಸಂಸ್ಥೆಗಳು ಇರುತ್ತವೆಯೋ ಆ ಸ್ಥಳೀಯ ಪ್ರದೇಶದ ರಿಜಿಸ್ಟ್ರಾರದಲ್ಲಿ ಅಂಥ ಸಂಸ್ಥೆಗಳಲ್ಲಿ ಸಂಭವಿಸಿದ ಘಟನೆಗಳನ್ನು

ನೋಂದಾಯಿಸುವುದು ಅಂಥ ಸಂಸ್ಥೆಗಳ ಪ್ರಭಾರಿ ಅಧಿಕಾರಿಯ ಶಾಸನಬದ್ಧ ಕರ್ತವ್ಯವಾಗಿರತಕ್ಕದ್ದು. ಈ ಸಂಬಂಧದಲ್ಲಿ, ಸಾರ್ವಜನಿಕರ ಜವಾಬ್ದಾರಿ ಏನೂ ಇರುವುದಿಲ್ಲ. ಮೇಲಿನ ಪ್ರಕರಣದ 5ನೇ ನಿಯಮದಲ್ಲಿ ಅವಧಿ ಮತ್ತು ನಮೂನೆಗಳನ್ನು ನಿಯಮಿಸಲಾಗಿದೆ. ಸಾರ್ವಜನಿಕರಂತೆಯೆ, ಅಂತ ಸಂಸ್ಥೆಗಳ ಪ್ರಭಾರ ಅಧಿಕಾರಿಯು ಜೀವಂತ ಶಿಶುಗಳ ಜನನಗಳನ್ನು ನಮೂನೆ 1 ರಲ್ಲಿ, ಸತ್ತು ಹುಟ್ಟಿದ ಶಿಶುಗಳ ಬಗೆಗಿನ ವಿವರಗಳನ್ನು ನಮೂನೆ 3ರಲ್ಲಿ ಮತ್ತು ಮರಣಗಳನ್ನು ನಮೂನೆ 2 ರಲ್ಲಿ, ಮಾಹಿತಿಯನ್ನು ಒದಗಿಸಬೇಕು. 10ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಸೂಚಕರು ಇಂಥ ಘಟನೆಗಳನ್ನು 10ನೇ ಪ್ರಕರಣದ ಮೇರೆಗೆ ನಿಯಮಿಸಲಾದ 1,2 ಮತ್ತು 3ನೇ ನಮೂನೆಗಳಲ್ಲಿ ಅಧಿಸೂಚಿಸಬೇಕು. ಅವು ಕೆಲವು ಕೆಲವು ವಿವರಗಳನ್ನು ಮಾತ್ರ ಒಳಗೊಂಡಿದೆ. ಅಧಿಸೂಚನೆಯ ನಮೂನೆಯು ನೋಂದಣಿಗೆ ಅಗತ್ಯವಾದ ಎಲ್ಲ ವಿವರಗಳನ್ನು ನೀಡುವುದಿಲ್ಲವಾದ್ದರಿಂದ ಅದರಲ್ಲಿ ಒಳಗೊಂಡಿರುವ ಮಾಹಿತಿಯು ಆಧಾರದ ಮೇಲೆಯೇ ನೋಂದಣಿ ಮಾಡಲು ಸಾಧ್ಯವಿಲ್ಲ.

17. ಪ್ರಶ್ನೆ : ಒಂದು ಹಡಗು ಎಲ್ಲಾ ವ್ಯಕ್ತಿಗಳೊಂದಿಗೆ ಸಮುದ್ರದ ಮಧ್ಯದಲ್ಲಿ ಮುಳುಗಿ ಹೋಯಿತು. ಇದರಿಂದಾಗಿ ಮುಂದಿನ ನಿಲ್ದಾಣದಲ್ಲಿ ವಿಷಯವನ್ನು ವರದಿ ಮಾಡಲು ಯಾರೊಬ್ಬರು ಉಳಿದಿರಲಿಲ್ಲ. ಈ ಸಂದರ್ಭದಲ್ಲಿ, ಮರಣಗಳ ನೋಂದಣಿಯನ್ನು ಶೀಪಿಂಗ್ ಮಾಸ್ಟರ್, ಹಡಗು ಮತ್ತು ಸಾರಿಗೆ ಮಂತ್ರಾಲಯ, ಸರ್ಕಾರಿ ಹಡಗು ಕಚೇರಿ, ಬೆಲ್ಲಾರ್ಡ್ ಎಸ್ಟೇಟ್, ಬಾಂಬೆ-1 ಇವರು ಮೃತ ವ್ಯಕ್ತಿಯ ಪತ್ನಿಗೆ ಬರೆದ ಮತ್ತು ಅರ್ಜಿದಾರನು ಸಾಕ್ಷ್ಯವಾಗಿ ಹಾಜರುಪಡಿಸುವ ಪತ್ರದ ಆಧಾರದ ಮೇಲೆ ಮಾಡುವುದು ಅವಶ್ಯವೆಂದು ಕಾಣುತ್ತದೆ. ಆದರೆ, ಸದರಿ ಪತ್ರದಿಂದ ಮೃತನು ಜುನಾಗಡ್ ಜಿಲ್ಲೆಯ ವಾಸಿಯಾಗಿದ್ದನೆಂದು ಕಾಣುತ್ತದೆ. ಈ ದೃಷ್ಟಿಯಿಂದ ಅರ್ಜಿದಾರರು ಮರಣವನ್ನು ಡಿಯುನಲ್ಲಿ ನೋಂದಾಯಿಸಬೇಕೆಂದು ಕೇಳುವುದು ಎಷ್ಟರಮಟ್ಟಿಗೆ ಸಮಂಜಸವೆಂಬುದು ಸ್ಪಷ್ಟವಾಗುತ್ತಿಲ್ಲ?

ಸ್ಪಷ್ಟೀಕರಣ : ಈ ಅಧಿನಿಯಮದ ಉಪಬಂಧ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಹಡಿಗಿನಲ್ಲಿದ್ದ ನಾವಿಕ ಮತ್ತು ಇತರ ವ್ಯಕ್ತಿಗಳೊಂದಿಗೆ ಹಡಗಿನ ಪ್ರಭಾರಿಯು ಸಹ ಘಟನೆಯ ಬಗ್ಗೆ ವರದಿ ಮಾಡಲು ಯಾರೂ ಇಲ್ಲದ ಹಾಗೆ ಎಲ್ಲರೂ ಮುಳುಗಿ ಹೋದ ಸಂದರ್ಭದಲ್ಲಿ ಏನು ಮಾಡಬೇಕೆಂಬುದಕ್ಕೆ ಸ್ಪಷ್ಟವಾದ ಉಪಬಂಧವನ್ನು ಕಲ್ಪಿಸಿಲ್ಲ. ಹಡಗು ನಿಲ್ಲುವ ಮೊದಲನೆಯ ಸ್ಥಳದಲ್ಲಿ, 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಾಹಿತಿಯನ್ನು ನೀಡುವುದು ಹಡಗಿನ ಪ್ರಭಾರಿ ವ್ಯಕ್ತಿಯ ಕರ್ತವ್ಯವೆಂದು ನಿಯಮ 6 ಹೇಳುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಹಡಗಿನ ಪ್ರಭಾರಿಯು ಸಹ ಉಳಿದಿಲ್ಲ. ಆದ್ದರಿಂದ ಶೀಪಿಂಗ್ ಮಾಸ್ಟರ್, ಹಡಗು ಮತ್ತು ಸಾರಿಗೆ ಮಂತ್ರಾಲಯ, ಸರ್ಕಾರಿ ಹಡಗು ಕಚೇರಿ, ಬೆಲ್ಲಾರ್ಡ್ ಎಸ್ಟೇಟ್, ಬಾಂಬೆ-1 ಇವರಿಂದ ಮೃತನ ಪತ್ನಿ ಸ್ವೀಕರಿಸಿದ ಮಾಹಿತಿಯ ಆಧಾರದ ಮೇಲೆ, ಅಂಥ ಮರಣದ ಮಾಹಿತಿಯನ್ನು ಮೃತನ ಪತ್ನಿ ಅಥವಾ ಅವನ ವಾರಸುದಾರರು ಮಾತ್ರವೇ ನೀಡುವುದು ಸಾಧ್ಯವಿರುವುದರಿಂದ ಅದನ್ನು ಸರಿಯಾದ ಕ್ರಮವೆಂದು ಪರಿಗಣಿಸಬೇಕಾಗುತ್ತದೆ. 8ನೇ ಪ್ರಕರಣದ (1)ನೇ ಉಪಪ್ರಕರಣದ ಅನುಸಾರವಾಗಿ ಅಂಥ ಮಾಹಿತಿಯನ್ನು ರಾಜ್ಯದ ಸ್ಥಳೀಯ ಪ್ರದೇಶದ ರಿಜಿಸ್ಟ್ರಾರರಿಗೆ ನೀಡಬೇಕೆಂದು ಉಪಬಂಧಿಸಲಾಗಿದ್ದರೂ, ಕೇಂದ್ರ ಸರ್ಕಾರವು ಮತ್ತೊಬ್ಬ ಅಧಿಕಾರಿಯ ಪರವಾಗಿ ಅಂಥ ಅಧಿಕಾರವನ್ನು ಪ್ರತ್ಯಾಯೋಜಿಸಿದರೆ, ನೋಂದಣಿಯನ್ನು ಅವನು

ಸಹ ಮಾಡಿಕೊಳ್ಳಬಹುದು. ಆದರೆ, ಅಂಥ ನೋಂದಣಿಯನ್ನು ಸಾಮಾನ್ಯವಾಗಿ ಮೃತನು ವಾಸಿಸುತ್ತಿದ್ದ ಸ್ಥಳದಲ್ಲಿ ಮಾಡಬೇಕು.

ಈ ದೃಷ್ಟಿಯಿಂದ, ಹಡಗೇ ಸಮುದ್ರ ಮಧ್ಯದಲ್ಲಿ ಮುಳುಗಿರುವ ಇಂಥ ಸನ್ನಿವೇಶದಲ್ಲಿ ಮೃತನ ಹತ್ತಿರ ಸಂಬಂಧಿ ಮಾತ್ರ ಮರಣದ ಘಟನೆಯನ್ನು ವರದಿ ಮಾಡಬಹುದೆಂದು ನಿರೀಕ್ಷಿಸಬಹುದು ಮತ್ತು ಅದನ್ನು ಸರಿಯಾದ ಕ್ರಮವೆಂದು ಪರಿಗಣಿಸಬೇಕು. ಅಂಥ ಘಟನೆಗಳ ನೋಂದಣಿಯನ್ನು ಮೃತ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುತ್ತಿದ್ದ ಸ್ಥಳದಲ್ಲಿ ಮಾಡಬಹುದು.

ಪ್ರಸ್ತುತ ಈ ಸಂದರ್ಭದಲ್ಲಿ ನೋಂದಣಿಗಾಗಿ ಕೋರಿಕೆಯನ್ನು ಸ್ವೀಕರಿಸಿದ ಡಿಯುವಿನ ಅಪರ ಜಿಲ್ಲಾ ರಿಜಿಸ್ಟ್ರಾರರು ಗುಜರಾತ್ ರಾಜ್ಯದ ಸಂಬಂಧಿಸಿದ ಸ್ಥಳೀಯ ರಿಜಿಸ್ಟ್ರಾರರನ್ನು ಸಂಪರ್ಕಿಸುವಂತೆ ಪಕ್ಷಕಾರನಿಗೆ ಸಲಹೆ ನೀಡಬಹುದು.

**18. ಪ್ರಶ್ನೆ** : ನಗರಗಳಲ್ಲಿನ ಆಸ್ಪತ್ರೆಗಳಲ್ಲಿ ಸಂಭವಿಸುವ ಜನನಗಳನ್ನು ಆಸ್ಪತ್ರೆಗಳು ಇರುವ ಪ್ರದೇಶದ ರಿಜಿಸ್ಟ್ರಾರರು ನೋಂದಾಯಿಸಿಕೊಳ್ಳಬೇಕೇ ಅಥವಾ ಇಂಥ ಜನನಗಳನ್ನು ಸಂಬಂಧಿಸಿದ ಕುಟುಂಬಗಳು ಸಾಮಾನ್ಯವಾಗಿ ವಾಸಿಸುವ ಸ್ಥಳದಲ್ಲಿ ನೋಂದಾಯಿಸಲು ಸಾಧ್ಯವೇ ಎಂಬುದನ್ನು ಸ್ಪಷ್ಟಪಡಿಸಬೇಕು.

**ಸ್ಪಷ್ಟೀಕರಣ** : ಆಸ್ಪತ್ರೆಯಲ್ಲಿ ಸಂಭವಿಸುವ ಘಟನೆಗಳನ್ನು ಅಂಥ ಆಸ್ಪತ್ರೆಯು ಎಲ್ಲಿ ಇರುತ್ತದೋ ಆ ಪ್ರದೇಶದ ರಿಜಿಸ್ಟ್ರಾರರಲ್ಲಿ ನೋಂದಾಯಿಸಬೇಕು. ಘಟನೆ ಸಂಭವಿಸಿದ ಸ್ಥಳದಲ್ಲಿ ನೋಂದಣಿಯನ್ನು ಮಾಡುವುದರಿಂದ ಸಾಮಾನ್ಯವಾಗಿ ವಾಸ ಮಾಡುವ ಸ್ಥಳದಲ್ಲಿ ನೋಂದಾಯಿಸುವುದಿಲ್ಲ.

**19. ಪ್ರಶ್ನೆ** : ಹಡಗಿನ ಡೈರೆಕ್ಟರ್ ಜನರಲ್, ಬಾಂಬೆ ಇವರು ಒದಗಿಸಿದ ಮರಣಗಳ ವರದಿಗಳನ್ನು ಸ್ಥಳೀಯ ರಿಜಿಸ್ಟ್ರಾರಿಗೆ ಕಳುಹಿಸಬೇಕೇ ಅಥವಾ ಮುಖ್ಯ ರಿಜಿಸ್ಟ್ರಾರರ ಕಚೇರಿಯಲ್ಲಿ ಶಾಶ್ವತ ದಾಖಲೆಗಳಾಗಿ ಅವುಗಳನ್ನು ರಕ್ಷಿಸಿಡುವುದಕ್ಕಾಗಿ ಮೂಲ ವರದಿಗಳನ್ನು ಉಳಿಸಿಕೊಂಡು ಘಟನೆಗಳ ನೋಂದಣಿಗಾಗಿ ಅಂಥ ವರದಿಗಳ ನಕಲುಗಳನ್ನು ಮಾತ್ರ ರಿಜಿಸ್ಟ್ರಾರುಗಳಿಗೆ ಕಳುಹಿಸಬೇಕೇ?

**ಸ್ಪಷ್ಟೀಕರಣ** : ಹಡಗಿನ ಡೈರೆಕ್ಟರ್ ಜನರಲ್‌ರಿಂದ ಮರಣದ ವರದಿಯ ಪ್ರಮಾಣಿತ ಪ್ರತಿಗಳನ್ನು (ಮೂಲ ಪ್ರತಿಗಳಲ್ಲಿ) ಸಂಬಂಧಿಸಿದ ಸ್ಥಳೀಯ ರಿಜಿಸ್ಟ್ರಾರರುಗಳಿಗೆ ಕಳುಹಿಸಬಹುದು. ಇದರಿಂದ ರಿಜಿಸ್ಟ್ರಾರರಿಗೆ ರಿಜಿಸ್ಟರಿನ ಒಂದು ಸಂಪೂರ್ಣ ಭಾಗವಾಗಿ ಉಳಿಸಿಕೊಳ್ಳಲು ಸಹಾಯವಾಗುತ್ತದೆ. ಮುಖ್ಯ ರಿಜಿಸ್ಟ್ರಾರರ ಕಚೇರಿಯು ಅಂಥ ವರದಿಯ ಸ್ವೀಕೃತಿ ಮತ್ತು ಅವುಗಳನ್ನು ಸಂಬಂಧಿಸಿದ ರಿಜಿಸ್ಟ್ರಾರರುಗಳಿಗೆ ಕಳುಹಿಸಿಕೊಟ್ಟ ಬಗ್ಗೆ ದಾಖಲೆಯನ್ನು ಮಾತ್ರ ಇಟ್ಟುಕೊಂಡರೆ ಸಾಕು.

**20. ಪ್ರಶ್ನೆ** : ಸಾಂಸ್ಥಿಕ ಘಟನೆಗಳನ್ನು ವರದಿ ಮಾಡುವಲ್ಲಿ ಅಗುವ ವಿಳಂಬದ ಸಂದರ್ಭದಲ್ಲಿ ಅಂಥ ಘಟನೆಗಳ ನೋಂದಣಿಗಾಗಿ ಯಾವ ಪ್ರಕ್ರಿಯೆಯನ್ನು ಅನುಸರಿಸಬೇಕು?

**ಸ್ಪಷ್ಟೀಕರಣ** : ಒಂದು ಆಸ್ಪತ್ರೆ, ಆರೋಗ್ಯ ಕೇಂದ್ರ ಪ್ರಸೂತಿ ಕೇಂದ್ರ ಅಥವಾ ನರ್ಸಿಂಗ್ ಹೋಂ ಅಥವಾ ಅದೇ ಬಗೆಯ ಇತರ ಸಂಸ್ಥೆಯಲ್ಲಿ ನಡೆದ ಜನನ ಮತ್ತು ಮರಣಗಳ ಸಂದರ್ಭದಲ್ಲಿ ರಿಜಿಸ್ಟ್ರಾರರಿಗೆ ಘಟನೆಗಳ ಮಾಹಿತಿಯನ್ನು

ತಿಳಿಸುವುದು ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 8(1) (ಬಿ) ಪ್ರಕರಣದ ಮೇರೆಗೆ ವೈದ್ಯಾಧಿಕಾರಿ ಅಥವಾ ಆ ಕುರಿತು ಆತನಿಂದ ಅಧಿಕೃತನಾದ ಯಾರೇ ವ್ಯಕ್ತಿಯ ಕರ್ತವ್ಯವಾಗಿದೆ. ಆದ್ದರಿಂದ, ಸಾಂಸ್ಥಿಕ ಘಟನೆಗಳನ್ನು ವರದಿ ಮಾಡುವಲ್ಲಿ ಉಂಟಾಗುವ ಯಾವುದೇ ವಿಳಂಬಕ್ಕೆ ಸಂಬಂಧಿಸಿದ ಆಸ್ಪತ್ರೆಯ ಪ್ರಭಾರಿ ಅಧಿಕಾರಿಯು ಜವಾಬ್ದಾರನಾಗಿರುತ್ತಾನೆ ಮತ್ತು ಅಧಿನಿಯಮದ 13ನೇ ಪ್ರಕರಣದ ಮೇರೆಗೆ ಅಗತ್ಯವಿರುವ ಎಲ್ಲಾ ಔಪಚಾರಿಕ ಪ್ರಕ್ರಿಯೆಗಳನ್ನು ಪಾಲಿಸಬೇಕು. ಅಲ್ಲದೆ, ಅಂಥ ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಯನ್ನು ಅಧಿನಿಯಮದ 23 ಮತ್ತು 24ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ದಂಡಕ್ಕೆ ಗುರಿಪಡಿಸಲಾಗುವುದು.

**21. ಪ್ರಶ್ನೆ** : ಒಬ್ಬ ವ್ಯಕ್ತಿ ದಿನಾಂಕ 26.6.76 ಮತ್ತು 2.7.76ರ ನಡುವಿನ ಅವಧಿಯಲ್ಲಿ ನೇಣು ಹಾಕಿಕೊಳ್ಳುವುದರ ಮೂಲಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಶವ ಪಂಚಾನಾಮೆ ಮಾಡುವ ಅಧಿಕಾರಿಯು ಮೃತ ವ್ಯಕ್ತಿಯನ್ನು 18.7.76ರಂದು ಮಾತ್ರವೇ ಗುರ್ತಿಸಲಾಯಿತು ಎಂದು ವರದಿ ಮಾಡಿದ್ದಾನೆ. ಅವನ ಮರಣದ ನೋಂದಣಿ ಮಾಡುವಾಗ ರಿಜಿಸ್ಟ್ರಾರರು ನಿಯಮಿಸಲಾದ ವಿಳಂಬ ಶುಲ್ಕವನ್ನು ಸಂದಾಯ ಮಾಡುವಂತೆ ಒತ್ತಾಯಿಸುವರು. ಇಂಥ ಪ್ರಕರಣಗಳಲ್ಲಿ ವಿಳಂಬ ಶುಲ್ಕವನ್ನು ವಸೂಲಿ ಮಾಡುವುದು ಸಮರ್ಥನೀಯವೇ?

**ಸ್ಪಷ್ಟೀಕರಣ** : ಖಚಿತವಾದ ದಿನಾಂಕ ಗೊತ್ತಿರದಿದ್ದರೆ ವರದಿ ಮಾಡುವಲ್ಲಿ ವಿಳಂಬವಾಗಿದೆಯೆಂಬ ನಿರ್ಧಾರಕ್ಕೆ ಬರುವುದು ಸರಿಯಲ್ಲ. ಸರ್ಕಾರದ ಪೊಲೀಸ್ ಇಲಾಖೆಯ ಒಬ್ಬ ಅಧಿಕಾರಿಯು ವರದಿ ಮಾಡಿರುವುದರಿಂದ ಸಂಬಂಧಿಸಿದ ರಿಜಿಸ್ಟ್ರಾರರು ವಿಷಯದ ಬಗೆಗಿರುವ ಕಾನೂನನ್ನು ನಿಖರವಾಗಿ ವ್ಯಾಖ್ಯಾನ ಮಾಡಬಾರದೆಂದು ಸಲಹೆ ನೀಡಬಹುದು ಮತ್ತು ಘಟನೆಯನ್ನು ಷರಾಗಳ ಅಂಕಣದಲ್ಲಿ ಸೂಕ್ತ ಷರಾಗಳೊಂದಿಗೆ ನೋಂದಾಯಿಸಿಕೊಳ್ಳಬೇಕು.

**22. ಪ್ರಶ್ನೆ** : (i) ಸಂಸ್ಥೆಗಳಿಂದ (ii) ಪೊಲೀಸ್ ಅಧಿಕಾರಿಗಳಿಂದ ವರದಿಯಾಗುವ ವಿಳಂಬ ಘಟನೆಗಳಿಗಾಗಿ ವಿಳಂಬ ಶುಲ್ಕವನ್ನು ಸಂಗ್ರಹಿಸುವುದು ಅವಶ್ಯವೇ? ಅಂಥ ಪ್ರಕರಣದಲ್ಲಿ ಯಾರಿಂದ ಶುಲ್ಕವನ್ನು ವಸೂಲು ಮಾಡಬೇಕು?

**ಸ್ಪಷ್ಟೀಕರಣ** : ಒಂದು ಸಂಸ್ಥೆಯ ಅಥವಾ ಪೊಲೀಸ್ ಠಾಣೆಯ ಅಥವಾ ಸೈನಿಕ ನಿವಾಸದ ಯಾರೇ ಪ್ರಭಾರಿ ಅಧಿಕಾರಿಯು, ಅಧಿನಿಯಮದ 8ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಿದಂತೆ ಘಟನೆಯನ್ನು ವರದಿ ಮಾಡದಿದ್ದರೆ, ಅವನು ವಿಳಂಬ ಶುಲ್ಕವನ್ನು ಸಂದಾಯ ಮಾಡಲು ಮತ್ತು ಅಧಿನಿಯಮದ 23ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಉಪಬಂಧಿಸಿದಂತೆ ದಂಡ ನೀಡಲು ಸಹ ಬದ್ಧನಾಗಿರತಕ್ಕದ್ದು.

**23. ಪ್ರಶ್ನೆ** : ಕೆಲವು ಸಂಸ್ಥೆಗಳು ಜನನ ಮತ್ತು ಮರಣಗಳನ್ನು ವರದಿ ಮಾಡಬೇಕಾದ ಅವಧಿಯ ಅಂತಿಮ ದಿನದಂದು ವರದಿ ಮಾಡುತ್ತವೆ. ಆಗ ಸ್ವಾಭಾವಿಕವಾಗಿ ರಿಜಿಸ್ಟ್ರಾರರಿಗೆ ಅದೇ ದಿನ ಎಲ್ಲಾ ಘಟನೆಗಳನ್ನು ನೋಂದಾಯಿಸಿಕೊಳ್ಳುವುದು ಕಷ್ಟವಾಗುತ್ತದೆ. ಮರುದಿನ ಅಥವಾ ಮುಂದಿನ ಕೆಲವು ದಿನಗಳು ರಜಾದಿನಗಳಾದರೆ, ನೋಂದಾಣಿ ಮಾಡುವುದು ಇನ್ನೂ ವಿಳಂಬವಾಗುತ್ತದೆ. ಇಂಥ ಸಂದರ್ಭಗಳಲ್ಲಿ ವಿಳಂಬ ಶುಲ್ಕವನ್ನು ಸಂದಾಯ ಮಾಡಬೇಕೆ?

**ಸ್ಪಷ್ಟೀಕರಣ** : ನಿಯಮಿಸಿದ ಅವಧಿಯೊಳಗಾಗಿ ಘಟನೆಗಳನ್ನು ವರದಿ ಮಾಡಿರುವುದರಿಂದ ಇಂಥ ಸಂದರ್ಭಗಳಲ್ಲಿ ವಿಳಂಬ ಶುಲ್ಕದ ಪ್ರಶ್ನೆ ಉದ್ಭವವಾಗುವುದಿಲ್ಲ. ನೋಂದಣಿಯನ್ನು ರಜಾ ದಿನಗಳ ನಂತರ ಮುಂದಿನ ಕೆಲಸದ ದಿನದಂದು ಮಾಡಿಕೊಳ್ಳಬೇಕು.

24. ಪ್ರಶ್ನೆ : ಶಾಸನದಲ್ಲಿ ನ್ಯಾಯಸಮ್ಮತವಲ್ಲದ ಜನನಗಳ ನೋಂದಣಿಗಾಗಿ ಯಾವುದೇ ನಿರ್ದಿಷ್ಟ ಉಪಬಂಧಗಳಿಲ್ಲದಿರುವುದರಿಂದ, ಸ್ಥಳೀಯ ರಿಜಿಸ್ಟ್ರಾರರು ನ್ಯಾಯಸಮ್ಮತವಾದ ಜನನಗಳ ಸಂದರ್ಭದಲ್ಲಿ ಅನುಸರಿಸುವ ಅದೇ ವಿಧದ ಪ್ರಕ್ರಿಯೆಯನ್ನು ಅನುಸರಿಸಬೇಕೆಂದು ಪೂರ್ವಭಾವನೆ ಮಾಡಬಹುದೇ? ಜನನ ಮತ್ತು ಮರಣಗಳ ಪಶ್ಚಿಮ ಬಂಗಾಲ ನೋಂದಣಿ ನಿಯಮಗಳು, 1972ರ ನಮೂನೆ ನಂ.11 (ಜನನ ರಿಜಿಸ್ಟರ್)ರಲ್ಲಿನ ಅಡಿ ಟಿಪ್ಪಣಿ 1ಅನ್ನು ಕಾನೂನಿನ ಪರಿಣಾಮವನ್ನು ಹೊಂದಿದೆಯೇ?

ಅಧಿನಿಯಮದ 7(2)ನೇ ಪ್ರಕರಣವು ಒಬ್ಬ ರಿಜಿಸ್ಟ್ರಾರರು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸಂಭವಿಸುವ ಪ್ರತಿಯೊಂದು ಜನನ ಮತ್ತು ಮರಣವನ್ನು ತಾನೇ ಎಚ್ಚರಿಕೆಯಿಂದ ತಿಳಿದುಕೊಳ್ಳುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಅಗತ್ಯ ಪಡಿಸುತ್ತದೆ. ನ್ಯಾಯಸಮ್ಮತವಲ್ಲದ ಜನನಗಳ ಮತ್ತು ಅನುಮಾನಾಸ್ಪದ ಮರಣಗಳ ನೋಂದಣಿಯ ಸಂದರ್ಭದಲ್ಲಿ ವಿಶೇಷ ಮುನ್ನೆಚ್ಚರಿಕೆಗಳನ್ನು ವಹಿಸಲು ಕಾರಣಗಳಿರಬಹುದು. ದಯವಿಟ್ಟು ಮಾರ್ಗಸೂಚಿಗಳನ್ನು ಒದಗಿಸಿ.

ಸ್ಪಷ್ಟೀಕರಣ : ನ್ಯಾಯಸಮ್ಮತವಾದ ಮತ್ತು ನ್ಯಾಯಸಮ್ಮತವಲ್ಲದ ಜನನಗಳ ನೋಂದಣಿ ಪ್ರಕ್ರಿಯೆಗಳಲ್ಲಿ ವ್ಯತ್ಯಾಸವಿಲ್ಲ, ನ್ಯಾಯಸಮ್ಮತವಲ್ಲದ ಜನನವೆಂದು ನಮೂದು ಮಾಡಬೇಕಾದ ಸಂದರ್ಭದಲ್ಲಿ "ನ್ಯಾಯಸಮ್ಮತವಲ್ಲದ" ಎಂಬ ಪದವನ್ನು ಸಹ ರಿಜಿಸ್ಟರಿನ ಷರಾ ಅಂಕಣದಲ್ಲಿ ನಮೂದಿಸಬೇಕು. ಆದರೂ, ದಂಪತಿಗಳಿಬ್ಬರೂ ಸೇರಿ ಸಂಯುಕ್ತವಾಗಿ ಕೋರಿಕೆ ಸಲ್ಲಿಸಿದ ಹೊರತು ಯಾರೇ ವ್ಯಕ್ತಿಯ ಹೆಸರನ್ನು ತಂದೆ ಎಂದು ನಮೂದಿಸಬಾರದು. ರಾಜ್ಯ ನಿಯಮಗಳ ನಮೂನೆ ನಂ.7 ರಲ್ಲಿ ಇದಕ್ಕೆ ಸಂಬಂಧಿಸಿದಂತೆ ಇರುವ ಅಡಿ ಟಿಪ್ಪಣಿಗಳು ಅಂಥ ಪ್ರಕರಣಗಳಲ್ಲಿ ನೋಂದಣಿಗಾಗಿ ರಿಜಿಸ್ಟ್ರಾರಿಗೆ ಮಾರ್ಗಸೂಚಿಗಳಾಗಿರುತ್ತವೆ. ನಮೂನೆ 7 ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಭಾಗವಾಗಿರುವುದರಿಂದ ಅಡಿ ಟಿಪ್ಪಣಿಗಳನ್ನು ಕಾನೂನೆಂದು ಪರಿಗಣಿಸಬೇಕು.

ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸಂಭವಿಸುವ ಜನನಗಳ/ಮರಣಗಳ ಘಟನೆಗಳನ್ನು ತಾನೆ ತಿಳಿದುಕೊಳ್ಳುವುದಕ್ಕಾಗಿ ರಿಜಿಸ್ಟ್ರಾರರು ಯಾರೇ ವ್ಯಕ್ತಿಯನ್ನು ಅಂಥ ವ್ಯಕ್ತಿಯ ಸ್ಥಳೀಯ ಪ್ರದೇಶದೊಳಗೆ ಸಂಭವಿಸುವ ಜನನ ಅಥವಾ ಮರಣದ ಸಂಬಂಧದಲ್ಲಿ ತನಗೆ ತಿಳಿದಷ್ಟು ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸಬಹುದು ಮತ್ತು ಆ ವ್ಯಕ್ತಿಯು ಅಧಿನಿಯಮದ 21ನೇ ಪ್ರಕರಣದ ಮೇರೆಗೆ ಉಪಬಂಧಿಸಿದಂತೆ ಅಗತ್ಯತೆಯನ್ನು ಪಾಲಿಸಲು ಬದ್ಧನಾಗಿರತಕ್ಕದ್ದು. ನ್ಯಾಯಸಮ್ಮತವಲ್ಲದ ಜನನಗಳ ಮತ್ತು ಅನುಮಾನಾಸ್ಪದ ಮರಣಗಳ ನೋಂದಣಿಯನ್ನು ಮಾಡುವಾಗ ರಿಜಿಸ್ಟ್ರಾರುಗಳ ರಕ್ಷಣೆಯನ್ನು ಸುನಿಶ್ಚಿತಗೊಳಿಸುವ ಸಮಸ್ಯೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಅಧಿನಿಯಮದ 26ನೇ ಪ್ರಕರಣದ ಮೇರೆಗೆ ಒಬ್ಬ ರಿಜಿಸ್ಟ್ರಾರನು ಭಾರತ ದಂಡ ಸಂಹಿತೆ, 1860ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಒಬ್ಬ ಸಾರ್ವಜನಿಕ ನೌಕರ ಮತ್ತು ಜನನ ಮತ್ತು ಮರಣಗಳ ಅಧಿನಿಯಮ, 1969ರ 28(1)ನೇ ಪ್ರಕರಣದ ಮೇರೆಗೆ ಉಪಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಯಾವುದೇ ಕರ್ತವ್ಯಗಳನ್ನು ನಿರ್ವಹಿಸುವಾಗ ಅಥವಾ ಪಾಲಿಸುವಾಗ ಅವರ ವಿರುದ್ಧ ಯಾವುದೇ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

25\. ಪ್ರಶ್ನೆ : ಕೇರಳ ಜನನ ಮತ್ತು ಮರಣಗಳ ನಿಯಮಗಳು, 1970ರ ನೋಂದಣಿ ನಿಯಮ 6(2)ರ ಅನುಸಾರವಾಗಿ 8ನೇ ಪ್ರಕರಣದ(1)ನೇ ಉಪಪ್ರಕರಣದ (ಎ) ಯಿಂದ (ಇ)ವರೆಗಿನ ಖಂಡಗಳ ವ್ಯಾಪ್ತಿಯಲ್ಲಿ ಬರದ ಮರಣಗಳನ್ನು ಪಂಚನಾಮೆ ಮಾಡಿರುವ ಸಂದರ್ಭದಲ್ಲಿ ಪಂಚನಾಮೆ ನಡೆಸಿದ ಅಧಿಕಾರಿಯು ಸಂಬಂಧಪಟ್ಟ ರಿಜಿಸ್ಟ್ರಾರರಿಗೆ ಮಾಹಿತಿ ನೀಡತಕ್ಕದ್ದು. ಈಗ ಉದ್ಭವವಾಗಿರುವ ಅನುಮಾನವೆಂದರೆ ಒಂದು ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಸಂದರ್ಭದಲ್ಲಿ ಪಂಚನಾಮೆ ಮಾಡಿದ ಅಧಿಕಾರಿಗೆ ಘಟನೆಯ ಬಗ್ಗೆ ವರದಿ ಮಾಡುವಂತೆ ತಿಳಿಸಲಾಗಿದೆ. ಆದರೆ, ನಿಯಮ 6(2)ರ ದೃಷ್ಟಿಯಿಂದ ಘಟನೆ ನಡೆದಿರುವುದು ಮನೆಯಲ್ಲಾದ್ದರಿಂದ, ಇದನ್ನು ಪ್ರಕರಣ 8(1) (ಎ)ರಲ್ಲಿ ಸೂಚಿಸಿರುವ ವ್ಯಕ್ತಿಯು ವರದಿ ಮಾಡಬೇಕು. ತನ್ನಿಂದ ಅಲ್ಲ ಎಂದು ಉತ್ತರ ನೀಡಿದ್ದಾನೆ. ದಯವಿಟ್ಟು ಅವಶ್ಯವಿರುವ ಸ್ಪಷ್ಟೀಕರಣವನ್ನು ಒದಗಿಸಿ.

ಸ್ಪಷ್ಟೀಕರಣ : ಈ ಪ್ರಕರಣದಲ್ಲಿ, ಮರಣದ ವರದಿ ನೀಡುವುದು ಮನೆಯ ಮುಖ್ಯಸ್ಥನ ಕರ್ತವ್ಯವಾಗಿರುತ್ತದೆ. ಕೇರಳ ಜನನ ಮತ್ತು ಮರಣಗಳ ನಿಯಮಗಳು, 1970ರ ನೋಂದಣಿ ನಿಯಮ 6(2) ಇಲ್ಲಿ ಅನ್ವಯವಾಗುವುದಿಲ್ಲ. ಆದರೂ, ಪಂಚನಾಮೆ ನಡೆಸಿದ ಅಧಿಕಾರಿಯು ರಿಜಿಸ್ಟ್ರಾರರಿಗೆ ರಾಜ್ಯ ನಿಯಮಗಳ 7ನೇ ನಿಯಮದಲ್ಲಿ ಗೊತ್ತುಪಡಿಸಿರುವ ರೀತಿಯಲ್ಲಿಯೇ ಅಧಿನಿಯಮದ 10(1)(iii)ನೇ ಪ್ರಕರಣದ ಮೇರೆಗೆ ಮರಣವನ್ನು ಅಧಿಸೂಚಿಸುವಂತೆ ತಿಳಿಸಬಹುದು.

26\. ಪ್ರಶ್ನೆ : ಮನೆಯ ಮುಖ್ಯಸ್ಥನು ನಿಯಮಿಸಿದ ನಮೂನೆಯಲ್ಲಿ ಜೀವಸಂಬಂಧವಾದ ಘಟನೆಗಳನ್ನು ಅಂಚೆ ಮೂಲಕ ಸ್ಥಳೀಯ ರಿಜಿಸ್ಟ್ರಾರರಿಗೆ ತಿಳಿಸಲು ಅವಕಾಶವಿದೆಯೇ?

ಸ್ಪಷ್ಟೀಕರಣ : ಅದು ಜೀವಂತ ಜನನವೇ, ಸತ್ತು ಹುಟ್ಟಿದ್ದೆ ಅಥವಾ ಮರಣವೇ ಎಂಬುದನ್ನು ಅವಲಂಬಿಸಿ ಸಂಬಂಧಪಟ್ಟ ವಿವರಗಳು 1, 2 ಮತ್ತು 3ರಲ್ಲಿ ನಿಯಮಿಸಿದ ವರದಿ ಮಾಡುವ ನಮೂನೆಗಳ ಪ್ರಕಾರ ಇದ್ದಲ್ಲಿ ಅವುಗಳನ್ನು ಅಂಚೆ ಮೂಲಕ ರಿಜಿಸ್ಟ್ರಾರರಿಗೆ ಜೀವಸಂಬಂಧವಾದ ಘಟನೆಗಳ ವಿವರಗಳನ್ನು ಸಲ್ಲಿಸಲು ಮನೆಯ ಮುಖ್ಯಸ್ಥನಿಗೆ ಯಾವುದೇ ಆಕ್ಷೇಪಣೆ ಇರುವುದಿಲ್ಲ. ಈ ಸಂಬಂಧವಾಗಿ, ಅಂಥ ಪ್ರಕರಣಗಳಲ್ಲಿ, ಮತ್ತು ವರದಿ ಮಾಡುವ ನಮೂನೆ ಸಂದರ್ಭಾನುಸಾರ 1, 2 ಮತ್ತು 3ನ್ನು ಆಧರಿಸಿ ನೋಂದಣಿ ಮಾಡಲಾಗಿದೆಯೆಂದು ಅಂಚೆ ವರದಿಗಳನ್ನು ರಿಜಿಸ್ಟರುಗಳ ಷರಾ ಅಂಕಣಗಳಲ್ಲಿ ಒಂದು ಟಿಪ್ಪಣಿ ಮಾಡಬೇಕೆಂದು ಮತ್ತು ರಿಜಿಸ್ಟರಿನ ಒಂದು ಸಂಯೋಜಿತ ಭಾಗವಾಗಿ ಸಂರಕ್ಷಿಸಬೇಕೆಂದು ಸೂಚಿಸಲಾಗಿದೆ.

27\. ಪ್ರಶ್ನೆ : ಸಮುದ್ರದಲ್ಲಿ ಕಾಣೆಯಾಗಿದ್ದಾನೆಂದು ವರದಿಯಾಗಿರುವ ಒಬ್ಬ ಮೀನುಗಾರರನ್ನು ಮರಣ ಹೊಂದಿದ್ದಾನೆಂದು ಪರಿಗಣಿಸಬಹುದೆ ಮತ್ತು ಹಾಗಿದ್ದರೆ, ಅಂಥ ಪ್ರಕರಣಗಳಲ್ಲಿ ನೋಂದಣಿ ಮಾಡಿಕೊಳ್ಳುವುದು ಹೇಗೆ?

ಸ್ಪಷ್ಟೀಕರಣ : ಮೀನುಗಾರನು ನಿಜವಾಗಿಯೂ ಸಮುದ್ರದಲ್ಲಿ ಮುಳುಗಿ ಹೋದನೆ ಅಥವಾ ಇಲ್ಲವೇ ಎಂಬುದು ವಾಸ್ತವಾಂಶಕ್ಕೆ ಸಂಬಂಧಿಸಿದ ಪ್ರಶ್ನೆ. ಸಮುದ್ರದಲ್ಲಿ ಕಾಣೆಯಾಗಿರುವ ವ್ಯಕ್ತಿಗಳು ನಿಜವಾಗಿಯೂ ಮುಳುಗಿ ಹೋಗಿದ್ದಾರೆ ಎಂಬುದನ್ನು ಸಾಬೀತುಪಡಿಸಲು ಸಾಕಷ್ಟು ಸಾಕ್ಷ್ಯಾಧಾರಗಳಿದ್ದರೆ, ಆ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಅವರು ಮುಳುಗಿ ಸತ್ತಿರಬಹುದೆಂಬ ತೀರ್ಮಾನಕ್ಕೆ ಬರಬಹುದು. ಮರಣದ ಊಹೆಯ ಬಗ್ಗೆ ಅಂಥ ಪೂರ್ವಭಾವನೆಯು ಕಾಣೆಯಾದ ದಿನಾಂಕದಿಂದ 7 ವರ್ಷಗಳ ನಂತರ ಉದ್ಭವವಾಗುತ್ತದೆ.

28. ಪ್ರಶ್ನೆ : ಈ ಮುಂದಿನ ಸನ್ನಿವೇಶಗಳಲ್ಲಿ ಜನನ/ಮರಣಗಳ ಘಟನೆಯನ್ನು ವರದಿ ಮಾಡಲು ಯಾರು ಜವಾಬ್ದಾರರು?

(i) ಅವಳಿ ಪ್ರಸವದ ಪ್ರಕರಣವನ್ನು ಆಸ್ಪತ್ರೆಗೆ ಸೇರಿಸಿಕೊಂಡಿದ್ದು ಮೊದಲ ಶಿಶು ಆಸ್ಪತ್ರೆಯ ಹೊರಗೆ ಮತ್ತು ಎರಡನೆಯ ಶಿಶು ಸ್ವಲ್ಪ ಹೊತ್ತಿನ ನಂತರ ಆಸ್ಪತ್ರೆಯಲ್ಲಿ ಹುಟ್ಟಿದರೆ.

(ii) ಮೊದಲ ಶಿಶು ಆಸ್ಪತ್ರೆಯ ಹೊರಗಡೆ ಜನಿಸಿ ಅದನ್ನು ತಾಯಿಯ ಜೊತೆಯಲ್ಲಿ ಆಸ್ಪತ್ರೆಗೆ ತಂದಿರದಿದ್ದು ಅನಂತರ ಅದು ಸತ್ತು ಹೋದರೆ.

(iii) ಪ್ರಸವವು ಆಸ್ಪತ್ರೆಯ ಹೊರಗಡೆ ನಡೆದು ಮತ್ತು ನಂತರ ತಾಯಿಯು ಬಾಣಂತಿಯ ತೊಂದರೆಗಳಿಂದಾಗಿ ಹೊಸದಾಗಿ ಜನಿಸಿದ ಶಿಶುವಿನೊಂದಿಗೆ ಆಸ್ಪತ್ರೆಗೆ ಸೇರಿದರೆ.

(iv) ಮರಣ ಹೊಂದಿದ ರೋಗಿಯನ್ನು ಆಸ್ಪತ್ರೆಗೆ ತಂದರೆ.

ಸ್ಪಷ್ಟೀಕರಣ : ಜನನ/ಮರಣಗಳ ಈ ಎಲ್ಲಾ ನಾಲ್ಕು ಸನ್ನಿವೇಶಗಳು ಆಸ್ಪತ್ರೆಯ ಹೊರಗಡೆ ಘಟಿಸಿವೆ. ಆದ್ದರಿಂದ ಘಟನೆಗಳ ವರದಿಯನ್ನು ನೋಂದಣಿ ಅಧಿಕಾರಿಗಳಿಗೆ ವರದಿ ಮಾಡುವುದು ಆಸ್ಪತ್ರೆಯ ಅಧಿಕಾರಿಗಳ ಜವಾಬ್ದಾರಿಯಾಗಿರುವುದಿಲ್ಲ. ಆದರೂ, ಮೇಲೆ ಹೇಳಿದ (i)ರ ಪ್ರಕರಣದಲ್ಲಿ ಎರಡನೇ ಶಿಶುವಿನ ಬಗ್ಗೆ ವರದಿ ಮಾಡುವಾಗ ಇವು ಅವಳಿಗಳಾಗಿದ್ದವೆಂದು ಮತ್ತು ಮೊದಲ ಶಿಶು ಆಸ್ಪತ್ರೆಯ ಹೊರಗಡೆ ಜನನವಾಯಿತೆಂದು ಷರಾ ಅಂಕಣದಲ್ಲಿ ನಮೂದಿಸಬೇಕು.

29. ಪ್ರಶ್ನೆ : ಬಿಟ್ಟುಹೋದ ಶಿಶುವಿನ ಸಂಬಂಧದಲ್ಲಿನ ಜನನದ ಘಟನೆಯನ್ನು ನೋಂದಾಯಿಸಲು ಅನುಸರಿಸಬೇಕಾದ ಪ್ರಕ್ರಿಯೆ ಯಾವುದು ಮತ್ತು ಅಂಥ ಶಿಶುವಿನ ತಂದೆ ತಾಯಿಗಳ ಹೆಸರನ್ನು ಸಂಬಂಧಿಸಿದ ಅಂಕಣದಲ್ಲಿ ನಮೂದಿಸಬೇಕೆ?

ಸ್ಪಷ್ಟೀಕರಣ : ಬಿಟ್ಟುಹೋದ ಶಿಶುವಿನ ಜನನದ ನೋಂದಣಿಯನ್ನು ಅಧಿನಿಯಮದ ಪ್ರಕರಣ 8(1) (ಇ)ಯಲ್ಲಿ ವಿವರಿಸಿರುವ ಪ್ರಕ್ರಿಯೆಯ ಅನುಸಾರವಾಗಿ ಮಾಡಬೇಕು. ಅಂಥ ಶಿಶುವಿನ ತಂದೆ ತಾಯಿಗಳಿಗೆ ಸಂಬಂಧಿಸಿದಂತೆ ಜನನಗಳ ರಿಜಿಸ್ಟರಿನಲ್ಲಿ "ಗೊತ್ತಿಲ್ಲ" ಎಂಬುದಾಗಿ ಅಥವಾ ಇರುವ ವಾಸ್ತವ ಸ್ಥಿತಿಯನ್ನು ನಮೂದು ಮಾಡಬೇಕು. ದತ್ತು ತೆಗೆದುಕೊಂಡ ತಂದೆ ತಾಯಿಯರ ಹೆಸರುಗಳನ್ನು ವಾಸ್ತವ ತಂದೆ ತಾಯಿಯರ (ಅಂದರೆ ತಂದೆ ಮತ್ತು ತಾಯಿ) ಸ್ಥಳದಲ್ಲಿ ನಮೂದಿಸಬಾರದು.

## ಪ್ರಕರಣ 12:

30. ಪ್ರಶ್ನೆ : ಕಾಣೆಯಾಗಿರುವ ಮತ್ತು ಏಳು ವರ್ಷಗಳಿಂದ ಆ ವ್ಯಕ್ತಿಯು ಪತ್ತೆಯಾಗದಿರುವ ಸಂಬಂಧದಲ್ಲಿ ಮರಣ ಪ್ರಮಾಣ ಪತ್ರವನ್ನು ನೀಡಬಹುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ಅಧಿನಿಯಮ, 1969ರ 2(ಬಿ) ಪ್ರಕರಣದ ಮೇರೆಗೆ ಮರಣ ಎಂದರೆ ಸಜೀವ ಜನನವಾದ ನಂತರ ಜೀವವಿರುವ ಬಗೆಗಿನ ಎಲ್ಲ ಲಕ್ಷಣಗಳ ಶಾಶ್ವತ ನಾಶ ಎಂದು ಅರ್ಥ. ಈ ಅಧಿನಿಯಮದುದ್ದೇಶಗಳಿಗಾಗಿ ಅಧಿನಿಯಮದಲ್ಲಿ ವಿವರಿಸಿರುವಂತೆ "ಮರಣ"ವು ಸಂಭವಿಸಿದೆಯೇ ಎಂಬುದು

ಪ್ರತಿ ಪ್ರಕರಣದ ಸಂಗತಿ ಪ್ರಶ್ನೆಯಾಗಿದೆ. ಮರಣದ ರಿಜಿಸ್ಟರಿನ ಈ ಅಂಕಣಗಳಲ್ಲಿ "ರುಜುವಾತಿನ ಭಾರ"ದ ಆಧಾರದ ಮೇಲೆ ಮಾತ್ರವೇ ಭರ್ತಿ ಮಾಡಬೇಕೆಂದು ಸಲಹೆ ನೀಡುವುದು ಕಷ್ಟಕರವಾಗುತ್ತದೆ.

**31. ಪ್ರಶ್ನೆ** : ಆಸ್ಪತ್ರೆಗಳಲ್ಲಿ ಸಂಭವಿಸುವ ಮರಣದ ಮೆಡಿಕೋ–ಲೀಗಲ್ ಪ್ರಕರಣಗಳಲ್ಲಿ ನೋಂದಣಿಗಾಗಿ ಅನುಸರಿಸಬೇಕಾದ ಕ್ರಮ ಯಾವುದು?

**ಸ್ಪಷ್ಟೀಕರಣ** : ಮೆಡಿಕೋ–ಲೀಗಲ್ ಪ್ರಕರಣಗಳ ಸಂದರ್ಭದಲ್ಲಿ, ಆಸ್ಪತ್ರೆಯ ಅಧಿಕಾರಿಗಳು/ವೈದ್ಯರು ಸಂಬಂಧಪಟ್ಟ ರಿಜಿಸ್ಟ್ರಾರರಿಗೆ, ಪೊಲೀಸ್ ಅಧಿಕಾರಿಗಳಿಂದ ಅಗತ್ಯವಿರುವ ಅಗತ್ಯಪಡಿಸಿದ ಪ್ರಮಾಣ ಪತ್ರವನ್ನು ಪಡೆಯಲು ಅನುಸರಣ ಕ್ರಮಕ್ಕಾಗಿ ಅದರ ವಿವರಗಳನ್ನು ತಿಳಿಸಬೇಕು. ಇದರ ಉದ್ದೇಶವೆಂದರೆ ಮಾಹಿತಿಯು ತಲುಪಿದ ಮೇಲೆ ಸ್ಥಳೀಯ ರಿಜಿಸ್ಟ್ರಾರರು ಮರಣದ ಕಾರಣದ ಅಂಕಣವನ್ನು ಭರ್ತಿ ಮಾಡದೆ ಷರಾಗಳ ಅಂಕಣದಲ್ಲಿ "ಪಂಚನಾಮೆ ವರದಿಯನ್ನು ಎದುರು ನೋಡಲಾಗಿದೆ" ಎಂಬುದಾಗಿ ಷರಾ ಬರೆದು ಮರಣದ ಘಟನೆಯನ್ನು ನೋಂದಾಯಿಸಬಹುದು. ಮರಣದ ಕಾರಣವನ್ನು ಪಂಚನಾಮೆ ವರದಿಯನ್ನು ಸ್ವೀಕರಿಸಿದ ಮೇಲೆ ಭರ್ತಿ ಮಾಡಬಹುದು.

**32. ಪ್ರಶ್ನೆ** : 12ನೇ ಪ್ರಕರಣದ ಪ್ರಕಾರ, ರಿಜಿಸ್ಟ್ರಾರರು ಜನನ ಅಥವಾ ಮರಣದ ನೋಂದಣಿ ಕೆಲಸವನ್ನು ಪೂರ್ಣಗೊಳಿಸಿದ ಕೂಡಲೇ 8ನೇ ಅಥವಾ 9ನೇ ಪ್ರಕರಣದ ಮೇರೆಗೆ ಮಾಹಿತಿ ಕೊಟ್ಟ ವ್ಯಕ್ತಿಗೆ ಜನನ ಅಥವಾ ಮರಣಗಳಿಗೆ ಸಂಬಂಧಿಸಿದ ರಿಜಿಸ್ಟರಿನಿಂದ ನಿಯಮಿಸಿದ್ದ ವಿವರಗಳ ಒಂದು ಉದ್ಧೃತ ಭಾಗವನ್ನು ತನ್ನ ರುಜು ಹಾಕಿ ಶುಲ್ಕರಹಿತವಾಗಿ ಕೊಡತಕ್ಕದ್ದು. ವೈದ್ಯಕೀಯ ಸಂಸ್ಥೆಗಳಲ್ಲಿ ಸಂಭವಿಸಿದ ಜನನ ಮತ್ತು ಮರಣದ ಪ್ರಕರಣದಲ್ಲಿ ಪ್ರಭಾರಿ ವೈದ್ಯಾಧಿಕಾರಿಗಳು ಮಾಹಿತಿದಾರರಾಗಿರುತ್ತಾರೆ. ಈಗ ಕೆಲವು ರಿಜಿಸ್ಟ್ರಾರರುಗಳು ಅಂಥ ವೈದ್ಯಾಧಿಕಾರಿಗಳಿಗೆ ಉದ್ಧೃತ ಭಾಗಗಳನ್ನು ನೀಡುವುದು ಅವಶ್ಯವೇ ಎಂಬ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ.

**ಸ್ಪಷ್ಟೀಕರಣ** : ಜನನ ಅಥವಾ ಮರಣಗಳ ಅಧಿನಿಯಮ, 1969ರ 12ನೇ ಪ್ರಕರಣದಲ್ಲಿ "ರಿಜಿಸ್ಟ್ರಾರರು ಜನನ ಮತ್ತು ಮರಣಗಳ ನೋಂದಣಿ ಕೆಲಸವನ್ನು ಪೂರ್ಣಗೊಳಿಸಿದ ಕೂಡಲೇ 8ನೇ ಅಥವಾ 9ನೇ ಪ್ರಕರಣದ ಮೇರೆಗೆ ಮಾಹಿತಿ ಕೊಟ್ಟ ವ್ಯಕ್ತಿಗೆ ಜನನ ಅಥವಾ ಮರಣಗಳಿಗೆ ಸಂಬಂಧಿಸಿದ ರಿಜಿಸ್ಟರಿನಿಂದ ನಿಯಮಿಸಿದ ವಿವರಗಳ ಒಂದು ಉದ್ಧೃತ ಭಾಗವನ್ನು ತನ್ನ ರುಜು ಹಾಕಿ ಶುಲ್ಕರಹಿತವಾಗಿ ಕೊಡತಕ್ಕದ್ದು" ಎಂದಿದೆ. ಸಾಂಸ್ಥಿಕ ಘಟನೆಗಳ ಪ್ರಕರಣದಲ್ಲಿ 8(1)(ಬಿ) ಪ್ರಕರಣದ ಮೇರೆಗೆ ಪ್ರಭಾರಿ ವೈದ್ಯಾಧಿಕಾರಿಯು ಮಾಹಿತಿದಾರರಾಗಿರುವುದರಿಂದ ಅವರಿಗೆ ಉದ್ಧೃತ ಭಾಗವನ್ನು ನೀಡಬೇಕು. ಅವರು ನವಜಾತ ಶಿಶು ಅಥವಾ ಮೃತ ವ್ಯಕ್ತಿಯ ತಂದೆ ತಾಯಿಯರಿಗೆ ಅಥವಾ ಸಂಬಂಧಿಕರಿಗೆ ಸಂದರ್ಭಾನುಸಾರವಾಗಿ ಅದನ್ನು ರವಾನಿಸುತ್ತಾರೆ.

**33. ಪ್ರಶ್ನೆ** : ಈ ಅಧಿನಿಯಮದ ಮೇರೆಗೆ ಜನನ ಪ್ರಮಾಣಪತ್ರದ ಹಿಂಬದಿಯಲ್ಲಿ ಕುಟುಂಬ ಯೋಜನೆ ಮತ್ತು ಆರೋಗ್ಯ ಶಿಕ್ಷಣದ ಧ್ಯೇಯ ವಾಕ್ಯಗಳನ್ನು ಮುದ್ರಿಸಲು ಅನುಮತಿಯಿದೆಯೇ?

**ಸ್ಪಷ್ಟೀಕರಣ** : ಜನನ ಪ್ರಮಾಣ ಪತ್ರವು ಕಾನೂನುಸಮ್ಮತ ದಸ್ತಾವೇಜಾಗಿರುವದಿಂದ ಇದನ್ನು ಪ್ರಚಾರ ಕ್ರಮವಾಗಿ ಉಪಯೋಗಿಸುವುದು ಅಪೇಕ್ಷಣೀಯವಲ್ಲ.

34. ಪ್ರಶ್ನೆ : 12ನೇ ಪ್ರಕರಣವು ಅಂಥ ಜನನ ಅಥವಾ ಮರಣಕ್ಕೆ ಸಂಬಂಧಿಸಿರುವ ರಿಜಿಸ್ಟರ್‌ಗಳಿಂದ ತಾನು ಸಹಿಮಾಡಿದ ನಿಯಮಿಸಿದ ವಿವರಗಳ ಉದ್ಧೃತ ಭಾಗವನ್ನು ನೀಡಲು ರಿಜಿಸ್ಟ್ರಾರನನ್ನು ಅಧಿಕೃತಗೊಳಿಸಿದೆ. ಜೀವ ವಿಮಾ ನಿಗಮ ಮುಂತಾದವುಗಳು ಮರಣ ಪ್ರಮಾಣಪತ್ರಗಳ ಮೂಲ ಪ್ರತಿಗಳನ್ನು ಕೋರುತ್ತಿವೆ ಮತ್ತು ಅವು ಪ್ರಮಾಣಪತ್ರಗಳ ನಕಲು ಪ್ರತಿಗಳನ್ನು ಸ್ವೀಕರಿಸುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರು ಪ್ರಮಾಣಪತ್ರಗಳ ಒಂದಕ್ಕಿಂತ ಹೆಚ್ಚಿನ ಪ್ರತಿಗಳನ್ನು ಕೇಳುತ್ತಿದ್ದಾರೆ. ಅಂಥ ಸಂದರ್ಭದಲ್ಲಿ ಏನು ಮಾಡುವುದು?

ಸ್ಪಷ್ಟೀಕರಣ : ಅಧಿನಿಯಮದ 12ನೇ ಪ್ರಕರಣವು ಉದ್ಧೃತ ಭಾಗವನ್ನು ನೀಡುವುದಕ್ಕಾಗಿ ಮಾತ್ರ ಅವಕಾಶ ಕಲ್ಪಿಸಿದೆ. ಆದಾಗ್ಯೂ ಅಗತ್ಯವಾದರೆ, ಅಧಿನಿಯಮದ 17ನೇ ಪ್ರಕರಣದ ಮೇರೆಗೆ ನಿಯಮಿಸಿದ ಶುಲ್ಕದ ಸಂದಾಯದ ಮೇಲೆ ಉದ್ಧೃತ ಭಾಗದ ಎಷ್ಟು ಪ್ರತಿಗಳನ್ನು ಬೇಕಾದರೂ ನೀಡಬಹುದು. ಈ ಅಧಿನಿಯಮದ 17ನೇ ಪ್ರಕರಣದ ಮೇರೆಗೆ ನೀಡಿದ ಉದ್ಧೃತ ಭಾಗವು ಸಾಕ್ಷ್ಯದ ಮೌಲ್ಯ ಹೊಂದಿರುತ್ತದೆ. ಅಧಿನಿಯಮದ 12ನೇ ಪ್ರಕರಣದನ್ವಯ ಉದ್ಧೃತ ಭಾಗದಂತೆ ಅದೇ ಉದ್ದೇಶಕ್ಕೆ ಬಳಸಬಹುದಾಗಿರುತ್ತದೆ.

35. ಪ್ರಶ್ನೆ : ರಿಜಿಸ್ಟ್ರಾರನು ನೀಡುವ ಮರಣ ಪ್ರಮಾಣಪತ್ರ ನಮೂನೆ 6ರಲ್ಲಿ ಮರಣದ ಕಾರಣಕ್ಕೆ ಸಂಬಂಧಿಸಿರುವ ಕಾಲಂನ್ನು ಸೇರಿಸಲಾಗುವುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣ ನೋಂದಣಿ ಅಧಿನಿಯಮ, 1969ರ ಪ್ರಕಾರ ರಿಜಿಸ್ಟ್ರಾರನು ಈ ಅಧಿನಿಯಮದ 17ನೇ ಪ್ರಕರಣದ ಮೇರೆಗೆ ಉದ್ಧೃತ ಭಾಗವನ್ನು ಕೇಳುವ ಯಾರೇ ವ್ಯಕ್ತಿಗೆ ಮರಣದ ಕಾರಣವನ್ನು ಬಹಿರಂಗಪಡಿಸುವ ಹಾಗಿಲ್ಲ. ಆದ್ದರಿಂದ ನಮೂನೆ 6ರಲ್ಲಿ ಇದನ್ನು ಸೇರಿಸಲಾಗಿಲ್ಲ.

36. ಪ್ರಶ್ನೆ : 12ನೇ ಪ್ರಕರಣವು, 8ನೇ ಮತ್ತು 9ನೇ ಪ್ರಕರಣದ ಮೇರೆಗೆ ಮಾಹಿತಿ ನೀಡಿದ ವ್ಯಕ್ತಿಗೆ ರಿಜಿಸ್ಟ್ರಾರನು ಅಂಥ ಜನನ ಅಥವಾ ಮರಣಕ್ಕೆ ಸಂಬಂಧಿಸಿರುವ ರಿಜಿಸ್ಟರನಿಂದ ನಿಯಮಿಸಿದ ವಿವರಗಳ ಉದ್ಧೃತ ಭಾಗವನ್ನು ಶುಲ್ಕರಹಿತವಾಗಿ ನೀಡಲು ಅವಕಾಶ ಕಲ್ಪಿಸಿದೆ. ಆದರೆ 13ನೇ ಪ್ರಕರಣದ ಮೇರೆಗೆ ವಿಳಂಬ ನೋಂದಣಿಯ ಸಂದರ್ಭದಲ್ಲಿ ವ್ಯಕ್ತಿಗೆ ಉದ್ಧೃತ ಭಾಗವನ್ನು ಶುಲ್ಕರಹಿತವಾಗಿ ನೀಡಲಾಗುವುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣ ಅಧಿನಿಯಮ, 1969ರ 12ನೇ ಪ್ರಕರಣವು, ಅದರ 8ನೇ ಅಥವಾ 9ನೇ ಪ್ರಕರಣದ ಮೇರೆಗೆ ಮಾಹಿತಿ ನೀಡಿರುವ ವ್ಯಕ್ತಿಗೆ ಉದ್ಧೃತ ಭಾಗವನ್ನು ಶುಲ್ಕರಹಿತವಾಗಿ ನೀಡುವ ಉದ್ದೇಶ ಹೊಂದಿದೆ. ಈ ಪ್ರಕರಣದ ಉಪಬಂಧಗಳು ಅದಕ್ಕಾಗಿಯೇ ಇವೆ. ಅವುಗಳು 13ನೇ ಪ್ರಕರಣದ ಸಂಬಂಧದಲ್ಲಿ ಅನ್ವಯವಾಗುವುದಿಲ್ಲ. ಈ ಅಧಿನಿಯಮದ 13ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರ್‌ನಿಗೆ ಮಾಹಿತಿ ನೀಡುವ ವ್ಯಕ್ತಿಗಳಿಗೆ ಶುಲ್ಕರಹಿತವಾಗಿ ಉದ್ಧೃತ ಭಾಗವನ್ನು ನೀಡಲಾಗುವುದಿಲ್ಲ.

37. ಪ್ರಶ್ನೆ : ಜನನ ಮತ್ತು ಮರಣ ನೋಂದಣಿ ಅಧಿನಿಯಮ, 1969ರ 12ನೇ ಪ್ರಕರಣವು, ಜನನ ಅಥವಾ ಮರಣದ ನೋಂದಣಿಯನ್ನು ಪೂರ್ಣಗೊಳಿಸಿದ ಕೂಡಲೇ, ರಿಜಿಸ್ಟ್ರಾರ್‌ನು ಅಂಥ ಜನನ ಅಥವಾ ಮರಣಕ್ಕೆ ಸಂಬಂಧಿಸಿರುವ ರಿಜಿಸ್ಟರ್‌ನಿಂದ ತಾನು ಸಹಿ ಮಾಡಿದ ನಿಯಮಿಸಿದ ವಿವರಗಳ ಉದ್ಧೃತ ಭಾಗವನ್ನು ನೀಡುವುದಕ್ಕೆ ಉಪಬಂಧ ಕಲ್ಪಿಸುತ್ತದೆ. 17(2)ನೇ ಪ್ರಕರಣದ ತರುವಾಯ ಶುಲ್ಕವನ್ನು ಸಂದಾಯ ಮಾಡಿ ಜನನ ಅಥವಾ ಮರಣದ

ರಿಜಿಸ್ಟರ್‌ನಿಂದ ಉದ್ಧೃತ ಭಾಗವನ್ನು ಪಡೆಯುವುದಕ್ಕೆ ಮತ್ತು ಅಂಥ ಪ್ರಮಾಣಪತ್ರದ ನಮೂದು ಯಾವುದಕ್ಕೆ ಸಂಬಂಧಿಸಿದೆಯೋ ಆ ಜನನ ಅಥವಾ ಮರಣವನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ ಸಾಕ್ಷ್ಯದಲ್ಲಿ ಅದು ಅಂಗೀಕಾರಾರ್ಹವಾಗಿರತಕ್ಕದ್ದೆಂಬ ಬಗ್ಗೆ ಉಪಬಂಧ ಕಲ್ಪಿಸುತ್ತದೆ. ಆದರೆ ಅಂಥ ಉದ್ಧೃತ ಭಾಗವು ಜನನ ಮತ್ತು ಮರಣದ ಸಂಗತಿಯ ರುಜುವಾತಾಗಿ ಮತ್ತು ಪಿತೃತ್ವ, ಪುತ್ರತ್ವ ಮತ್ತು ಪತಿತ್ವದ ಬಾಂಧವ್ಯದಿಂದ ಉದ್ಭವಿಸುವ ಪ್ರತಿಯೊಬ್ಬ ಪ್ರಜೆಯ ನಾಗರಿಕ ಸ್ಥಾನಮಾನಗಳ ರುಜುವಾತಾಗಿ ಹಾಜರುಪಡಿಸಬಹುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣದ ರಿಜಿಸ್ಟರುಗಳಲ್ಲಿರುವ ನಮೂದುಗಳು ಸಾರ್ವಜನಿಕ ದಾಖಲೆಗಳಾಗಿರುತ್ತವೆ ಮತ್ತು ಭಾರತ ಸಾಕ್ಷ್ಯ ಅಧಿನಿಯಮ, 1872ರ 35ನೇ ಪ್ರಕರಣದ ಮೇರೆಗೆ ಸಾಕ್ಷಿಯಾಗಿ ಅಂಗೀಕಾರಾರ್ಹವಾಗಿರುತ್ತದೆ. ಆದಾಗ್ಯೂ ಈ ನಮೂದುಗಳು ಕೇವಲ ಜನನ ಅಥವಾ ಸಂದರ್ಭಾನುಸಾರ ಮರಣದ ಸಂಗತಿಯ ನಿರ್ಣಾಯಕ ಸಾಕ್ಷ್ಯವಾಗಿರುವವು. ನೋಂದಣಿ ಅಧಿಕಾರಿಗೆ ವೈಯಕ್ತಿಕವಾಗಿ ತಿಳಿದಿರಲು ಸಾಧ್ಯವಿಲ್ಲದ ಅಥವಾ ಪರಿಶೀಲಿಸಲು ಸಾಧ್ಯವಿಲ್ಲದ ಇತರ ವಿವರಗಳಿಗೆ ಸಂಬಂಧಪಟ್ಟಂತೆ ನಿರ್ಣಾಯಕ ಸಾಕ್ಷ್ಯವೆಂದು ಪರಿಗಣಿಸಲು ಆಗುವುದಿಲ್ಲ. ಉದಾ: ಜನನ ರಿಜಿಸ್ಟರಿನಲ್ಲಿ ದಾಖಲೆಗಾಗಿ ತಂದೆ ಹೆಸರನ್ನು ತಾಯಿ ಒದಗಿಸಿರುತ್ತಾಳೆ. ಇದು ಹಿತಾಸಕ್ತಿಯುಳ್ಳ ಪಕ್ಷಕಾರನ ಏಕಪಕ್ಷೀಯ ಹೇಳಿಕೆಯಾಗಿರುವುದರಿಂದ ಇದೇ ಪಿತೃತ್ವದ ನಿರ್ಣಾಯಕ ಸಾಕ್ಷ್ಯವಾಗುವುದಿಲ್ಲ.

**38. ಪ್ರಶ್ನೆ** : 12ನೇ ಪ್ರಕರಣದ ಮೇರೆಗೆ ನೀಡಿದ ಉದ್ಧೃತ ಭಾಗವು ಭಾರತ ಸಾಕ್ಷ್ಯ ಅಧಿನಿಯಮ, 1872ರ 17ನೇ ಪ್ರಕರಣದ ಮೇರೆಗೆ ನೀಡಿದ ಉದ್ಧೃತ ಭಾಗದಂತೆ ಅದೇ ಸಾಕ್ಷ್ಯದ ಮೌಲ್ಯ ಹೊಂದಿರುವುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣ ನೋಂದಣಿ ಅಧಿನಿಯಮ, 1969ರ 17ನೇ ಪ್ರಕರಣದ ಮೇರೆಗೆ ನೀಡಲಾಗಿರುವ ಪ್ರಮಾಣೀಕೃತ ಉದ್ಧೃತ ಭಾಗವನ್ನು ಕಾನೂನು ವಿವಾದ ಅಥವಾ ನ್ಯಾಯಿಕ ವ್ಯವಹರಣೆಯ ಉದ್ದೇಶಕ್ಕಾಗಿ ಉಪಯೋಗಿಸಲು ಉದ್ದೇಶಿತವಾಗಿದೆ. ಯಾವುದೇ ಅಂಥ ಸಂದರ್ಭದಲ್ಲಿ 76ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಪ್ರಮಾಣೀಕರಿಸಿದ ದಾಖಲೆ, ಭಾರತ ಸಾಕ್ಷ್ಯ ಅಧಿನಿಯಮ, 1872ರ 77ನೇ ಪ್ರಕರಣದ ಮೇರೆಗೆ ಅವು ಯಾವುದರ ಪ್ರತಿಗಳೆಂದು ಭಾವಿಸಲಾಗಿದೆಯೋ ಆ ಸಾರ್ವಜನಿಕ ದಾಖಲೆಗಳ ಅಥವಾ ಅವುಗಳ ಭಾಗಗಳ ಒಳಾಂಶಗಳ ರುಜುವಾತಾಗಿ ಸಾಕ್ಷ್ಯವಾಗಿ ಅಂಗೀಕಾರಾರ್ಯವಾಗುತ್ತದೆ.

ಭಾರತ ಸಾಕ್ಷ್ಯ ಅಧಿನಿಯಮದ 76ನೇ ಪ್ರಕರಣದ ಮೇರೆಗೆ ಯಾವುದೇ ಸಾರ್ವಜನಿಕ ದಾಖಲೆಯ ಅಂಥ ಪ್ರತಿ, ಅದು ಅಂಥ ದಾಖಲೆಯ ಅಥವಾ ಸಂದರ್ಭಾನುಸಾರ ಅದರ ಭಾಗದ ಯಥಾ ಪ್ರತಿಯೊಂದು ಪ್ರಮಾಣೀಕರಿಸಿದ ಬರಹವನ್ನು ಅಂಥ ಪ್ರತಿಯ ಅಡಿಯಲ್ಲಿ ಹೊಂದಿರುತ್ತದೆ ಮತ್ತು ಪ್ರತಿಯೊಂದು ಅಂಥ ಪ್ರಮಾಣಪತ್ರಕ್ಕೆ ಅಧಿಕಾರಿಯು ದಿನಾಂಕ ನಮೂದಿಸತಕ್ಕದ್ದು ಮತ್ತು ತನ್ನ ಹೆಸರು ಮತ್ತು ಶೀರ್ಷಿಕೆ ನಮೂದಿಸಿ ಸಹಿ ಹಾಕತಕ್ಕದ್ದು ಮತ್ತು ಅಂಥ ಅಧಿಕಾರಿಯು ಮೊಹರನ್ನು ಉಪಯೋಗಿಸಲು ಕಾನೂನಿನ ಮೂಲಕ ಪ್ರಾಧಿಕೃತಗೊಂಡಾಗ ಮೊಹರು ಮಾಡತಕ್ಕದ್ದು.

ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 12ನೇ ಪ್ರಕರಣದ ಮೇರೆಗೆ ನೀಡಿದ ಜನನ ಮತ್ತು ಮರಣಗಳ ನೋಂದಣಿ ರಿಜಿಸ್ಟಾರ್‌ನಿಂದ ನಿಯಮಿಸಿದ ವಿವರಗಳ ಉದ್ಧೃತ ಭಾಗವು ಮುಖ್ಯವಾಗಿ

ದಾಖಲೆಯ ಉದ್ದೇಶಕ್ಕಾಗಿ ಉದ್ದೇಶಿತವಾಗಿದೆ ಮತ್ತು ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶದಂಥ ನ್ಯಾಯಿಕ ಉದ್ದೇಶಗಳಿಗಾಗಿ ಹೊರತಾದ ಉದ್ದೇಶಕ್ಕಾಗಿ ಉಪಯುಕ್ತವಾಗಬಹುದು. 17ನೇ ಪ್ರಕರಣದ ಮೇರೆಗೆ ಪಡೆಯುವ ಪ್ರಮಾಣಿತ ಪ್ರತಿಗಳ ಸಂಬಂಧದಲ್ಲಿ ಶುಲ್ಕ ವಿಧಿಸಬಹುದೆಂಬುದನ್ನು ಈ ಸಂಬಂಧದಲ್ಲಿ ನಮೂದಿಸಬಹುದು. ಆದಾಗ್ಯೂ ಆಡಳಿತ ಸಚಿವಾಲಯವು 12ನೇ ಪ್ರಕರಣದ ಮೇರೆಗಿನ ಉದ್ಧೃತ ಭಾಗವು 17ನೇ ಪ್ರಕರಣದ ಮೇರೆಗೆ ನೀಡಿದ ಪ್ರತಿಯಂತೆ ಅದೇ ಉದ್ದೇಶಕ್ಕೆ ಬಳಸಬಹುದೆಂದು ಅವಕಾಶ ಕಲ್ಪಿಸಿದರೆ, ಅದನ್ನು ನಿಯಮಗಳಲ್ಲಿ ಉಪಬಂಧಿಸುವ ಮೂಲಕ ಸಾಧಿಸಬಹುದು. ಎಂದರೆ, 12ನೇ ಪ್ರಕರಣದ ಮೇರೆಗೆ ನೀಡಿದ ಉದ್ಧೃತ ಭಾಗದ ಪ್ರತಿಯ ಅಡಿಯಲ್ಲಿ ಅದು ಅಂಥ ದಾಖಲೆಯ ಯಥಾ ಪ್ರತಿಯಾಗಿದೆಯೆಂದು ಪ್ರಮಾಣಪತ್ರ ನೀಡತಕ್ಕದ್ದು ಮತ್ತು ತನ್ನ ಹೆಸರು, ಪದನಾಮ ಮತ್ತು ಕಚೇರಿಯ ಮೊಹರನ್ನು ಹಾಕಿ ಸಹಿ ಮಾಡತಕ್ಕದ್ದು. ಇದನ್ನು ಮಾಡಿದರೆ, 12ನೇ ಪ್ರಕರಣದ ಮೇರೆಗೆ ನೀಡಿದ ಉದ್ಧೃತ ಭಾಗವನ್ನು ಸಹ ಭಾರತ ಸಾಕ್ಷ್ಯ ಅಧಿನಿಯಮದ 77ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಪ್ರಮಾಣಿತ ಪ್ರತಿಯೆಂದು ಪರಿಗಣಿಸಲಾಗುತ್ತದೆ. ಆದರೆ 12ನೇ ಪ್ರಕರಣದ ಮೇರೆಗಿನ ಪ್ರತಿಗಳ ನೀಡಿಕೆಗಾಗಿ ಯಾವುದೇ ಶುಲ್ಕವನ್ನು ವಿಧಿಸಲಾಗುವುದಿಲ್ಲ.

**39. ಪ್ರಶ್ನೆ** : ಮರಣ ಪ್ರಮಾಣಪತ್ರದಲ್ಲಿ ಮೃತನ ವಯಸ್ಸನ್ನು ತೋರಿಸಬೇಕೇ?

**ಸ್ಪಷ್ಟೀಕರಣ** : ಮರಣ ಪ್ರಮಾಣ ಪತ್ರ (ನಮೂನೆ 6)ದಲ್ಲಿ ಮೃತನ ವಯಸ್ಸನ್ನು ದಾಖಲಿಸುವುದು ಅಪೇಕ್ಷಣೀಯವಲ್ಲ. ಮರಣ ರಿಜಿಸ್ಟರ್‌ನಲ್ಲಿ ವಯಸ್ಸಿನ ಕಾಲಂನ್ನು ಮುಖ್ಯವಾಗಿ ಅಂಕಿ ಅಂಶದ ಉದ್ದೇಶಕ್ಕಾಗಿ ಒದಗಿಸಲಾಗಿದೆ. ಯಾರೇ ವ್ಯಕ್ತಿಯು ಮೃತನ ವಯಸ್ಸನ್ನು ನಿರೂಪಿಸಬಯಸಿದರೆ, ಅಂಥವರು ಮೃತನ ಜನನ ಪ್ರಮಾಣಪತ್ರ ಅಥವಾ ಮೃತನ ವಯಸ್ಸಿಗೆ ಸಂಬಂಧಿಸಿರುವ ಯಾವುದೇ ಇತರ ದ್ವಿತೀಯ ಸಾಕ್ಷ್ಯದ ರುಜುವಾತನ್ನು ಹಾಜರುಪಡಿಸಬೇಕು.

**40. ಪ್ರಶ್ನೆ** : ಜನನ/ಮರಣ ಪ್ರಮಾಣಪತ್ರವನ್ನು ಜನನ/ಮರಣ ರಿಜಿಸ್ಟರ್‌ನಲ್ಲಿ ಯಾವ ಭಾಷೆಯಲ್ಲಿ ನಮೂದು ಮಾಡಲಾಗಿದೆಯೋ ಆ ಭಾಷೆಯನ್ನು ಹೊರತುಪಡಿಸಿ ಬೇರೆ ಭಾಷೆಯಲ್ಲಿ ನೀಡಬಹುದೇ?

**ಸ್ಪಷ್ಟೀಕರಣ** : ಜನನ/ಮರಣ ರಿಜಿಸ್ಟರ್ ನಿಯಮದ ಉದ್ಧೃತ ಭಾಗಗಳನ್ನು ರಿಜಿಸ್ಟರ್‌ನಲ್ಲಿ ಯಾವ ಭಾಷೆಯಲ್ಲಿ ನಮೂದು ಮಾಡಲಾಗಿರುವುದೋ ಆ ಭಾಷೆಯಲ್ಲಿ ಮಾತ್ರ ನೀಡಬೇಕು.

**41. ಪ್ರಶ್ನೆ** : ಈ ಅಧಿನಿಯಮದ ಮತ್ತು ರಾಜ್ಯ ನಿಯಮಗಳ ಉಪಬಂಧಗಳ ಮೇರೆಗೆ ನಿರ್ಜೀವ ಜನನ ಪ್ರಮಾಣಪತ್ರವನ್ನು ನೀಡಬಹುದೇ?

**ಸ್ಪಷ್ಟೀಕರಣ** : ಈ ಅಧಿನಿಯಮದ 2ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಅನುಸಾರ, "ಜನನ" ಎಂದರೆ ಸಜೀವ ಜನನ ಅಥವಾ ನಿರ್ಜೀವ ಜನನ ಎಂದರ್ಥ. ಅದೇ ರೀತಿಯಾಗಿ, ನಿರ್ಜೀವ ಜನನ ರಿಜಿಸ್ಟರ್‌ನಿಂದ (ನಮೂನೆ 3) ಉದ್ಧೃತ ಭಾಗಗಳನ್ನು ನಿರ್ಜೀವ ಜನನದ ಮೂಲ ದಾಖಲೆಗಳಿಂದ ತೆಗೆದುಕೊಳ್ಳಲಾಗಿರುವ ಆ ನಮೂನೆಯಲ್ಲಿ ನೀಡಿದ "ಜನನ" ಎಂಬ ಪದದ ಬದಲಾಗಿ ನಿರ್ಜೀವ ಜನನದ ದಿನಾಂಕ ಮತ್ತು ನಿರ್ಜೀವ ಜನನದ ಸ್ಥಳ ಎಂಬ ಮಾಹಿತಿ ಮುಂತಾದವುಗಳನ್ನು ಆ ನಮೂನೆಯಲ್ಲಿ ಪದಗಳಲ್ಲಿ ಯುಕ್ತ ಬದಲಾವಣೆಗಳೊಂದಿಗೆ ನಮೂನೆ 5ರಲ್ಲಿ ನೀಡಲಾಗುವುದು.

42. ಪ್ರಶ್ನೆ : 12ನೇ ಪ್ರಕರಣದ ಮೇರೆಗಿನ ಜನನ/ಮರಣದ ಉದ್ಧೃತ ಭಾಗಗಳನ್ನು ಈ ಅಧಿನಿಯಮದ 13ನೇ ಪ್ರಕರಣದ ಮೇರೆಗೆ ನೋಂದಾಯಿಸಿದ ಸಂದರ್ಭದ ಸಂಬಂಧದಲ್ಲಿಯೂ ಸಹ ಶುಲ್ಕರಹಿತವಾಗಿ ನೀಡಬಹುದೇ?

ಸ್ಪಷ್ಟೀಕರಣ : ಈ ಅಧಿನಿಯಮದ 12ನೇ ಪ್ರಕರಣವು ಈ ಅಧಿನಿಯಮದ 8ನೇ ಮತ್ತು 9ನೇ ಪ್ರಕರಣದ ಮೇರೆಗೆ ಮಾಹಿತಿ ನೀಡುವ ವ್ಯಕ್ತಿಗೆ ಶುಲ್ಕರಹಿತವಾಗಿ ಉದ್ಧೃತ ಭಾಗಗಳನ್ನು ನೀಡಲು ಉದ್ದೇಶಿತವಾಗಿದೆ. ಆದ್ದರಿಂದ ಈ ಉಪಬಂಧ 13ನೇ ಪ್ರಕರಣದ ಮೇರೆಗೆ ನೋಂದಾಯಿಸಿದ ಸಂದರ್ಭಕ್ಕೆ ಸಂಬಂಧಿಸಿದಂತೆ ಅನ್ವಯವಾಗುವುದಿಲ್ಲ.

43. ಪ್ರಶ್ನೆ : ಜನನ ಅಥವಾ ಮರಣದ ಉದ್ಧೃತ ಭಾಗಗಳನ್ನು ಸಂಬಂಧಪಟ್ಟ ರಿಜಿಸ್ಟರು ಯಾವ ಭಾಷೆಯಲ್ಲಿ ನಿರ್ವಹಿಸಲಾಗಿದೆಯೋ ಆ ಭಾಷೆಯನ್ನು ಹೊರತುಪಡಿಸಿ ಬೇರೆ ಭಾಷೆಯಲ್ಲಿ ನೀಡಬಹುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣದ ರಿಜಿಸ್ಟರ್‌ನಿಂದ ಉದ್ಧೃತ ಭಾಗಗಳನ್ನು ರಿಜಿಸ್ಟರ್‌ನಲ್ಲಿ ನಮೂದು ಮಾಡಲಾಗಿರುವ ಭಾಷೆಯಲ್ಲಿಯೇ ನೀಡಬೇಕು. ಆದಾಗ್ಯೂ, ರಿಜಿಸ್ಟ್ರಾರ್‌ರು ಪ್ರತ್ಯೇಕವಾಗಿ ಅಂಥಾ ಉದ್ಧೃತ ಭಾಗಗಳ ಪ್ರತಿಯನ್ನು ಇತರ ಭಾಷೆಯಲ್ಲಿ ನೀಡಿದ್ದರೆ, ಯಾವ ಆಕ್ಷೇಪಣೆಯೂ ಇಲ್ಲ. ಆದರೆ ಅಂಥ ಪ್ರತಿಯ ಮೇಲೆ "ಭಾಷಾಂತರಿತ ಪ್ರತಿ"ಯೆಂದು ಬರೆದಿರಬೇಕು.

## ಪ್ರಕರಣ 13 :

44. ಪ್ರಶ್ನೆ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 13ನೇ ಪ್ರಕರಣದ (1)ನೇ ಉಪಪ್ರಕರಣದ ಅನುಸಾರ ನಿರ್ದಿಷ್ಟಪಡಿಸಿದ ಅವಧಿ ಮುಕ್ತಾಯವಾದ ತರುವಾಯ ನಿಯಮಿಸಿದ ವಿಳಂಬ ಶುಲ್ಕವನ್ನು ಸಂದಾಯ ಮಾಡಿ ಜನನ/ಮರಣಗಳ ನೋಂದಣಿ ಮಾಡಿಸುವುದು ಸಾಧ್ಯ. ಸಾರ್ವಜನಿಕ ಕ್ಷೋಭೆ ಮತ್ತು ಕರ್ಫ್ಯೂ ವಿಧಿಸಿರುವಂಥ ಹಲವು ಕಾರಣಗಳಿಂದ ಅಥವಾ ಅಂಥದೇ ಇತರ ಸನ್ನಿವೇಶಗಳಲ್ಲಿ ಜನನ ಮತ್ತು ಮರಣಗಳನ್ನು ನಿರ್ದಿಷ್ಟಪಡಿಸಿದ ಕಾಲಪರಿಮಿತಿಯೊಳಗೆ ನೋಂದಣಿ ಮಾಡಿಸಲಾಗಿಲ್ಲವೆಂದು ದೇಶದ ಹಲವು ಭಾಗಗಳಿಂದ ವರದಿಯಾಗಿದೆ. ಕೆಲವು ಪ್ರಕರಣಗಳಲ್ಲಿ ಜನನ ಮತ್ತು ಮರಣಗಳನ್ನು ಎರಡು ತಿಂಗಳಿಗಿಂತ ಹೆಚ್ಚಿನ ಅವಧಿಯಾದರೂ ನೋಂದಣಿ ಮಾಡಿಸಲಾಗಿಲ್ಲ. ಆದ್ದರಿಂದ ಅಂಥ ಸನ್ನಿವೇಶಗಳಲ್ಲಿ ಈ ಅಧಿನಿಯಮದ 13ನೇ ಪ್ರಕರಣದ (1)ನೇ ಉಪಪ್ರಕರಣದ ಮತ್ತು ಅನುರೂಪವಾದ ರಾಜ್ಯ ಕಾನೂನುಗಳ ಮೇರೆಗೆ ವಿಳಂಬ ಶುಲ್ಕದ ಸಂದಾಯವನ್ನು ರಾಜ್ಯಸರ್ಕಾರಗಳು ಮನ್ನಾ ಮಾಡಬಹುದೇ? ಮನ್ನಾ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರದ ಪ್ರಾಧಿಕಾರಿಯೇ ಸ್ವಯಂ ಚಲಾಯಿಸಬಹುದೇ?

ಸ್ಪಷ್ಟೀಕರಣ : 13ನೇ ಪ್ರಕರಣದಲ್ಲಿರುವ ಉಪಬಂಧವು ನಿಯಮಿಸಬಹುದಾದಂಥ ವಿಳಂಬ ಶುಲ್ಕದ "ಸಂದಾಯ"ದ ಬಗ್ಗೆ ಹೇಳುತ್ತದೆಯೆಂಬುದನ್ನು ನೋಡಬಹುದು. ಈ ಪ್ರಕರಣದಲ್ಲಾಗಲಿ ಅಥವಾ ಅಧಿನಿಯಮದಲ್ಲಾಗಲಿ ಎಲ್ಲಿಯೂ ವಿಳಂಬ ಶುಲ್ಕದ ಸಂದಾಯದ ವಿನಾಯಿತಿ ನೀಡಲು ಅವಕಾಶ ಕಲ್ಪಿಸುವ ಉಪಬಂಧ ಕಲ್ಪಿಸಿಲ್ಲ. 30ನೇ ಪ್ರಕರಣವು ಕೇಂದ್ರ ಸರ್ಕಾರದ ಅನುಮೋದನೆ ಪಡೆದು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡಿದೆ ಮತ್ತು ಈ ಪ್ರಕರಣದ (2)ನೇ ಉಪಪ್ರಕರಣದ (1)ನೇ ಖಂಡವು 13ನೇ ಪ್ರಕರಣದ ಮೇರೆಗೆ ಮಾಡಿದ ನೋಂದಣಿಗಾಗಿ ಸಂದಾಯ ಮಾಡಬೇಕಾದ ಶುಲ್ಕಕ್ಕಾಗಿ ನಿಯಮಗಳನ್ನು ರಚಿಸಲು

ಉಪಬಂಧ ಕಲ್ಪಿಸಿದೆ. ಈ ಅಧಿನಿಯಮದ 13ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ವಿಳಂಬ ಮಾಹಿತಿಯ ಸಂದರ್ಭದಲ್ಲಿ ವಿಳಂಬ ಶುಲ್ಕವನ್ನು ಸಂದಾಯ ಮಾಡುವುದನ್ನು ಕಡ್ಡಾಯ ಮಾಡುವುದು ಕಾನೂನು ರಚನೆಯ ಆಶಯವಾಗಿದೆ. ಆದರೆ ರಾಜ್ಯ ಸರ್ಕಾರವು ಈ ಅಧಿನಿಯಮದ 30ನೇ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಚಲಾಯಿಸಿ ರಚಿಸಿದ ನಿಯಮಗಳ ಮೂಲಕ ಶುಲ್ಕದ ಪ್ರಮಾಣವನ್ನು ಮಾತ್ರ ನಿಯಮಿಸಬಹುದು. ಯಾವುದೇ ಸನ್ನಿವೇಶಗಳಲ್ಲಿ ಆ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ಅವಧಿಯನ್ನು ಮೀರಿ ಮಾಹಿತಿಯು ವಿಳಂಬವಾಗಿದ್ದ ಸಂದರ್ಭದಲ್ಲಿ ವಿಳಂಬ ಶುಲ್ಕವನ್ನು ಮನ್ನಾ ಮಾಡುವುದಕ್ಕಾಗಿ ಅಧಿನಿಯಮವು ಉಪಬಂಧ ಕಲ್ಪಿಸಿಲ್ಲ. ಮುಂದಿನ ಪ್ರಶ್ನೆ, ನಿಯಮಗಳಲ್ಲಿ ವಿನಾಯಿತಿಗಾಗಿ ಉಪಬಂಧ ಕಲ್ಪಿಸಬಹುದೇ ಎಂಬುದು. ಅಧೀನ ಶಾಸನ ರಚನೆ ಅಧಿನಿಯಮದ ವ್ಯಾಪ್ತಿಯೊಳಗೆ ಇರತಕ್ಕದ್ದು ಎಂಬ ಅಂಶದ ಮೇಲೆ ಕಾನೂನು ಇತ್ಯರ್ಥವಾಗಿದೆ. ಚಮನ್‌ಲಾಲ್ ವಿರುದ್ಧ ಉತ್ತರ ಪ್ರದೇಶ ರಾಜ್ಯ (ಎಐಆರ್ 1955 ಸ.ನ್ಯಾ.435) ನೋಡಿ. ಅಧೀನ ಶಾಸನ ರಚನೆ ಶಾಸನವನ್ನು ಮೀರುವಂತಿಲ್ಲ. ನೋಡಿ: ಎಸ್.ಸಿ.ಆರ್. 295 (317) (1957)ರಲ್ಲಿ ವರದಿಯಾಗಿರುವ ಅಸ್ಸಾಂ ರಾಜ್ಯ ವಿರುದ್ಧ ಕಿದ್ವಾಯಿ, ಪ್ರಸಕ್ತ ಸಂದರ್ಭದಲ್ಲಿ ಅಧಿನಿಯಮವು ಯಾವುದೇ ವಿನಾಯಿತಿಗಾಗಿ ಉಪಬಂಧ ಕಲ್ಪಿಸಿಲ್ಲ ಅಥವಾ ವಿನಾಯಿತಿಗಾಗಿ ಉಪಬಂಧ ಕಲ್ಪಿಸಬಹುದಾದ ನಿಯಮಗಳನ್ನು ರಚಿಸಲು ಅಧಿಕಾರ ನೀಡಿಲ್ಲ. ನಿರ್ದಿಷ್ಟ ವಿಷಯದಲ್ಲಿ ಶುಲ್ಕ ಸಂದಾಯಕ್ಕಾಗಿ ಶಾಸನ ಕಲ್ಪಿಸಿದಲ್ಲಿ ಅಂಥ ಶುಲ್ಕದ ಸಂದಾಯದ ವಿನಾಯಿತಿಗಾಗಿ ಉಪಬಂಧ ಕಲ್ಪಿಸುವುದು ಸಹ ಅಗತ್ಯ ಶಾಸನಾತ್ಮಕ ಪ್ರಕಾರ್ಯವಾಗುತ್ತದೆ. ವಿನಾಯಿತಿಯನ್ನು ನೀಡುವ ಬಗೆಗಿನ ಕಾರ್ಯನೀತಿಯನ್ನು ಮತ್ತು ಅದನ್ನು ನೀಡಬಹುದಾದ ಪ್ರಕರಣಗಳ ವರ್ಗ ಅಥವಾ ವರ್ಗಗಳು ಮತ್ತು ಸನ್ನಿವೇಶಗಳನ್ನು ಶಾಸನದಲ್ಲಿ ನಿರ್ದಿಷ್ಟವಾಗಿ ವಿಧಿಸಿದ್ದ ಹೊರತು, ಅದನ್ನು ಪ್ರತ್ಯಾಯೋಜಿಸುವುದು ಸಾಧ್ಯವಿಲ್ಲ. ಪ್ರಸಕ್ತ ಸಂದರ್ಭದಲ್ಲಿ, ಶಾಸನದಲ್ಲಿ ಅಂಥ ಉಪಬಂಧ ಕಲ್ಪಿಸಿಲ್ಲವಾದ್ದರಿಂದ ನಿಯಮಗಳಲ್ಲಿ ವಿನಾಯಿತಿಗಾಗಿ ಉಪಬಂಧ ಕಲ್ಪಿಸುವುದು ಸಾಧ್ಯವಿಲ್ಲ. 30(1)ನೇ ಪ್ರಕರಣದಲ್ಲಿ ತಿಳಿಸಲಾಗಿರುವಂತೆ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ಅಧಿಕಾರ ನೀಡಲಾಗುತ್ತದೆ. ಆದರೆ ಅಧಿನಿಯಮದಲ್ಲಿ ಅವಕಾಶವಿಲ್ಲದ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಲು ಈ ಅಧಿಕಾರ ವಿಸ್ತರಿಸುವುದಿಲ್ಲ. ಅಲ್ಲದೆ ಅಂಥ ನಿಯಮಗಳ ರಚನೆ ಈ ಅಧಿನಿಯಮದ ಅಡಿಯಲ್ಲಿ ಅಧಿಕೃತವೂ ಆಗುವುದಿಲ್ಲ.

ಪ್ರಸ್ತುತ ಸನ್ನಿವೇಶದಲ್ಲಿ ಈಗಿರುವ ಕಾನೂನಿನ ಪ್ರಕಾರ, ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರಕ್ಕೆ ಅಂಥ ವಿನಾಯಿತಿ ಅಧಿಕಾರನ್ನು ಚಲಾಯಿಸಲು ಅವಕಾಶವಿಲ್ಲ.

**45. ಪ್ರಶ್ನೆ** : ಕೆಲವು ರಾಜ್ಯ ಸರ್ಕಾರಗಳು "ನೋಂದಣಿ ಸಪ್ತಾಹ" ಆಯೋಜಿಸಲು ಉದ್ದೇಶಿಸಿವೆ. ಅಂಥ ಆಂದೋಲನಗಳನ್ನು ಆಯೋಜಿಸುವುದರ ಮೂಲ ಕೆಲವೊಂದು ಪರಿಣಾಮ ಉಂಟಾಗುವುದು ಮತ್ತು ಹೆಚ್ಚಿನ ಜನರು ನೋಂದಣಿಯ ಬಗ್ಗೆ ತಿಳಿಯುವರು ಎಂಬುದು ಅವರ ಉದ್ದೇಶವಾಗಿದೆ. ರಾಜ್ಯ ಸರ್ಕಾರಗಳು ನೋಂದಣಿ ಸಪ್ತಾಹದ ಅವಧಿಯಲ್ಲಿ ಆಂದೋಲನದ ಆಶಯಕ್ಕೆ ಪೂರಕವಾಗುವಂತೆ ವಿಳಂಬ ಶುಲ್ಕದಿಂದ ವಿನಾಯಿತಿ ನೀಡಲು, ಅದನ್ನು ಮನ್ನಾ ಮಾಡಲು ಉದ್ದೇಶಿಸಿವೆ. ಆದಾಗ್ಯೂ, ಅಧಿನಿಯಮವು, ವರದಿ ಮಾಡುವುದರಲ್ಲಿ ನಿರ್ದಿಷ್ಟ ಅವಧಿ ಮೀರಿ ವಿಳಂಬವಾಗಿದ್ದರೆ, ಯಾವುದೇ ಸನ್ನಿವೇಶಗಳಲ್ಲಿ ವಿಳಂಬ ಶುಲ್ಕವನ್ನು ಮನ್ನಾ ಮಾಡುವುದಕ್ಕಾಗಿ

ಉಪಬಂಧ ಕಲ್ಪಿಸಿಲ್ಲ. ಇಂತಹ ಸನ್ನಿವೇಶಗಳಲ್ಲಿ ರಾಜ್ಯ ಸರ್ಕಾರವು "ನೋಂದಣಿ ಸಪ್ತಾಹ" ಆಯೋಜಿಸುವುದು ಹೇಗೆ ಎಂಬುದರ ಬಗ್ಗೆ ಸಲಹೆ ನೀಡಬೇಕು.

ಸ್ಪಷ್ಟೀಕರಣ : ವಿಳಂಬ ನೋಂದಣಿಗಾಗಿ ವಿಳಂಬ ಶುಲ್ಕದ ಸಂದಾಯದಿಂದ ವಿನಾಯಿತಿ ನೀಡಲು ಯಾವುದೇ ಅಧಿಕಾರವಿಲ್ಲ ಎಂಬುದರಲ್ಲಿ ಸಂಶಯವೇ ಇಲ್ಲ. ಜನನ ಮತ್ತು ಮರಣಗಳ ಅಧಿನಿಯಮ, 1969, ಇದು ರಾಜ್ಯ ಸರ್ಕಾರ ನಿಯಮಗಳ ಮೇರೆಗೆ ನಿಯಮಿಸಬಹುದಾದಂತ ವಿಳಂಬ ಸಂದಾಯದ ಬಗ್ಗೆ ಉಲ್ಲೇಖಿಸಿದೆ. "ಅಂಥ ಶುಲ್ಕವನ್ನು" ಎಂಬ ಪದಗಳು ಶುಲ್ಕವೇ ಇಲ್ಲವೆಂಬ ಅರ್ಥವನ್ನು ಕೊಡುವುದಿಲ್ಲ. ಆದ್ದರಿಂದ ರಾಜ್ಯ ಸರ್ಕಾರವು "ನೋಂದಣಿ ಸಪ್ತಾಹ" ಆಚರಣೆಯ ಅವಧಿಯಲ್ಲಿ ಆ ಪ್ರಕರಣದ ಉಪಬಂಧಗಳ ಮೇರೆಗೆ ರಚಿಸಿದ ನಿಯಮಗಳಲ್ಲಿ ಅದಕ್ಕಾಗಿ ಉಪಬಂಧ ಕಲ್ಪಿಸುವುದರ ಮೂಲಕ ಈ ಘಟನೆಗಳ ವಿಳಂಬ ನೋಂದಣಿಗಾಗಿ 5 ಪೈಸೆ ಅಥವಾ 10 ಪೈಸೆ ನಾಮಮಾತ್ರ ಶುಲ್ಕವನ್ನು ನಿಗದಿಪಡಿಸಲು ಅನುಮತಿ ಇರುತ್ತದೆ.

ಆದರೆ, 13ನೇ ಪ್ರಕರಣದ (3) ಉಪಪ್ರಕರಣದ ಮೇರೆಗೆ ಕೆಲವು ತೊಂದರೆಗಳು ಉದ್ಭವಿಸುವ ಸಂಭವವಿದೆ. ಯಾವುದೇ ಜನನ ಅಥವಾ ಮರಣದ ಯಾವುದೇ ಘಟನೆಯನ್ನು ಅದು ಸಂಭವಿಸಿದ ಒಂದು ವರ್ಷದೊಳಗೆ ನೋಂದಾಯಿಸಿರದಿದ್ದರೆ ಮೊದಲನೇ ದರ್ಜೆಯ ದಂಡಾಧಿಕಾರಿ ಅಥವಾ ಮಹಾ ಪ್ರಾಂತ ದಂಡಾಧಿಕಾರಿಯು ಮಾಡಿದ ಆದೇಶದ ಮೇಲೆ ಮಾತ್ರವೇ ನೋಂದಣಿ ಮಾಡಬಹುದು. ಈ ಉಪಬಂಧದ ದೃಷ್ಟಿಯಿಂದ, ಅಂಥ ವಿಳಂಬ ನೋಂದಣಿಯ ಪ್ರತಿಯೊಂದು ಪ್ರಕರಣವನ್ನು ದಂಡಾಧಿಕಾರಿಯ ಮೂಲಕ ನಿರ್ಧರಿಸಲಾಗುವುದು ಮತ್ತು ಅಂಥ ದಂಡಾಧಿಕಾರಿಯ ಮುಂದಿರುವ ವ್ಯವಹರಣೆಗಳು ಅದರದೇ ಆದ ಕಾಲವನ್ನು ತೆಗೆದುಕೊಳ್ಳುತ್ತವೆ. ಈ ದೃಷ್ಟಿಯಿಂದ ಅದನ್ನು ಎಚ್ಚರಿಕೆಯಿಂದ ಪರ್ಯಾಲೋಚಿಸುವುದು ಅಗತ್ಯವಾಗಿದೆ.

ಅಲ್ಲದೆ, ಅಧಿನಿಯಮದ 23ನೇ ಪ್ರಕರಣದ (1)ನೇ ಮತ್ತು (4)ನೇ ಉಪಪ್ರಕರಣದ ಉಪಬಂಧಗಳು ಸಹ ವಿಳಂಬ ನೋಂದಣಿಯ ಪ್ರತಿಯೊಂದು ಪ್ರಕರಣಕ್ಕೆ ಅನ್ವಯವಾಗುತ್ತವೆ. ಆದಾಗ್ಯೂ, 24ನೇ ಪ್ರಕರಣವು ಮುಖ್ಯ ರಿಜಿಸ್ಟ್ರಾರರಿಂದ ಅಧಿಕೃತನಾದ ಯಾರೇ ಅಧಿಕಾರಿಯು 50 ರೂ.ಗಳಿಗೆ ಮೀರದ ರಾಜಿ ಶುಲ್ಕವನ್ನು ಸ್ವೀಕರಿಸುವ ಮೂಲಕ ಅಂಥ ಅಪರಾಧಗಳ ರಾಜಿ ಮಾಡುವುದಕ್ಕೆ ಅಧಿಕಾರ ನೀಡುತ್ತದೆ. ಆದ್ದರಿಂದ "ಸಪ್ತಾಹ"ದ ಅವಧಿಯಲ್ಲಿ ವಿಳಂಬ ನೊಂದಣಿಯ ಪ್ರತಿಯೊಂದು ಪ್ರಕರಣದಲ್ಲಿ ಸಂಬಂಧಪಟ್ಟ ವ್ಯಕ್ತಿಯಿಂದ ನಾಮಪತ್ರ ಶುಲ್ಕದ ರೂಪದಲ್ಲಿ ರಾಜೀ ಶುಲ್ಕವನ್ನು ತೆಗೆದುಕೊಳ್ಳಬೇಕಾಗಿದೆ.

ಸದರಿ "ಸಪ್ತಾಹ"ದ ಅವಧಿಯಲ್ಲಿ ಸರ್ಕಾರದ ಸೇವೆಯಲ್ಲಿ ಅನುಕೂಲಕರ ಪ್ರಯೋಜನಗಳನ್ನು ಪಡೆಯುವ ಉದ್ದೇಶದಿಂದ ತಪ್ಪಾದ ಜನನದ ದಿನಾಂಕವನ್ನು ದಾಖಲಿಸುವ ಮೂಲಕ ವಿಳಂಬ ನೋಂದಣಿಯ ಪ್ರಯೋಜನವನ್ನು ದುರುಪಯೋಗಿಸಿಕೊಳ್ಳದಂತೆ ಎಚ್ಚರಿಕೆ ವಹಿಸಬೇಕು.

46. ಪ್ರಶ್ನೆ : ಒಬ್ಬ ವ್ಯಕ್ತಿಯು 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿಳಂಬ ಶುಲ್ಕ ಸಂದಾಯದೊಂದಿಗೆ ಮೂಲ ಘಟನೆ ಸಂಭವಿಸಿದ ದಿನಾಂಕದಿಂದ 29ನೇ ದಿನದಂದು ಲಿಖಿತದಲ್ಲಿ ರಿಜಿಸ್ಟ್ರಾರರಿಗೆ ಮಾಹಿತಿಯನ್ನು ಒದಗಿಸಿದ್ದಾನೆ. ರಿಜಿಸ್ಟ್ರಾರರು ಸ್ವೀಕರಿಸಿದ ದಿನಾಂಕದಿದ 6 ದಿವಸಗಳ ತರುವಾಯ ಘಟನೆಯನ್ನು

ನೋಂದಾಯಿಸಿದ್ದಾರೆ. ರಿಜಿಸ್ಟ್ರಾರರು ಘಟನೆಯ ನೋಂದಣಿಗಾಗಿ ಯಾವುದೇ ದಂಡವನ್ನು ಸಂದಾಯ ಮಾಡಲು ಬದ್ಧರಾಗಿದ್ದಾರೆಯೇ ಮತ್ತು ಜಿಲ್ಲಾ ರಿಜಿಸ್ಟ್ರಾರರಿಂದ ಲಿಖಿತ ಅನುಮತಿ ಪಡೆಯಬೇಕೇ ಎಂಬುದನ್ನು ಸ್ಪಷ್ಟೀಕರಿಸಬೇಕು?

ಸ್ಪಷ್ಟೀಕರಣ : 13ನೇ ಪ್ರಕರಣದ (2) ನೇ ಉಪಪ್ರಕರಣವು ಮೂವತ್ತು ದಿನಗಳ ತರುವಾಯ ರಿಜಿಸ್ಟ್ರಾರರಿಗೆ ಮಾಹಿತಿ ನೀಡಿದರೆ ಮಾತ್ರ ಅನ್ವಯವಾಗುತ್ತದೆ.

47. ಪ್ರಶ್ನೆ : ಮುಖ್ಯ ರಿಜಿಸ್ಟ್ರಾರರು, ಕೇರಳ ಇವರ ಗಮನಕ್ಕೆ ಬಂದಿರುವ ಒಂದು ಪ್ರಕರಣದಲ್ಲಿ ಒಬ್ಬ ವ್ಯಕ್ತಿಯು ಘಟನೆ ಸಂಭವಿಸಿದ 10 ತಿಂಗಳ ತರುವಾಯ ರಿಜಿಸ್ಟ್ರಾರರಿಗೆ ಘಟನೆಯ ಮಾಹಿತಿ ನೀಡಿದ್ದಾನೆ. ಜನನ ಮತ್ತು ಮರಣಗಳ ಅಧಿನಿಯಮ, 1969ರ 13(2)ನೇ ಪ್ರಕರಣದ ಮತ್ತು ಅನುರೂಪವಾದ ರಾಜ್ಯ ನಿಯಮಗಳ 10(2)ನೇ ನಿಯಮದ ಅನುಸಾರ ಘಟನೆಯನ್ನು ನೋಂದಣಿ ಮಾಡಲು ಜಿಲ್ಲಾ ರಿಜಿಸ್ಟ್ರಾರರ ಅನುಮತಿಯು ಅಗತ್ಯವಾಗಿದೆ. ಜಿಲ್ಲಾ ರಿಜಿಸ್ಟ್ರಾರರ ಲಿಖಿತ ಅನುಮತಿ ಪತ್ರವನ್ನು ಹಾಜರುಪಡಿಸುವ ಸಮಯಕ್ಕೆ ಒಂದು ವರ್ಷ ಕಳೆದು ಹೋಗಿತ್ತು ಮತ್ತು ತತ್ಪರಿಣಾಮವಾಗಿ ಅಧಿನಿಯಮದ 13ನೇ ಪ್ರಕರಣದ (3)ನೇ ಉಪಪ್ರಕರಣದ ಅನುರೂಪವಾದ ರಾಜ್ಯ ನಿಯಮಗಳ 10(3)ನೇ ನಿಯಮದ ಮೇರೆಗೆ ಉಪಬಂಧಿಸಲಾದಂತೆ ಘಟನೆಯನ್ನು ನೋಂದಣಿ ಮಾಡಲು ಮೊದಲನೆ ದರ್ಜೆಯ ಮ್ಯಾಜಿಸ್ಟ್ರೇಟರಿಂದ ಅನುಮತಿ ಪಡೆಯುವುದು ಅವಶ್ಯಕವಾಗುವುದು. ಇದರಿಂದ ಪಕ್ಷಕಾರರಿಗೆ ಅನಾನುಕೂಲವಾಗಿದೆ. ಅಂಥ ಅನಾನುಕೂಲತೆಯನ್ನು ಹೋಗಲಾಡಿಸುವುದಕ್ಕಾಗಿ ಈ ಮುಂದಿನ ಪ್ರಕ್ರಿಯೆಯನ್ನು ಪರಿಗಣನೆಗಾಗಿ ಸೂಚಿಸಲಾಗಿದೆ.

ರಿಜಿಸ್ಟ್ರಾರನು ಜಿಲ್ಲಾ ರಿಜಿಸ್ಟ್ರಾರರಿಂದ ತಾತ್ಕಾಲಿಕ ಲಿಖಿತ ಅನುಮತಿ ಸ್ವೀಕೃತಿಯನ್ನು ಪಡೆದ ನಂತರ ಮಾಹಿತಿದಾರನ ಸಹಿ ಇಲ್ಲದೆ ಮತ್ತು ತಾನು ಸಹಿ ಮಾಡದೆ ಅಗತ್ಯವಾದ ಔಪಚಾರಿಕ ಪ್ರಕ್ರಿಯೆಗಳ ಪಾಲನೆಯನ್ನು ಬಾಕಿಯಿರಿಸಿ ರಿಜಿಸ್ಟ್ರಾರಿನಲ್ಲಿ ಘಟನೆಯ ವಿವರಗಳನ್ನು ನಮೂದಿಸಿಕೊಳ್ಳಬಹುದು. ಅಂಥ ತಾತ್ಕಾಲಿಕ ಅನುಮತಿಯು ಸಹಿಯನ್ನು ಹೊರತುಪಡಿಸಿ ರಿಜಿಸ್ಟರಿನಲ್ಲಿ ಬೇರೆ ಬೇರೆ ನಮೂದುಗಳನ್ನು ಮಾಡಿಕೊಳ್ಳುವ ಸಲುವಾಗಿ ಅನುಕೂಲ ಮಾಡಿಕೊಡುವುದಕ್ಕೆ ಸಾಕಾಗುವುದು. ಮೇಲೆ ಹೇಳಿದ ರೀತಿಯಲ್ಲಿ ಒಂದು ಸಲ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದ್ದರೆ 10(3)ನೇ ನಿಯಮ ಅನ್ವಯವಾಗುವುದಿಲ್ಲ. ಆದಾಗ್ಯೂ ಜಿಲ್ಲಾ ರಿಜಿಸ್ಟ್ರಾರರಿಂದ ಅಂತಿಮ ಅನುಮತಿಯನ್ನು ಸ್ವೀಕರಿಸಿದಾಗ ರಿಜಿಸ್ಟರಿನಲ್ಲಿ ಸಹಿ ಮಾಡುವುದರೊಂದಿಗೆ ನೋಂದಣಿಯ ಪೂರ್ಣಗೊಳ್ಳುತ್ತದೆ. ಅನುಮತಿಯನ್ನು ನಿರಾಕರಿಸಿದ ಸಂದರ್ಭದಲ್ಲಿ ನಮೂದನ್ನು ಹೊಡೆದುಹಾಕಲಾಗುವುದು.

ಮೇಲಿನ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಬಹುದೇ ಎಂಬ ಬಗ್ಗೆ, ಸ್ಪಷ್ಟೀಕರಣ ನೀಡಬೇಕು. ಇದಕ್ಕೆ ಜನನ ಮತ್ತು ಮರಣಗಳ ನಿಯಮಗಳು, 1970ರ ನಿಯಮ 10(2) ಅನ್ನು ತಿದ್ದುಪಡಿ ಮಾಡುವುದು ಅವಶ್ಯಕವೇ ಅಥವಾ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರದ ಕಾರ್ಯಕಾರೀ ಆದೇಶದ ಮೂಲಕ ಅಳವಡಿಸಿಕೊಳ್ಳಬಹುದೇ ಎಂಬ ಬಗ್ಗೆ ಸಲಹೆ ನೀಡಬೇಕು.

ಸ್ಪಷ್ಟೀಕರಣ : ಕೇರಳ ಜನನ ಮತ್ತು ಮರಣಗಳ ನಿಯಮಗಳು, 1970ರ 10ನೇ ನಿಯಮದ (1)ನೇ, (2)ನೇ ಮತ್ತು (3)ನೇ ಉಪನಿಯಮಗಳು, ವಿಳಂಬ ಶುಲ್ಕ ಪ್ರಮಾಣವನ್ನು ಉಪಬಂಧಿಸುವುದನ್ನು ಹೊರತುಪಡಿಸಿ ಯಥೋಚಿತ ವ್ಯತ್ಯಾಸಗಳೊಂದಿಗೆ ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 13ನೇ ಪ್ರಕರಣದ (1)ನೇ,

(2)ನೇ ಮತ್ತು (3)ನೇ ಉಪಪ್ರಕರಣಗಳಂತೆಯೇ ರೀತಿಯಲ್ಲಿರುವುದನ್ನು ಕಾಣಬಹುದು. ನಿಯಮ 10(3) ಹಾಗೂ ಪ್ರಕರಣ 13(3) ಜನನ ಅಥವಾ ಮರಣವನ್ನು ಅದು, ಸಂಬಂಧಿಸಿದ ಒಂದು ವರ್ಷದೊಳಗೆ ನೋಂದಣಿ ಮಾಡಿಸದಿದ್ದರೆ ನಿರ್ದಿಷ್ಟಪಡಿಸಲಾದ ವರ್ಗದ ಮ್ಯಾಜಿಸ್ಟ್ರೇಟರ ಆದೇಶದ ಮೇಲೆ ಮತ್ತು ನಿರ್ದಿಷ್ಟಪಡಿಸಲಾದ ಶುಲ್ಕವನ್ನು ಸಂದಾಯ ಮಾಡಿದ ನಂತರ ಮಾತ್ರ ನೋಂದಣಿ ಮಾಡತಕ್ಕದೆಂಬುದನ್ನು ಉಪಬಂಧಿಸಿವೆ. 13ನೇ ಪ್ರಕರಣದ (1)ನೇ, (2)ನೇ ಉಪಪ್ರಕರಣಗಳು ಜನನ ಅಥವಾ ಮರಣಗಳಿಗೆ ಸಂಬಂಧಿಸಿದ ಮಾಹಿತಿ ಬಗ್ಗೆ ಮತ್ತು (3)ನೇ ಉಪಪ್ರಕರಣವು ನೋಂದಣಿ ಮಾಡಿಸಬೇಕಾದ ನಿರ್ದಿಷ್ಟ ಅವಧಿಯ ಬಗ್ಗೆ ಉಪಬಂಧ ಕಲ್ಪಿಸಿರುವುದು ಮಹತ್ವದ್ದಾಗಿದೆ. ಅಧಿನಿಯಮದಲ್ಲಿ, "ನೋಂದಣಿ" ಎಂಬ ಪದವನ್ನು ಪರಿಭಾಷಿಸಿಲ್ಲ. 11ನೇ ಪ್ರಕರಣವು ಅದನ್ನು ಮಾಡುವ ರೀತಿಯ ಬಗ್ಗೆ ಉಪಬಂಧ ಕಲ್ಪಿಸುತ್ತದೆ. ಒಂದು ಸಲ ಸದರಿ ಕಾರ್ಯವು ಪೂರ್ಣಗೊಂಡರೆ, ಜನನ ಅಥವಾ ಮರಣದ ನೋಂದಣಿಯಾಗಿದೆ ಎಂದು ಹೇಳಬಹುದು. ಮಾಹಿತಿದಾರನ ಮತ್ತು ರಿಜಿಸ್ಟ್ರಾರನ ಸಹಿಯಿಲ್ಲದೆ ಕೇವಲ ಸಂಬಂಧಪಟ್ಟ ಕಾಲಂಗಳನ್ನು ಭರ್ತಿ ಮಾಡಿದರೆ 11ನೇ ಪ್ರಕರಣದ ಮೇರೆಗೆ ನೊಂದಣಿಯಾಗಿದೆ ಎಂದು ಪರಿಗಣಿಸಲಾಗುವುದಿಲ್ಲ ಮತ್ತು ಆದ್ದರಿಂದ 13ನೇ ಪ್ರಕರಣದ (3)ನೇ ಉಪಪ್ರಕರಣದ ಉದ್ದೇಶಕ್ಕಾಗಿ ಆ ಸದರಿ ಜನನ ಅಥವಾ ಮರಣ ನೋಂದಣಿಯಾಗಿದೆ ಎಂದು ಹೇಳಲಾಗುವುದಿಲ್ಲ. 13ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಅಡಕವಾದ ಉಪಬಂಧ ಮಾಹಿತಿ ನೀಡುವುದರ ಮತ್ತು ನೋಂದಣಿಯ ನಡುವಿನ ಭಿನ್ನತೆಯನ್ನು ಗುರುತಿಸುತ್ತದೆ ಮತ್ತು ಘಟನೆಯನ್ನು ನೋಂದಣಿ ಮಾಡಲು, ನಿಯಮಿಸಿದ ಪ್ರಾಧಿಕಾರಿಯ ಲಿಖಿತ ಅನುಮತಿ ಅಗತ್ಯ ಪಡಿಸುತ್ತದೆ. ಮೇಲೆ ಹೇಳಿದಂತೆ, ಒಂದು ವರ್ಷದೊಳಗೆ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸದಿದ್ದರೆ (3)ನೇ ಉಪಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟರ ಆದೇಶ ಅಗತ್ಯವಾಗುತ್ತದೆ. ಅಧಿನಿಯಮ ಅಥವಾ ನಿಯಮಗಳೆರಡರಲ್ಲೂ ಜಿಲ್ಲಾ ರಿಜಿಸ್ಟ್ರಾರನಿಂದ ತಾತ್ಕಾಲಿಕ ಲಿಖಿತ ಅನುಮತಿ ಪಡೆಯಬೇಕೆಂಬ ಬಗ್ಗೆ ಉಪಬಂಧ ಕಲ್ಪಿಸಿಲ್ಲ. ಅಧಿನಿಯಮದ 13ನೇ ಪ್ರಕರಣದ (2)ನೇ ಉಪಪ್ರಕರಣ ಹಾಗೂ ನಿಯಮಗಳ 10ನೇ ನಿಯಮದ (2)ನೇ ಉಪನಿಯಮ ನಿಯಮಿಸಿದ ಪ್ರಾಧಿಕಾರಿಯಿಂದ ನಿರ್ದಿಷ್ಟ ರೀತಿಯಲ್ಲಿ ಲಿಖಿತ ಅನುಮತಿಯನ್ನು ಪಡೆಯುವುದು ಅಗತ್ಯವೆಂಬ ಬಗ್ಗೆ ಉಪಬಂಧ ಕಲ್ಪಿಸುತ್ತವೆ ಮತ್ತು ಈ ಉದ್ದೇಶಕ್ಕಾಗಿ ಜಿಲ್ಲಾ ರಿಜಿಸ್ಟ್ರಾರರು ನಿಯಮಿಸಿದ ಪ್ರಾಧಿಕಾರಿಯೆಂದು ಕಾಣುತ್ತದೆ. ನೋಂದಣಿ ಪ್ರಕ್ರಿಯೆ ಪೂರ್ಣವಾಗದಿದ್ದರೆ, ನಿಯಮ 10(3) ಅನ್ವಯವಾಗುತ್ತದೆ. ಅಧಿನಿಯಮದ 13ನೇ ಪ್ರಕರಣದ (2)ನೇ ಮತ್ತು (3)ನೇ ಉಪಪ್ರಕರಣದಲ್ಲಿ ಅಡಕವಾದ ಉಪಬಂಧಗಳ ದೃಷ್ಟಿಯಿಂದ ನಿಯಮ 10(2)ರ ತಿದ್ದುಪಡಿಯ ಯಾವುದೇ ರೀತಿಯಲ್ಲಿ ಸಹಾಯಕವಾಗುವುದಿಲ್ಲ. 13ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರಿಯಿಂದ ಪ್ರಕರಣದ ತ್ವರಿತ ವಿಲೇವಾರಿ ಅಥವಾ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ಇವೆರಡರಿಂದಲೂ ಮಾತ್ರ ಇದಕ್ಕೆ ಪರಿಹಾರ ದೊರೆಯುವುದು ಸಾಧ್ಯವಾಗುತ್ತದೆ.

**48. ಪ್ರಶ್ನೆ** : ದಂಡ ಪ್ರಕ್ರಿಯಾ ಸಂಹಿತೆ, 1973, 1.4.1974ರಿಂದ ಜಾರಿಗೆ ಬಂದ ತರುವಾಯ, ಪಶ್ಚಿಮ ಬಂಗಾಳ ಸರ್ಕಾರವು ಪಶ್ಚಿಮ ಬಂಗಾಳ ಜನನ ಮತ್ತು ಮರಣಗಳ ನಿಯಮಗಳು, 1972ರ ನಿಯಮ 10(3)ರ ಮೇರೆಗಿನ ಅಧಿಕಾರವನ್ನು ಚಲಾಯಿಸುವ ಅಧಿಕಾರವನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ನೀಡಬೇಕೆಂದು ಕೋರಿದೆ. ಅಧಿನಿಯಮದ

13 (3)ನೇ ಪ್ರಕರಣದಲ್ಲಿ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟ್ ಅಥವಾ ಮಹಾಪ್ರಾಂತ ಮ್ಯಾಜಿಸ್ಟ್ರೇಟ್ (ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್) ಮಾತ್ರ ಎಂದು ನಿರ್ದಿಷ್ಟಪಡಿಸಲಾಗಿರುವುದರಿಂದ, ಅಧಿಕಾರವನ್ನು ಮೊದಲನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಮಹಾನಗರ ಮ್ಯಾಜಿಸ್ಟ್ರೇಟ್ ಮಾತ್ರವೇ ಚಲಾಯಿಸಬಹುದಾಗಿದೆಯೇ ಹೊರತು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರಲ್ಲ. ಇದಕ್ಕೆ ಜನನ ಮತ್ತು ಮರಣಗಳ ಅಧಿನಿಯಮ, 1969ನ್ನು ತಿದ್ದುಪಡಿ ಮಾಡುವುದು ಅಗತ್ಯವೇ ಅಥವಾ ಪಶ್ಚಿಮ ಬಂಗಾಳ ಜನನ ಮತ್ತು ಮರಣಗಳ ನಿಯಮಗಳು, 1972ರ ನಿಯಮ (10)3ಕ್ಕೆ ಮಾಡುವ ತಿದ್ದುಪಡಿ ಮಾತ್ರವೇ ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ ಅನುಮತಿಸಲಾದ ಯುಕ್ತ ಮ್ಯಾಜಿಸ್ಟ್ರೇಟ್‌ರನ್ನು ನಿರ್ದಿಷ್ಟಪಡಿಸುವ ಉದ್ದೇಶವನ್ನು ಈಡೇರಿಸುತ್ತದೆಯೆ ಎಂಬ ಬಗ್ಗೆ ಸಹ ಸಲಹೆಯನ್ನು ನೀಡಬೇಕಾಗಿದೆ.

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 13ನೇ ಪ್ರಕರಣದ (3)ನೇ ಉಪಪ್ರಕರಣವು, ಜನನ ಅಥವಾ ಮರಣವನ್ನು ಅದು ಘಟಿಸಿದ ಒಂದು ವರ್ಷಕ್ಕೂ ಹೆಚ್ಚು ವಿಳಂಬ ಮಾಡಿ ನೊಂದಣಿ ಮಾಡುವ ಸಂದರ್ಭದಲ್ಲಿ, ಅದನ್ನು ಮೊದಲನೇ ವರ್ಗದ ಮ್ಯಾಜಿಸ್ಟ್ರೇಟ್ ಅಥವಾ ಮಹಾಪ್ರಾಂತ ಮ್ಯಾಜಿಸ್ಟ್ರೇಟ್‌ರು ಜನನ ಅಥವಾ ಮರಣದ ಯಥಾರ್ಥತೆಯನ್ನು ಪರಿಶೀಲಿಸಿದ ನಂತರ ಮಾಡಿದ ಆದೇಶದ ಮೇಲೆ ಮತ್ತು ನಿಯಮಿಸಿದ ಶುಲ್ಕ ಸಂದಾಯದ ನಂತರ ಮಾತ್ರ ನೋಂದಣಿ ಮಾಡತಕ್ಕದ್ದೆಂದು ಉಪಬಂಧ ಕಲ್ಪಿಸುತ್ತದೆ.

ಜನನ ಅಥವಾ ಮರಣದ ಯಥಾರ್ಥತೆಯನ್ನು ಪರಿಶೀಲಿಸುವ ಈ ಪ್ರಕಾರ್ಯವು ಸಾಕ್ಷ್ಯದ ಗುಣಾವಗುಣ ವಿವೇಚನೆ ಅಥವಾ ವಿಮರ್ಶಾತ್ಮಕ ಪರಿಶೀಲನೆ ಅಥವಾ ತೀರ್ಮಾನವನ್ನು ರೂಪಿಸುವುದನ್ನು ಒಳಗೊಳ್ಳಬಹುದು. ಆದರೆ ಆ ತೀರ್ಮಾನವು ಯಾರೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಅಥವಾ ದಂಡನೆಗೆ ಗುರಿ ಮಾಡುವ ಅಥವಾ ಯಾರೇ ವ್ಯಕ್ತಿಯನ್ನು ಅಧಿವಿಚಾರಣೆಗೆ ಕಳುಹಿಸುವ ಪರಿಣಾಮವನ್ನು ಹೊಂದಿರುವುದಿಲ್ಲ. ಹಾಗಾಗಿ ಇದು ದಂಡ ಪ್ರಕ್ರಿಯಾ ಸಂಹಿತೆ, 1973ರ 3ನೇ ಪ್ರಕರಣದ (4)ನೇ ಉಪಪ್ರಕರಣದ (ಎ) ಖಂಡದ ಅರ್ಥವ್ಯಾಪ್ತಿಯೊಳಗೆ ಬರುವುದಿಲ್ಲ. ಹೆಚ್ಚೆಂದರೆ ಇದನ್ನು ನ್ಯಾಯಿಕ ಸ್ವರೂಪದ ಪ್ರಕಾರ್ಯವೆಂದು ಹೇಳಬಹುದು. ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ ಮೇರೆಗೆ ಸದರಿ ಅಧಿನಿಯಮದ 13(3)ನೇ ಪ್ರಕರಣದ ಮೇರೆಗಿನ ಪ್ರಕಾರ್ಯವನ್ನು ಆಡಳಿತಾತ್ಮಕ ಅಥವಾ ಕಾರ್ಯಕಾರೀ ಸ್ವರೂಪದ್ದೆಂದು ಪರಿಗಣಿಸಲಾಗುತ್ತದೆ. ದಂಡ ಪ್ರಕ್ರಿಯಾ ಸಂಹಿತೆ, 1973ರ 3ನೇ ಪ್ರಕರಣದ (4)ನೆ ಉಪಪ್ರಕರಣದ(ಬಿ) ಖಂಡವು ಸಂಹಿತೆಯನ್ನು ಹೊರತುಪಡಿಸಿ ಯಾವುದೇ ಕಾನೂನಿನ ಮೇರೆಗೆ ಮ್ಯಾಜಿಸ್ಟ್ರೇಟ್‌ರು ಚಲಾಯಿಸಬಹುದಾದ ಆಡಳಿತಾತ್ಮಕ ಅಥವಾ ಕಾರ್ಯನಿರ್ವಾಹಕ ಸ್ವರೂಪದ್ದಾಗಿರುವ ಪ್ರಕಾರ್ಯವನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರು ಚಲಾಯಿಸತಕ್ಕದ್ದೆಂದು ಉಪಬಂಧ ಕಲ್ಪಿಸಿದೆ. ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 13ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗಿನ ಪ್ರಕಾರ್ಯಗಳನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರು ಚಲಾಯಿಸಬಹುದು.

49. ಪ್ರಶ್ನೆ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ ಜಾರಿಯ ದಿನಾಂಕಕ್ಕೆ ಮುಂಚೆ ಸಂಭವಿಸಿದ ಜನನ ಅಥವಾ ಮರಣದ ಘಟನೆಯನ್ನು ನೋಂದಾಯಿಸಬಹುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969 ಜಾರಿಗೆ ಬರುವುದಕ್ಕಿಂತ ಮುಂಚೆ ಸಂಭವಿಸಿದ ಜನನ ಮತ್ತು ಮರಣಗಳ ಘಟನೆಯನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ನೋಂದಾಯಿಸಬಹುದು. ವಿಳಂಬ ನೋಂದಣಿಗೆ ಸಂಬಂಧಿಸಿರುವ 13ನೇ ಪ್ರಕರಣದ ಉಪಬಂಧಗಳು ಸಹ ಅಂತಹ ಘಟನೆಯ ನೋಂದಣಿಯಲ್ಲಿ ಅನ್ವಯವಾಗುತ್ತವೆ.

50. ಪ್ರಶ್ನೆ : ಜಿಲ್ಲಾ ಸಾಂಖ್ಯಿಕ ಅಧಿಕಾರಿ (ಜಿಲ್ಲಾ ರಿಜಿಸ್ಟ್ರಾರನು)ಯು ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 13ನೇ ಪ್ರಕರಣದ (2)ನೇ ಅಥವಾ (3)ನೇ ಉಪಪ್ರಕರಣಗಳ ಉಪಬಂಧಗಳ ಮತ್ತು ಬಿಹಾರ ಜನನ ಮತ್ತು ಮರಣಗಳ ನೋಂದಣಿ ನಿಯಮಗಳು, 1970ರ ನಿಯಮ 10(3)ಮೇರೆಗೆ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟ್‌ರ ಸ್ಥಾನದಲ್ಲಿ ಕಾರ್ಯನಿರ್ವಹಿಸಬಹುದೇ?

ಸ್ಪಷ್ಟೀಕರಣ : ಅಧಿನಿಯಮದ 13ನೇ ಪ್ರಕರಣದ (2)ನೇ ಮತ್ತು (3)ನೇ ಉಪಪ್ರಕರಣ ಮತ್ತು ಬಿಹಾರ ಜನನ ಮತ್ತು ಮರಣಗಳ ನೋಂದಣಿ ನಿಯಮಗಳು, 1970ರ 10ನೇ ನಿಯಮದ (2)ನೇ ಮತ್ತು (3)ನೇ ಉಪನಿಯಮಗಳು ಜನನ ಮತ್ತು ಮರಣಗಳ ವಿಳಂಬ ನೋಂದಣಿಗಾಗಿ ಪ್ರತ್ಯೇಕ ಪ್ರಾಧಿಕಾರಗಳು ಅನುಮತಿ ನೀಡಬಹುದೆಂದು ಉಪಬಂಧ ಕಲ್ಪಿಸಿದೆ. ಒಂದು ವರ್ಷದ ಅವಧಿಯೊಳಗೆ ನೋಂದಾಯಿಸಿರದ ಜನನ/ಮರಣದ ಸಂದರ್ಭದಲ್ಲಿ ಮಾತ್ರ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟ್‌ರ ಆದೇಶದ ಅಗತ್ಯವಿದೆ ಮತ್ತು ಪ್ರಕರಣ 13(3)ರ ಉಪಬಂಧಗಳು ಮತ್ತು ಈ ಸಂದರ್ಭದಲ್ಲಿ ಅನ್ವಯವಾಗುತ್ತವೆ. ಜಿಲ್ಲಾ ರಿಜಿಸ್ಟ್ರಾರರಾಗಿರುವ ಜಿಲ್ಲಾ ಸಾಂಖ್ಯಿಕ ಅಧಿಕಾರಿಗೆ ಮೊದಲನೆ ದರ್ಜೆಯ ಮ್ಯಾಜಿಸ್ಟ್ರೇಟ್‌ರ ಅಧಿಕಾರಗಳನ್ನು ನೀಡಲಾಗುವುದಿಲ್ಲ ಏಕೆಂದರೆ ಅಧಿನಿಯಮದ ಪ್ರಕಾರ ಈ ಅಧಿಕಾರಗಳನ್ನು ಯಾರೇ ಇತರ ವ್ಯಕ್ತಿಗೆ ಪ್ರತ್ಯಾಯೋಜಿಸಲು ಅವಕಾಶವಿಲ್ಲ.

51. ಪ್ರಶ್ನೆ : ಜನನ ಮತ್ತು ಮರಣಗಳ ನೋಂದಣಿ ಆದಿನಿಯಮ, 1969ರ 13ನೇ ಪ್ರಕರಣದ (3)ನೇ ಉಪಪ್ರಕರಣದ ಪ್ರಕಾರ ಜನನ ಅಥವಾ ಮರಣವನ್ನು, ಅದು ಸಂಭವಿಸಿದ ಒಂದು ವರ್ಷದೊಳಗೆ ನೋಂದಾಯಿಸದಿದ್ದಲ್ಲಿ ಅದನ್ನು ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟ್ ಅಥವಾ ಮಹಾಪ್ರಾಂತ ಮ್ಯಾಜಿಸ್ಟ್ರೇಟ್‌ರು ಜನನ ಅಥವಾ ಮರಣದ ಯಥಾರ್ಥತೆಯನ್ನು ಪರಿಶೀಲಿಸದ ನಂತರ ಮಾಡಿದ ಆದೇಶದ ಮೇಲೆ ಮತ್ತು ನಿಯಮಿಸಿದ ಶುಲ್ಕದ ಸಂದಾಯದ ಮೇಲೆ ಮಾತ್ರ ನೋಂದಣಿ ಮಾಡತಕ್ಕದ್ದು. ಇತ್ತೀಚೆಗೆ, ಮೊದಲನೆ ದರ್ಜೆಯ ಮ್ಯಾಜಿಸ್ಟ್ರೇಟ್‌ರು ಆದೇಶದಲ್ಲಿ ದಂಪತಿಗಳ ದತ್ತಕ ಮಗುವಿನ ಜನನವನ್ನು ನೋಂದಾಯಿಸಿಬೇಕೆಂದು ಹೇಳಲಾಗಿದೆ. ಆದರೆ ಆ ದತ್ತಕವು ಜಾರಿಯಲ್ಲಿರುವ ದತ್ತಕ ಕಾನೂನಿನ ಮೇರೆಗೆ ಕಾನೂನುರೀತ್ಯಾ ಮಾನ್ಯತೆ ಪಡೆದಿರುವುದಿಲ್ಲವೆಂದು ಪರಿಶೀಲಿಸಲಾಗಿದೆ. ಸಂಬಂಧಪಟ್ಟ ವ್ಯಕ್ತಿಯ ಕಾನೂನು ಸಮ್ಮತತೆ, ಅವನನ್ನು ದತ್ತಕ ತೆಗೆದುಕೊಂಡಿರುವ ವ್ಯಕ್ತಿಗಳೆಲ್ಲರು ಮೃತರಾಗಿರುವುದರಿಂದ ಸಾಬೀತಾಗಿರುವುದಿಲ್ಲ ಅಥವಾ ಆತನ ನಿಜವಾದ ತಂದೆ ತಾಯಿಗಳ ಹೆಸರನ್ನು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ನೋಂದಣಿ ಕಚೇರಿಗಳಲ್ಲೊಂದಾದ ಈ ಕಚೇರಿಯ ಗಮನಕ್ಕೆ ಬಂದಿರುತ್ತದೆ. ನೋಂದಣಿಯ ಉದ್ದೇಶಕ್ಕಾಗಿ, ಮೊದಲನೆ ದರ್ಜೆಯ ಮ್ಯಾಜಿಸ್ಟ್ರೇಟ್‌ರು ಹೊರಡಿಸಿರುವ ಆದೇಶವೇ ಆಧಾರವಾಗಿರುತ್ತದೆ. ಆದರೆ ಕಾನೂನಿನ ಮೇರೆಗೆ ದತ್ತಕವು ರುಜುವಾತಾದ ಹೊರತು "ದತ್ತಕ ಮಗು" ಎಂದು ಜನನವನ್ನು ನೋಂದಾಯಿಸಬಹುದೇ ಎಂಬ ಸಂಶಯವು ಉದ್ಭವವಾಗಿದೆ ದಯವಿಟ್ಟು ಸ್ಪಷ್ಟೀಕರಿಸಿ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 13ನೇ ಪ್ರಕರಣದ ಮೇರೆಗೆ ನೀಡಬೇಕೆಂದು ಅಗತ್ಯಪಡಿಸಿದ ಮಾಹಿತಿಯು ಅಧಿನಿಯಮದಲ್ಲಿ ಪರಿಭಾಷಿಸಲಾದಂತೆ ಜನನ ಮತ್ತು ಮರಣದ್ದಾಗಿರುತ್ತದೆ. ಇದನ್ನು ನೈಜ ತಂದೆ ತಾಯಿಯರು ನೀಡಬಹುದು ಅಥವಾ ಸಾಕಷ್ಟು ಸಾಕ್ಷ್ಯವನ್ನು 13ನೇ ಪ್ರಕರಣದ ಮೇರೆಗೆ ಉಪಬಂಧಿಸಲಾದಂತೆ ನಿಯಮಿಸಿದ ಅವಧಿಯೊಳಗೆ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಬಹುದು. ಈ ದೃಷ್ಟಿಯಿಂದ, ಆ ಮಗುವಿನ ತಂದೆ ತಾಯಿಯರು ಇಲ್ಲದಿದ್ದಲ್ಲಿ ಜನನದ ಸಾಕ್ಷ್ಯವನ್ನು ಜನನದ ಬಗ್ಗೆ ತಿಳಿದಿರುವ ಯಾರೊಬ್ಬ ಸ್ಥಳೀಯ ನಿವಾಸಿಗಳು ನೀಡಬಹುದು. ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟ್ ಆದೇಶದಲ್ಲಿ ಜನನವನ್ನು ನೋಂದಾಯಿಸಬೇಕಾಗಿರುವುದು ದತ್ತಕ ಮಗುವಿನದೆಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ದುರದೃಷ್ಟವಶಾತ್ ದತ್ತಕ ತೆಗೆದುಕೊಂಡಿರುವ ದಂಪತಿಗಳೂ ಸಹ ಮೃತರಾಗಿದ್ದಾರೆ ಮತ್ತು ನಿಜವಾದ ತಂದೆ ತಾಯಿಯ ಹೆಸರನ್ನು ತಿಳಿದುಕೊಳ್ಳುವುದು ಸಾಧ್ಯವಾಗುವುದಿಲ್ಲ. ಹೀಗಿರುವಾಗ, ದತ್ತಕ ಮಗುವಿನ ಜನನವನ್ನು ನೋಂದಾಯಿಸಲು ಕಾನೂನಿನ ಆಕ್ಷೇಪಣೆ ಏನೂ ಇಲ್ಲದಿದ್ದರೂ ದತ್ತಕ ಮಗುವಿನ ನಿಜವಾದ ತಂದೆ ತಾಯಿಯರ ಹೆಸರನ್ನು ರಿಜಿಸ್ಟರಿನಲ್ಲಿ ನಮೂದಿಸುವುದು ಅವಶ್ಯಕವಾಗುತ್ತದೆ. ಈ ಪ್ರಕರಣದಲ್ಲಿ ದತ್ತಕವು ಕಾನೂನುಮಾನ್ಯವಲ್ಲರಿದುವುದರಿಂದ ದತ್ತಕ ಮಗುವಿನ ಹೆಸರನ್ನು ನಮೂದಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ದೃಷ್ಟಿಯಿಂದ, ಮಗುವಿನ ಜನನದ ಸಾಕ್ಷ್ಯವನ್ನು ನಿಜವಾದ ತಂದೆ ತಾಯಿಯರು ಅಥವಾ ಮಗುವಿನ ಜನನದ ಬಗ್ಗೆ ತಿಳಿದಿರುವ ವ್ಯಕ್ತಿಗಳು ಮಾತ್ರವೇ ನೀಡಬಹುದಾಗಿರುತ್ತದೆ.

52. ಪ್ರಶ್ನೆ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 13ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಜನನ/ಮರಣ ಸಂಗತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ/ಪರಿಶೀಲನೆಗಾಗಿ ನಿರ್ದಿಷ್ಟ ಪ್ರಕ್ರಿಯೆಯನ್ನು ನಿರೂಪಿಸುವ ಯುಕ್ತ ನಿಯಮಗಳನ್ನು ರಾಜ್ಯ ನಿಯಮಗಳಲ್ಲಿ ಮಾಡಬಹುದೇ?

ಸ್ಪಷ್ಟೀಕರಣ : ಮ್ಯಾಜಿಸ್ಟ್ರೇಟ್‌ರವರ ವಿವೇಚನೆಯನ್ನು ಪರಿಲೇಖಿಸಬಹುದಾದ ಅಥವಾ ಪರಿಮಿತಿಸಬಹುದಾದ ಯಾವುದೇ ಮಾರ್ಗಸೂಚಿಗಳನ್ನು ಹೊರಡಿಸುವುದು ಯುಕ್ತವಾಗಿರುವುದಿಲ್ಲ. ಮ್ಯಾಜಿಸ್ಟ್ರೇಟ್‌ರವರು ಪ್ರತಿ ಪ್ರಕರಣದ ಸಂಗತಿಯ ಅನುಸಾರವಾಗಿ ಅದರ ಗುಣಾವಗುಣಗಳನ್ನು ಆಧರಿಸಿ ಆದೇಶವನ್ನು ಹೊರಡಿಸುತ್ತಾರೆ.

53. ಪ್ರಶ್ನೆ : ರಾಜ್ಯ ನಿಯಮಗಳ ಮೇರೆಗೆ ನಿಯಮಿಸಿದ ಕಾಲಪರಿಮಿತಿಯೊಳಗೆ ಮಾಹಿತಿದಾರರು ಜನನ ಮರಣಗಳ ಘಟನೆಗಳನ್ನು ವರದಿ ಮಾಡಿದ್ದರೂ ರಾಜ್ಯದಲ್ಲಿ ಜನನ ಮರಣಗಳ ರಿಜಿಸ್ಟ್ರಾರರಾಗಿ ಕಾರ್ಯನಿರ್ವಹಿಸುತ್ತಿರುವ ತಲಾಟಿಯವರ ಮುಷ್ಕರದ ಕಾರಣದಿಂದಾಗಿ ಆ ಘಟನೆಗಳನ್ನು ನೋಂದಾಯಿಸಲಾಗಿಲ್ಲ. ರಾಜ್ಯ ಜನನ ಮತ್ತು ಮರಣಗಳ ಮುಖ್ಯ ನೋಂದಣಾಧಿಕಾರಿಗಳು ರಿಜಿಸ್ಟ್ರಾರರ ಮುಷ್ಕರದ ದೃಷ್ಟಿಯಿಂದ ಅಂಥ ಘಟನೆಗಳ ನೋಂದಣಿಗಾಗಿ ಕೆಲವು ವಿನಾಯಿತಿಗಳನ್ನು ನೀಡಲು ಉದ್ದೇಶಿಸಿರುತ್ತಾರೆ. ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ ಮೇರೆಗೆ ಅಂಥ ವಿನಾಯಿತಿ ನೀಡಲು ಅವಕಾಶವಿದೆಯೇ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 13ನೇ ಪ್ರಕರಣದ ಮೇರೆಗೆ ವ್ಯಕ್ತಿಯ ಜನನ ಅಥವಾ ಮರಣಕ್ಕೆ ಸಂಬಂಧಿಸಿದಂತೆ ಮಾಹಿತಿದಾರನು ರಿಜಿಸ್ಟ್ರಾರರಿಗೆ ತಿಳಿಸಲು ವಿಫಲನಾದ ಸಂದರ್ಭಗಳಲ್ಲಿ ಮಾತ್ರ ಅದರಲ್ಲಿ ಉದ್ದೇಶಿಸಿದ ಪ್ರಕ್ರಿಯೆಯನ್ನು ಅನುಸರಿಸಬೇಕಾಗಿದೆ.

ಮಾಹಿತಿದಾರರು ನಿಗದಿತ ಕಾಲದೊಳಗೆ ಘಟನೆಯನ್ನು ವರದಿ ಮಾಡುವುದು ಮತ್ತು ಅವರ ಕಡೆಯಿಂದ ಯಾವುದೇ ತಪ್ಪು ಆಗಿಲ್ಲವೆಂಬುದು ಕಂಡುಬರುತ್ತದೆ. ಇಲಾಖೆಯಲ್ಲಿ ಮುಷ್ಕರದ ಕಾರಣದಿಂದ ಮಾಹಿತಿದಾರರು ವರದಿ ಮಾಡಿದ ಘಟನೆಗಳನ್ನು ದಾಖಲಿಸಲು ಪ್ರಾಧಿಕಾರಿಗಳು ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಮೇಲಿನ ಸನ್ನಿವೇಶಗಳಲ್ಲಿ ಯಾವುದೇ ವಿಳಂಬ ಶುಲ್ಕ ವಿಧಿಸುವ ಹಾಗಿಲ್ಲ. ಏಕೆಂದರೆ, 13ನೇ ಪ್ರಕರಣವು ವ್ಯಕ್ತಿಯ ಜನನ ಅಥವಾ ಮರಣವನ್ನು ವರದಿ ಮಾಡುವುದಕ್ಕೆ ಮಾಹಿತಿದಾರರು ವಿಫಲರಾದ ಸಂದರ್ಭದಲ್ಲಿ ಮಾತ್ರ ಅನ್ವಯಿಸುತ್ತದೆ. ಪ್ರಾಧಿಕಾರಿಗಳು ಈ ಅಧಿನಿಯಮದ ಉಪಬಂಧಗಳಲ್ಲಿ ಯಾವುದೇ ವಿನಾಯಿತಿ ನೀಡದೆಯೇ ಮಾಹಿತಿದಾರರು ವರದಿ ಮಾಡಿದ ಘಟನೆಯನ್ನು ನೋಂದಾಯಿಸಬಹುದು.

54. ಪ್ರಶ್ನೆ : ಅಧಿನಿಯಮದ 13ನೇ ಪ್ರಕರಣದ (1)ನೆ ಮತ್ತು (2)ನೇ ಉಪಪ್ರಕರಣದ ಮೇರೆಗೆ ಘಟನೆಯನ್ನು ನೋಂದಾಯಿಸುವಲ್ಲಿ ತನ್ನ ಕಡೆಯಿಂದ ಆದ ಯಾವುದೇ ವಿಳಂಬದ ಸಂದರ್ಭದಲ್ಲಿ ರಿಜಿಸ್ಟ್ರಾರರು ವಿಳಂಬ ಶುಲ್ಕ ಸಂದಾಯ ಮಾಡಲು ಹೊಣೆಗಾರರಾಗುತ್ತಾರೆಯೇ?

ಸ್ಪಷ್ಟೀಕರಣ : 13ನೇ ಪ್ರಕರಣದ (2)ನೇ ಉಪಪ್ರಕರಣವು ಅಧಿನಿಯಮದ 8ನೇ ಅಥವಾ 9ನೇ ಪ್ರಕರಣದ ಪ್ರಕಾರ ಅಗತ್ಯಪಡಿಸಿದ ಮಾಹಿತಿಯನ್ನು ಮೂವತ್ತು ದಿವಸಗಳ ತರುವಾಯ ಆದರೆ ಘಟನೆ ಸಂಭವಿಸಿದ ದಿನಾಂಕದಿಂದ ಒಂದು ವರ್ಷದೊಳಗೆ ಒದಗಿಸಿದಾಗ ಅನ್ವಯವಾಗುತ್ತದೆ. ಆದರೆ, 13ನೇ ಪ್ರಕರಣದ (3)ನೇ ಉಪಪ್ರಕರಣವು ಘಟನೆ ಸಂಭವಿಸಿದ ಒಂದು ವರ್ಷದೊಳಗೆ ನೋಂದಾಯಿಸದಿದ್ದಾಗ ಅನ್ವಯವಾಗುತ್ತದೆ.

13ನೇ ಪ್ರಕರಣವು ಮಾಹಿತಿದಾರರು ಸಂಬಂಧಪಟ್ಟ ಉಪಪ್ರಕರಣಗಳ ಮೇರೆಗೆ ವಿಳಂಬ ಶುಲ್ಕ ಸಂದಾಯ ಮಾಡುವುದರ ಬಗ್ಗೆ ಮಾತ್ರ ಹೇಳುತ್ತದೆ. ರಿಜಿಸ್ಟ್ರಾರರು ಘಟನೆಯನ್ನು ನೋಂದಾಯಿಸುವಲ್ಲಿ ತಮ್ಮ ಕಡೆಯಿಂದ ಆದ ಯಾವುದೇ ವಿಳಂಬಕ್ಕಾಗಿ ವಿಳಂಬ ಶುಲ್ಕ ಸಂದಾಯ ಮಾಡಬೇಕೆಂಬ ಬಗ್ಗೆ ಯಾವುದೇ ಉಪಬಂಧವಿಲ್ಲ. ಆದರೆ, ರಿಜಿಸ್ಟ್ರಾರರಿಗೆ ಘಟನೆಯನ್ನು ನೋಂದಾಯಿಸುವಲ್ಲಿ ಆವರಿಂದ ಆದ ಯಾವುದೇ ಅನುಚಿತ ವಿಳಂಬಕ್ಕಾಗಿ ದಂಡ ವಿಧಿಸಬಹುದಾಗಿರುತ್ತದೆ. 23ನೇ ಪ್ರಕರಣದ (2)ನೇ ಉಪಪ್ರಕರಣವು, ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸಂಭವಿಸಿದ ಯಾವುದೇ ಜನನ ಅಥವಾ ಮರಣವನ್ನು ನೋಂದಣಿ ಮಾಡಲು ಅಥವಾ 19ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಯಾವುದೇ ವರದಿಯನ್ನು ಸಲ್ಲಿಸಲು ಯಾವುದೇ ಸಮಂಜಸ ಕಾರಣವಿಲ್ಲದೆ ಉಪೇಕ್ಷಿಸುವ ಅಥವಾ ನಿರಾಕರಿಸುವ ಯಾರೇ ರಿಜಿಸ್ಟ್ರಾರ್ ಅಥವಾ ಸಬ್-ರಿಜಿಸ್ಟ್ರಾರ್‌ನು 50 ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧ ಕಲ್ಪಿಸುತ್ತದೆ.

55. ಪ್ರಶ್ನೆ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 23ನೇ ಪ್ರಕರಣವು ದಂಡಗಳಿಗೆ ಸಂಬಂಧಿಸಿವೆ ಈ ಪ್ರಕರಣದ (5)ನೇ ಉಪಪ್ರಕರಣವು ಈ ಪ್ರಕರಣದ ಮೇರೆಗಿನ ಅಪರಾಧವನ್ನು ಮ್ಯಾಜಿಸ್ಟ್ರೇಟ್‌ರು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡತಕ್ಕದ್ದೆಂದು ನಿರೂಪಿಸುತ್ತದೆ. ಈ ಸಂಬಂಧದಲ್ಲಿನ ಮೊಕದ್ದಮೆಯನ್ನು ಕಾರ್ಯನಿರ್ವಾಯಕ ಮ್ಯಾಜಿಸ್ಟ್ರೇಟ್‌ರು ನ್ಯಾಯಾಲಯದಲ್ಲಿ ಹೂಡಬೇಕೇ ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟ್‌ರ ನ್ಯಾಯಾಲಯದಲ್ಲಿ ಹೂಡಬೇಕೆ ಎಂಬ ಬಗ್ಗೆ ಪ್ರಶ್ನೆ ಉಂಟಾಗಿದೆ.

ಸ್ಪಷ್ಟೀಕರಣ : ದಂಡ ಪ್ರಕ್ರಿಯಾ ಸಂಹಿತೆಯ 3ನೇ ಪ್ರಕರಣದ (4)ನೇ ಉಪಪ್ರಕರಣವು, ಯಾವುದೇ ಕಾನೂನಿನ ಮೇರೆಗೆ ಮ್ಯಾಜಿಸ್ಟ್ರೇಟ್‌ರು ಚಲಾಯಿಸಬಹುದಾದ ಪ್ರಕಾರ್ಯಗಳು ಸಾಕ್ಷ್ಯದ ಗುಣಾವಗುಣ ವಿವೇಚನೆ ಅಥವಾ ವಿಮರ್ಶಾತ್ಮಕ ಪರಿಶೀಲನೆಯನ್ನು ಅಥವಾ ಯಾವುದೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಅಥವಾ ದಂಡಕ್ಕೆ ಗುರಿಮಾಡುವ ಅಥವಾ ತನಿಖೆ ಅಥವಾ ವಿಚಾರಣೆ ಅಥವಾ ಅಧಿವಿಚಾರಣೆಯ ಕಾಲದಲ್ಲಿ ಅಭಿರಕ್ಷೆಯಲ್ಲಿ ಹಿಡಿದಿರಿಸುವ ಅಥವಾ ಆರೋಪ ವಿಚಾರಣೆಗಾಗಿ ಯಾವುದೇ ನ್ಯಾಯಾಲಯದ ಮುಂದೆ ಆತನನ್ನು ಕಳುಹಿಸುವ ಯಾವುದೇ ತೀರ್ಮಾನವನ್ನು ರೂಪಿಸುವುದನ್ನು ಒಳಗೊಳ್ಳುವ ವಿಷಯಗಳಿಗೆ ಸಂಬಂಧಿಸಿರುವಲ್ಲಿ ಒಬ್ಬ ನ್ಯಾಯಿಕ ಮ್ಯಾಜಿಸ್ಟ್ರೇಟ್‌ರಿಂದ ಚಲಾಯಿಸಲ್ಪಡತಕ್ಕದ್ದೆಂದು ಉಪಬಂಧಿಸುತ್ತದೆ.

**56. ಪ್ರಶ್ನೆ** : ಅಧಿನಿಯಮದ 13ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಹೇಳಲಾದಂತೆ ವಿಳಂಬ ನೋಂದಣಿಯ ಉಪಬಂಧಗಳ ಮೇರೆಗೆ ಜನನದ ಘಟನೆಯು ಸಂಭವಿಸಿದ ಸ್ಥಳವನ್ನು ಹೊರತುಪಡಿಸಿ ಬೇರೆ ಸ್ಥಳದಲ್ಲಿ ನೋಂದಣಿ ಮಾಡಬಹುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 13ನೆ ಪ್ರಕರಣದ (3) ಉಪಪ್ರಕರಣದ ಮೇರೆಗೆ ಜನನ/ಮರಣದ ಘಟನೆಯನ್ನು ಅದು ನಡೆದಂಥ ಸ್ಥಳದಲ್ಲಿಯೇ ನೋಂದಣಿ ಮಾಡಿಸಬೇಕಾಗಿದೆ. ಅಂಥ ಸಂದರ್ಭದಲ್ಲಿ, ಸಂಬಂಧಪಟ್ಟ ಪ್ರದೇಶದ ಅಧಿಕಾರ ವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟ್‌ರು ಆದೇಶದ ಮೇಲೆ ಮಾತ್ರ ನೋಂದಣಿ ಮಾಡಬೇಕು.

**57. ಪ್ರಶ್ನೆ** : ಅಧಿನಿಯಮ 13ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಜನನ ಮತ್ತು ಮರಣಗಳ ವಿಳಂಬ ನೋಂದಣಿಗಾಗಿ ಯಾವುದೇ ಕಾಲಪರಿಮಿತಿಯನ್ನು ಗೊತ್ತುಪಡಿಸಲಾಗಿದೆಯೇ?

ಸ್ಪಷ್ಟೀಕರಣ : ಅಧಿನಿಯಮದ 13ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ, ಸಧ್ಯದಲ್ಲಿರುವಂತೆ, ಅಂಥ ಘಟನೆಗಳ ವಿಳಂಬ ನೋಂದಣಿಯ ಮೇಲೆ ಯಾವುದೇ ಕಾಲಪರಿಮಿತಿ ವಿಧಿಸಿಲ್ಲ.

**58. ಪ್ರಶ್ನೆ** : 13ನೇ ಪ್ರಕರಣದ ಮತ್ತು ಅನುರೂಪವಾದ ರಾಜ್ಯ ನಿಯಮಗಳ ಮೇರೆಗೆ ಸಂದಾಯವಾಗುವ ಶುಲ್ಕವನ್ನು ಸಂಗ್ರಹಿಸಲು ಯಾರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 13ನೇ ಮತ್ತು 23ನೇ ಪ್ರಕರಣದ ಮತ್ತು ಅನುರೂಪವಾದ ರಾಜ್ಯ ನಿಯಮಗಳ ಮೇರೆಗೆ ವಿಳಂಬ ನೋಂದಣಿಗಾಗಿ ವಿಧಿಸಲಾದ ಶುಲ್ಕ ಮತ್ತು ದಂಡಗಳನ್ನು ರಾಜ್ಯ ನಿಯಮಗಳ ಮೇರೆಗೆ ಆ ಉದ್ದೇಶಕ್ಕಾಗಿ ಇತರ ಅಧಿಕಾರಿಯನ್ನು ನೇಮಕ ಮಾಡಿರದ ಅಥವಾ ಅಧಿಕೃತಗೊಳಿಸಿರದ ಸಂದರ್ಭದಲ್ಲಿ ಸಂಬಂಧಪಟ್ಟ ಜನನ ಮತ್ತು ಮರಣಗಳ ರಿಜಿಸ್ಟ್ರಾರರಿಗೆ ಸಂದಾಯ ಮಾಡಬೇಕಾಗುತ್ತದೆ.

**59. ಪ್ರಶ್ನೆ** : **ರಾಜ್ಯ ನಿಯಮಗಳಲ್ಲಿ ನಿಯಮಿಸಿದಂಥ ಅವಧಿಯೊಳಗೆ ಮಾಹಿತಿದಾರನು ಜನನ ಮತ್ತು ಮರಣಗಳನ್ನು ವರದಿ ಮಾಡಲಾಗಿದ್ದು ರಿಜಿಸ್ಟ್ರಾರನು ವರದಿ ಮಾಡಿರುವ ಒಂದು ವರ್ಷದೊಳಗೆ ಅದನ್ನು ನೋಂದಣಿ ಮಾಡದಿರುವ ಪ್ರಕರಣಗಳಿಗೆ 13ನೇ ಪ್ರಕರಣದ ಉಪಬಂಧಗಳು ಅನ್ವಯಿಸುತ್ತವೆಯೇ?**

ಸ್ಪಷ್ಟೀಕರಣ : 13ನೇ ಪ್ರಕರಣವು ಅಂಥ ಘಟನೆಗಳನ್ನು ನಿಗದಿತ ಕಾಲದಲ್ಲಿ ವರದಿ ಮಾಡಲು ಮಾಹಿತಿದಾರನು ವಿಫಲವಾಗಿರುವ ಪ್ರಕರಣಗಳಿಗೆ ಮಾತ್ರ ಅನ್ವಯಿಸುತ್ತದೆ. ಆದಾಗ್ಯೂ, ಘಟನೆಗಳನ್ನು ನೋಂದಣಿ ಮಾಡುವಲ್ಲಿ ರಿಜಿಸ್ಟ್ರಾರ್‌ನ ಕಡೆಯಿಂದ ಆದ ಅನುಚಿತ ವಿಳಂಬಕ್ಕಾಗಿ, ಅಧಿನಿಯಮದ 23ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಕ್ರಮಕ್ಕಾಗಿ ಅವನು ಹೊಣೆಗಾರನಾಗಬಹುದು.

## ಪ್ರಕರಣ 14 :

**60. ಪ್ರಶ್ನೆ** : 1.7.1970ರ ಮೊದಲು ಎಂದರೆ, ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ ಜಾರಿಗೊಳಿಸಲಾದ ದಿನಾಂಕಕ್ಕೆ ಮೊದಲು ನೋಂದಣಿ ಮಾಡಿದ ಮಗುವಿನ ಹೆಸರಿಗೆ ಸಂಬಂಧಿಸಿರುವ ಕಾಲಂನ್ನು ಭರ್ತಿ ಮಾಡಬೇಕೆ ಅಥವಾ ಬೇಡವೇ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 31ನೇ ಪ್ರಕರಣದ (2) ಉಪಪ್ರಕರಣದ ಮೇರೆಗಿನ ಉಪಬಂಧದ ಆಧಾರದ ಮೇಲೆ ನಿರಸಿತ ಕಾನೂನಿನ ಮೇರೆಗೆ ಜನನ ಮತ್ತು ಮರಣಗಳ ಸಂಬಂಧದಲ್ಲಿ ಮಾಡಿದ ನಮೂದುಗಳನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ನಮೂದುಗಳೆಂದು ಭಾವಿಸಲಾಗುವುದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮದ ರದ್ದುಗೊಳಿಸುವವರೆಗೆ ಜಾರಿಯಲ್ಲಿರುತ್ತದೆ.

**61. ಪ್ರಶ್ನೆ** : ಯಾರೇ ವ್ಯಕ್ತಿಯು ರಾಜ್ಯ ನಿಯಮಗಳಲ್ಲಿ ಕಾಲದೊಳಗೆ ಮಗುವಿನ ಹೆಸರನ್ನು ರಿಜಿಸ್ಟ್ರಾರರಿಗೆ ವರದಿ ಮಾಡಲು ವಿಫಲನಾದರೆ, 23(4)ನೇ ಪ್ರಕರಣದ ಮೇರೆಗೆ ದಂಡವನ್ನು ವಿಧಿಸಬಹುದೇ?

ಸ್ಪಷ್ಟೀಕರಣ : ಮಗುವಿನ ಜನನವನ್ನು ಹೆಸರಿಲ್ಲದೆ ನೋಂದಣಿ ಮಾಡಿರುವಲ್ಲಿ ಮತ್ತು ಮಗುವಿನ ತಂದೆ ತಾಯಿ ಮತ್ತು ಪೋಷಕರು ನಿಯಮಿಸಿದ 12 ತಿಂಗಳ ಅವಧಿಯ ನಂತರ ಮಗುವಿನ ಹೆಸರಿಗೆ ಸಂಬಂಧಿಸಿರುವ ಮಾಹಿತಿಯನ್ನು ರಿಜಿಸ್ಟ್ರಾರ್‌ರಿಗೆ ನೀಡಿರುವ ಸಂದರ್ಭದಲ್ಲಿ ರಿಜಿಸ್ಟ್ರಾರನು (ಮಾದರಿ ನಿಯಮಗಳ ನಿಯಮ 11(1)) ಎರಡು ರೂಪಾಯಿಗಳ ವಿಳಂಬ ಶುಲ್ಕದ ಸಂದಾಯದ ಮೇಲೆ ರಿಜಿಸ್ಟ್ರಾರಿನಲ್ಲಿ ಹೆಸರು ನಮೂದಿಸತಕ್ಕದ್ದು. ಯಾವುದೇ ಯುಕ್ತ ಕಾರಣವಿಲ್ಲದೆ ಮಾಹಿತಿಯನ್ನು ನೀಡಲು ವಿಳಂಬ ಮಾಡಿದ್ದರೆ ಅವನು ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 23ನೇ ಪ್ರಕರಣದ (4)ನೇ ಉಪಪ್ರಕರಣದ ಮತ್ತು ಅನುರೂಪವಾದ ರಾಜ್ಯ ನಿಯಮಗಳ ಮೇರೆಗೆ 10 ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದಲೂ ಸಹ ದಂಡನೀಯನಾಗತಕ್ಕದ್ದು.

## ಪ್ರಕರಣ 15 :

**62. ಪ್ರಶ್ನೆ** : ಜನನ ದಿನಾಂಕವನ್ನು ತಿದ್ದುಪಡಿ ಮಾಡುವಂಥ ರೀತಿಯಲ್ಲಿಯೇ ಇತರ ಸ್ವರೂಪದ ಎಲ್ಲ ತಿದ್ದುಪಡಿಗಳನ್ನು ಮಾಡಬೇಕೇ ಮತ್ತು ಪ್ರಾಮಾಣಿತ ಪ್ರತಿಗಳನ್ನು ಒದಗಿಸಲು ಅದೇ ಪ್ರಕ್ರಿಯೆಯನ್ನು ಅನ್ವಯಿಸಬೇಕೇ?

ಸ್ಪಷ್ಟೀಕರಣ : ಚಂಡೀಘರ್ ಜನನ ಮತ್ತು ಮರಣಗಳ ನೋಂದಣಿ ನಿಯಮಗಳು, 1974ರ 12ನೇ ನಿಯಮವು ಜನನ ದಿನಾಂಕ ಮತ್ತು ಪ್ರಮಾಣಿತ ಪ್ರತಿಯನ್ನು ಒದಗಿಸುವುದು ಸೇರಿದಂತೆ ಎಲ್ಲ ವಿಧಗಳ ತಿದ್ದುಪಡಿಗೆ ಅನ್ವಯವಾಗುವ ಏಕರೂಪ ನಿಯಮವನ್ನು ಉಪಬಂಧಿಸುತ್ತದೆ.

ಚಂಡೀಗರ್ ಜನನ ಮತ್ತು ಮರಣಗಳ ನೋಂದಣಿ ನಿಯಮಗಳು, 1974ರ 12(4)ನೇ ನಿಯಮದ ಮೇರೆಗೆ ರಿಜಿಸ್ಟ್ರಾರರು ಮನದಟ್ಟು ಮಾಡುವ ರುಜುವಾತನ್ನು ಒದಗಿಸಬೇಕು ಮತ್ತು ಅಧಿನಿಯಮದ 15ನೇ ಪ್ರಕರಣದ ಮೇರೆಗೆ ತಿದ್ದುಪಡಿಗಳನ್ನು ಮಾಡಲು ದೀರ್ಘ ಪ್ರಕ್ರಿಯೆಯನ್ನು ಉಪಬಂಧಿಸುತ್ತದೆ.

63. ಪ್ರಶ್ನೆ : ಒಬ್ಬ ವ್ಯಕ್ತಿಯು ಉಲ್ಲೇಖಿಸಿದ ಪ್ರಕರಣದಲ್ಲಿ ಈ ರೀತಿ ಹೇಳಲಾಗಿದೆ, ಅವನ ಹೆಣ್ಣು ಶಿಶುವಿಗೆ ಶಸ್ತ್ರ ಚಿಕಿತ್ಸೆಯ ನಂತರ ಲಿಂಗವು ಬದಲಾಗಿದೆ. ಅವನ ಹೇಳಿಕೆಗೆ ಆಧಾರವಾಗಿ, ಶಿಶುವಿನ ಶಸ್ತ್ರ ಚಿಕಿತ್ಸೆಯಲ್ಲಿ ಭಾಗಿಯಾಗಿದ್ದ ವೈದ್ಯರು ನೀಡಿದ್ದ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಅವನು ಲಗತ್ತಿಸಿದ್ದಾನೆ. ಈಗ, ಲಿಂಗ ಬದಲಾವಣೆಯಾದ ಪರಿಣಾಮವಾಗಿ ಶಿಶುವಿನ ತಂದೆಯು, ಶಿಶುವಿನ ಜನನ ನಮೂದುಗಳಲ್ಲಿ ಅವಶ್ಯಕ ಬದಲಾವಣೆಗಳನ್ನು ಮಾಡುವಂತೆ ಕೋರಿದ್ದಾನೆ. ಮಾಹಿತಿದಾರನು ಹಾಜರುಪಡಿಸಿದ ದಾಖಲೆಗಳ ಆಧಾರದ ಮೇರೆಗೆ ಶಿಶುವಿನ ಹೆಸರು, ಲಿಂಗ ಮುಂತಾದ ಅವಶ್ಯಕ ಬದಲಾವಣೆಗಳನ್ನು ಮೂಲ ಜನನ ನಮೂದುಗಳಲ್ಲಿ ಮಾಡಬಹುದೇ? ಸ್ಪಷ್ಟೀಕರಣ ನೀಡಿ.

ಸ್ಪಷ್ಟೀಕರಣ : ಜನನ ರಿಜಿಸ್ಟರಿನಲ್ಲಿ ಮೂಲ ಜನನ ನಮೂದುಗಳಲ್ಲಿ ಹೆಸರು ಮತ್ತು ಲಿಂಗದ ಬದಲಾವಣೆಯ ತಿದ್ದುಪಡಿಯನ್ನು ಮಾಹಿತಿದಾರನು ಹಾಜರುಪಡಿಸುವ ವೈದ್ಯಕೀಯ ದಾಖಲೆಗಳ ಆಧಾರದ ಮೇರೆಗೆ ಮಾಡಬಹುದು.

64. ಪ್ರಶ್ನೆ : ಶ್ರೀಮತಿ 'ಎ' ಎಂಬಾಕೆಗೆ ಹುಟ್ಟಿದ ಶಿಶುವಿನ ಜನನದಲ್ಲಿ ವಾದಿಯ ಹೆಸರನ್ನು ಶಿಶುವಿನ ತಂದೆಯೆಂದು ತೋರಿಸಿ ನೋಂದಾಯಿಸಲಾಗಿದೆ, ವಾದಿಯು ತನ್ನ ವಾದದಲ್ಲಿ ಶಿಶುವಿಗೆ ತಾನು ತಂದೆ ಎಂಬುದನ್ನು ನಿರಾಕರಿಸಿದ್ದಾನೆ. ಇಂಥ ಪ್ರಕರಣದಲ್ಲಿ ರಿಜಿಸ್ಟ್ರಾರನು ಯಾವ ಪ್ರಕ್ರಿಯೆಯನ್ನು ಅನುಸರಿಸಬೇಕು?

ಸ್ಪಷ್ಟೀಕರಣ : ರಿಜಿಸ್ಟ್ರಾರನು, ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ 15ನೇ ಪ್ರಕರಣದ ಮೇರೆಗೆ ಜನನ ಮತ್ತು ಮರಣಗಳ ರಿಜಿಸ್ಟರಿನಲ್ಲಿ ತಿದ್ದುಪಡಿಯನ್ನು ಮಾಡಲು ಅಧಿಕಾರವನ್ನು ಹೊಂದಿದ್ದಾನೆ. ಪ್ರಸ್ತುತ ಪ್ರಕರಣದಲ್ಲಿ ಸಂಬಂಧಪಟ್ಟ ರಿಜಿಸ್ಟ್ರಾರನು ವಿಷಯದ ಬಗ್ಗೆ ವಿಚಾರಣೆ ನಡೆಸಿ, ಅಧಿನಿಯಮದ ಮೇರೆಗೆ 12ನೇ ನಿಯಮದಲ್ಲಿ ಹೇಳಲಾದ ಪ್ರಕ್ರಿಯೆಗಳಿಗನುಸಾರವಾಗಿ ಅವಶ್ಯಕ ತಿದ್ದುಪಡಿಗಳನ್ನು ಮಾಡಬಹುದು. ಅರ್ಜಿದಾರನು ಶಿಶುವಿನ ತಾಯಿಯ ಕಾನೂನುಸಮ್ಮತ ಗಂಡನಾಗಿದ್ದರೆ, ಬೇರ್ಪಡೆ ಅಥವಾ ವಿಚ್ಛೇದನಾ ಡಿಕ್ರಿಯನ್ನು ಪಡೆದ ಹೊರತು ಆತನ ಪ್ರತಿಭಟನೆಗೆ ಮಾನ್ಯತೆ ಇಲ್ಲ. ಆದರೆ, ವಿಚಾರಣೆಯ ಆಧಾರದ ಮೇಲೆ ರಿಜಿಸ್ಟ್ರಾರನಿಗೆ ಮನದಟ್ಟಾಗುವಂತೆ ನಮೂದಿನಲ್ಲಿ ತಪ್ಪು ಅಥವ ಮೋಸ ಇದೆಯೆಂದು ಸಂದೇಹವುಂಟಾದರೆ, 25ನೇ ಪ್ರಕರಣದ ಮೇರೆಗೆ ಅಧಿಕೃತಗೊಂಡ ಅಧಿಕಾರಿಗೆ ಅಗತ್ಯ ವಿವರಗಳನ್ನು ನೀಡಿ, 12(6) ನಿಯಮದ ಮೂಲಕ ಅಧಿಕಾರ ನೀಡಿರುವ ಮೇರೆಗೆ ವರದಿಯನ್ನು ಸಲ್ಲಿಸಬಹುದು ಮತ್ತು ಅವನ ಸೂಚನೆಯ ಮೇರೆಗೆ 12ನೇ ನಿಯಮದ ವಿವಿಧ ಉಪನಿಯಮಗಳಲ್ಲಿ ಉಪಬಂಧಿಸಿದಂತೆ ಅವಶ್ಯಕ ಕ್ರಮವನ್ನು ತೆಗೆದುಕೊಳ್ಳಬಹುದು.

65. ಪ್ರಶ್ನೆ : ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ 15ನೇ ಪ್ರಕರಣವು, ಜನನ ಮತ್ತು ಮರಣಗಳ ರಿಜಿಸ್ಟರುಗಳಲ್ಲಿನ ತಿದ್ದುಪಡಿಗಳನ್ನು ಮಾಡಲು ಜನನ ಮತ್ತು ಮರಣಗಳ ರಿಜಿಸ್ಟ್ರಾರುಗಳಿಗೆ ಪೂರ್ಣ ಅಧಿಕಾರಿಗಳನ್ನು ನೀಡುತ್ತದೆ. ಮೂವತ್ತು ಅಥವಾ ನಲವತ್ತು ವರ್ಷಗಳ ಹಿಂದೆ ನೋಂದಣಿ ಮಾಡಿದ ಜನನ ದಿನಾಂಕವನ್ನು ಸರಿಪಡಿಸುವಂತೆ ಕೆಲವು ರಿಜಿಸ್ಟ್ರಾರರ ಮೇಲೆ ಒತ್ತಡ ತರಲಾಗಿರುವುದರಿಂದ ಈ ಅಧಿಕಾರವು ಅನೇಕ ಗಂಭೀರ ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತದೆಯೆಂಬ ಅಂಶವನ್ನು ಗಮನಕ್ಕೆ ತರಲಾಗಿದೆ. ಕೆಲವು ಪ್ರಕರಣಗಳಲ್ಲಿ, ಶೈಕ್ಷಣಿಕ ದಾಖಲೆಗಳಲ್ಲಿ, ಸರ್ಕಾರಿ ದಾಖಲೆಗಳಲ್ಲಿ ತೋರಿಸಿರುವ ಜನನ ದಿನಾಂಕಗಳಿಗೂ ಹಾಗೂ ಜನನ ದಾಖಲೆಗಳಲ್ಲಿ ತೋರಿಸಿದ ದಿನಾಂಕಗಳಿಗೂ ಸಂಪೂರ್ಣ ವ್ಯತ್ಯಾಸವಿದೆ. ರಿಜಿಸ್ಟ್ರಾರುಗಳು ಸಂಬಂಧಪಟ್ಟ ಮಾಹಿತಿದಾರರಿಂದ ಕೋರಿಕೆಗಳು ಬಂದ ಮೇಲೆ ಜನನ ದಿನಾಂಕವನ್ನು ಸರಿಪಡಿಸಲು ಬದ್ಧರಾಗಿರುತ್ತಾರೆ. ತತ್ಪಾರಿಣಾಮವಾಗಿ, ವ್ಯಕ್ತಿಗಳು ಉದ್ಯೋಗದಲ್ಲಿದ್ದರೆ ಅವರ ಸೇವೆಯಲ್ಲಿ ವಿಸ್ತರಣೆ ದೊರೆಯಬಹುದು. ಆದ್ದರಿಂದ ದುಷ್ಟ ಕೃತ್ಯದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಈ ಕಾರಣದಿಂದ ರಿಜಿಸ್ಟ್ರಾರ್‌ಗಳ ಈ ಅಧಿಕಾರಕ್ಕೆ ಕೆಲವು ನಿರ್ಬಂಧ ವಿಧಿಸುವುದು ನಿಜವಾಗಿ ಅವಶ್ಯವೆನಿಸಿದೆ. ದಯವಿಟ್ಟು ಸಲಹೆ ನೀಡಿ.

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 15ನೇ ಪ್ರಕರಣವು, ಜನನ ಅಥವಾ ಮರಣದ ಬಗ್ಗೆ ಮಾಡಿರುವ ನಮೂದು ಅದರ ಸ್ವರೂಪ ಅಥವಾ ವಿಷಯದಲ್ಲಿ ತಪ್ಪಾಗಿದ್ದರೆ ಅಥವಾ ಅದನ್ನು ಮೋಸದಿಂದ ಅಥವಾ ತಪ್ಪಾಗಿ ಮಾಡಿದ್ದರೆ, ಅಂಥ ತಪ್ಪುಗಳನ್ನು ತಿದ್ದಲು ಅಥವಾ ನಮೂದನ್ನು ರದ್ದುಗೊಳಿಸಲು ರಿಜಿಸ್ಟ್ರಾರನಿಗೆ ಅಧಿಕಾರ ನೀಡಿದೆ. ಈ ಉಪಬಂಧದಲ್ಲಿ, ಅದು ದುರುಪಯೋಗವಾಗದಿರುವಂತೆ ಅನೇಕ ರಕ್ಷಣಾತ್ಮಕ ಅಂಶಗಳೂ ಸೇರಿವೆ. "ರಿಜಿಸ್ಟ್ರಾರನಿಗೆ ಸಮಾಧಾನವಾಗುವಂತೆ ಅದು ರುಜುವಾತಾದರೆ" ಎಂಬ ಪದದೊಂದಿಗೆ ಪ್ರಕರಣವು ಪ್ರಾರಂಭವಾಗುತ್ತದೆ. ಎಂದರೆ, ನಮೂದಿನಲ್ಲಿಯ ತಪ್ಪು ಅಥವಾ ಮೋಸವು ರುಜುವಾತಾದರೆ ಸಾಲದು ಅದು ರಿಜಿಸ್ಟ್ರಾರನಿಗೆ ಸಮಾಧಾನವಾಗುವ ರೀತಿಯಲ್ಲಿ ರುಜುವಾತಾಗತಕ್ಕದೆಂಬುದನ್ನು ಸ್ಪಷ್ಟಪಡಿಸುತ್ತದೆ. ಈ ದೃಷ್ಟಿಯಿಂದ ರಿಜಿಸ್ಟ್ರಾರನು ಅತಿ ನ್ಯಾಯಿಕ ಸ್ವರೂಪದ ಪ್ರಕಾರ್ಯಗಳನ್ನು ನಿರ್ವಹಿಸುತ್ತಾನೆ ಮತ್ತು ಮನದಟ್ಟು ಮಾಡಿಕೊಳ್ಳಲು ಸಾಕ್ಷ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ನಮೂದು ಸ್ವರೂಪದಲ್ಲಿ ಅಥವಾ ವಿಷಯದಲ್ಲಿ ತಪ್ಪಾಗಿದೆಯೆಂದು ಅಥವಾ ನಮೂದುಗಳನ್ನು ಮೋಸದಿಂದ ಅಥವಾ ತಪ್ಪಾಗಿ ಮಾಡಲಾಗಿದೆಯೆಂಬುದನ್ನು ಸಾಬೀತುಪಡಿಸಬೇಕಾಗುತ್ತದೆ. ಆದ್ದರಿಂದ ಪ್ರಶ್ನೆಯಲ್ಲಿ ಸೂಚಿಸಿದಂತೆ, ದಿನಾಂಕಗಳನ್ನು ಸರಿಪಡಿಸುವಂತೆ ರಿಜಿಸ್ಟ್ರಾರುಗಳನ್ನು ಒತ್ತಾಯಿಸಲಾಗುತ್ತದೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಎರಡನೆಯ ರಕ್ಷಣೆಯೆಂದರೆ, ರಿಜಿಸ್ಟ್ರಾರನು, ನಮೂದುಗಳನ್ನು ಸರಿಪಡಿಸಬಹುದಾದ ಷರತ್ತುಗಳು ಮತ್ತು ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಮಾಡಿದ ನಿಯಮಗಳಿಗೆ ಒಳಪಟ್ಟು ಕಾರ್ಯನಿರ್ವಹಿಸಬೇಕು. ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಮಾಡಿದ ನಿಯಮಗಳು, ಯಾವುದೇ ಹಕ್ಕನ್ನು ದೃಢೀಕರಿಸಲು ಕರಾರುವಕ್ಕಾದ ರುಜುವಾತನ್ನು ಒದಗಿಸುವಂತೆ ಅಗತ್ಯಪಡಿಸಬಹುದು ಮತ್ತು ಪ್ರಕ್ರಿಯೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಸಹ ಈ ನಿಯಮಗಳು ಅಗತ್ಯಪಡಿಸಬಹುದು.

ಮೂರನೆಯ ರಕ್ಷಣೆಯೆಂದರೆ, ರಿಜಿಸ್ಟ್ರಾರನು ಮೂಲ ನಮೂದನ್ನು ಬದಲಾಯಿಸತಕ್ಕದ್ದಲ್ಲ. ಆದರೆ ಪಕ್ಕದ ಅಂಚಿನಲ್ಲಿ ತಿದ್ದುಪಡಿಯನ್ನು ಮಾಡತಕ್ಕದ್ದು ಮತ್ತು ತಿದ್ದುಪಡಿ ಮಾಡಿದ ದಿನಾಂಕದೊಂದಿಗೆ ಅದಕ್ಕೆ ಸಹಿ ಮಾಡತಕ್ಕದ್ದು. ತತ್ಪರಿಣಾಮವಾಗಿ ರಿಜಿಸ್ಟರಿನಲ್ಲಿ ಮೂಲ ದಿನಾಂಕ ಹಾಗು ತಿದ್ದುಪಡಿಯ ದಿನಾಂಕ, ಎರಡು ಅಕ್ಕಪಕ್ಕದಲ್ಲೇ ಇರುತ್ತದೆ ಮತ್ತು ಸದರಿ ನಮೂದಿನ ಯಾವುದೇ ಪ್ರಮಾಣಿತ ಪ್ರತಿಯು ಎರಡು ದಿನಾಂಕಗಳನ್ನು ಒಳಗೊಂಡಿರುತ್ತದೆ.

ರಿಜಿಸ್ಟರಿನಲ್ಲಿನ ನಮೂದು ಜನನ, ಮರಣಗಳ ನಿರ್ಣಾಯಕ ರುಜುವಾತೆಂದು ಅಧಿನಿಯಮದಲ್ಲಿ ಎಲ್ಲೂ ಹೇಳಿಲ್ಲ. ಆದ್ದರಿಂದ ಅಂಥ ನಮೂದು ಬರೀ ಸಾಕ್ಷ್ಯ ಮಾತ್ರವಾಗಿದೆ, ತಿದ್ದುಪಡಿಯ ನಂತರ, ಒಂದು ಮೂಲ ಮತ್ತು ಇನ್ನೊಂದು ತಿದ್ದುಪಡಿ ಮಾಡಿದ ಎರಡು ದಿನಾಂಕಗಳಿರುವಾಗ, ಯಾವುದೇ ವ್ಯಕ್ತಿಯ ಜನನ ದಿನಾಂಕವನ್ನು ಅವಲಂಬಿಸಿ ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಪ್ರಾಧಿಕಾರಿಯು, ತಿದ್ದುಪಡಿ ಮಾಡಿದ ದಿನಾಂಕವನ್ನು ಅಂಗೀಕರಿಸಲು ಅಥವಾ ತನ್ನ ಕಚೇರಿ ದಾಖಲೆಗಳಲ್ಲಿ ನಮೂದಿಸಿದ ದಿನಾಂಕವನ್ನು ಬದಲಾಯಿಸಿಕೊಳ್ಳಲು ಬದ್ಧನಾಗಿರುವುದಿಲ್ಲ.

ಮೇಲೆ ಹೇಳಿದ ಪರಿಸ್ಥಿತಿಯಲ್ಲಿ ದುಷ್ಟ ಕೃತ್ಯಗಳನ್ನು ಪೂರ್ಣವಾಗಿ ನಿರ್ಮೂಲನೆ ಮಾಡಲಾಗದಿದ್ದರೂ ಅದರ ಸಾಧ್ಯತೆಗಳು, ತುಂಬಾ ಕಡಿಮೆಯಿರುತ್ತದೆ.

ಈ ಉಪಬಂಧದ ಮೂಲಕ ಪ್ರಧಾನ ಮಾಡಲಾದ ರಿಜಿಸ್ಟ್ರಾರನ ಅಧಿಕಾರಗಳನ್ನು, ಮೇಲೆ ಪ್ಯಾರಾ 2ರಲ್ಲಿ ಹೇಳಿದಂತೆ ಜನನ ದಿನಾಂಕ ಬದಲಾವಣೆಗಾಗಿ ಸಲ್ಲಿಸಲಾದ ಅರ್ಜಿಯ ಸಂದರ್ಭದಲ್ಲಿ ಮನದಟ್ಟು ಮಾಡುವ ರುಜುವಾತನ್ನು ಅಗತ್ಯಪಡಿಸುವ ಮತ್ತು ವಿವರಣಾತ್ಮಕ ಪ್ರಕ್ರಿಯೆಯನ್ನು ಉಪಬಂಧಿಸಲು ತುಂಬಾ ಕಟ್ಟುನಿಟ್ಟಾದ ನಿಯಮಗಳನ್ನು ಮಾಡುವುದರ ಮೂಲಕ ನಿರ್ಬಂಧಿಸಬಹುದಾಗಿದೆ.

**66. ಪ್ರಶ್ನೆ** : ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ ಜಾರಿಗೆ ಬರುವ ಮುಂಚೆ ಘಟಿಸಿದ ಮತ್ತು ನೋಂದಾಯಿಸಿದ ಘಟನೆಗಳಿಗೆ ಸಂಬಂಧಿಸಿದ ತಿದ್ದುಪಡಿಯನ್ನು 1886ರ ಜನನ, ಮರಣ ಮತ್ತು ವಿವಾಹ ನೋಂದಣಿ ಅಧಿನಿಯಮದ ಉಪಬಂಧಗಳು ಅನ್ವಯವಾಗುವಲ್ಲಿ ಅವುಗಳ ಮೇರೆಗೆ ಅನಂತರವೂ ಮಾಡಬಹುದೇ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡಿ ಜನನ, ಮರಣ ಮತ್ತು ವಿವಾಹ ನೋಂದಣಿ ಅಧಿನಿಯಮ, 1886ರ 28(1)ನೇ ಪ್ರಕರಣದಲ್ಲಿ ರಿಜಿಸ್ಟರಿನ ನಮೂದುಗಳ ತಿದ್ದುಪಡಿಗಾಗಿ ಅಂಥಹುದೇ ಉಪಬಂಧವಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

**ಸ್ಪಷ್ಟೀಕರಣ** : ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ 15ನೇ ಪ್ರಕರಣದ ಮೇರೆಗೆ, ರಾಜ್ಯದಲ್ಲಿ ನಿರಸನಗೊಂಡ ಕಾನೂನಿನ ಮೇರೆಗೆ ನೋಂದಾಯಿಸಲಾದ ಜನನ ಮತ್ತು ಮರಣಗಳ ಸಂಬಂಧದಲ್ಲಿ ನಮೂದುಗಳನ್ನು ತಿದ್ದುಪಡಿ ಮಾಡುವುದಕ್ಕೆ ಅಥವಾ ರದ್ದುಗೊಳಿಸುವುದಕ್ಕೆ ರಿಜಿಸ್ಟ್ರಾರನು ಸಕ್ಷಮನಾಗಿರುತ್ತಾನೆ.

ಜನನ, ಮರಣ ಮತ್ತು ವಿವಾಹ ನೋಂದಣಿ ಅಧಿನಿಯಮ, 1886ರ ಉಪಬಂಧಗಳ ಮೇರೆಗೆ ಜನನ ಅಥವಾ ಮರಣವನ್ನು ನೋಂದಾಯಿಸಿರುವಲ್ಲಿ, ಮತ್ತು ಮೇಲೆ ಹೇಳಿದ ಅಧಿನಿಯಮವು ರಾಜ್ಯದಲ್ಲಿ ಇನ್ನೂ ಜಾರಿಯಲ್ಲಿದ್ದಲ್ಲಿ, ನಮೂದುಗಳನ್ನು ಮೇಲೆ ಹೇಳಿದ ಅಧಿನಿಯಮದ 28ನೇ ಪ್ರಕರಣದ ಮೇರೆಗೆ ಸರಿಪಡಿಸತಕ್ಕದ್ದು.

1886ರ ಅಧಿನಿಯಮವು ಸಹ ನಿರಸನಗೊಂಡಿರುವ ಸಂದರ್ಭದಲ್ಲಿ ಆ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ನಮೂದುಗಳನ್ನು 1969ರ ಅಧಿನಿಯಮದ 15ನೇ ಪ್ರಕರಣದ ಮೇರೆಗೆ ತಿದ್ದುಪಡಿ ಮಾಡಬಹುದು.

67. ಪ್ರಶ್ನೆ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ ಜಾರಿಗೆ ಮುಂಚೆ ವಿವಿಧ ರಾಜ್ಯಗಳಲ್ಲಿರುವ ವಿವಿಧ ಅಧಿನಿಯಮಗಳ ಮೇರೆಗೆ (ಜನನ, ಮರಣ ಮತ್ತು ವಿವಾಹ ನೋಂದಣಿ ಅಧಿನಿಯಮ 1886ನ್ನು ಹೊರತುಪಡಿಸಿ) ನೋಂದಾಯಿಸಲಾದ ಜನನ ಮತ್ತು ಮರಣಗಳಿಗೆ ಸಂಬಂಧಿಸಿದ ನಮೂದುಗಳನ್ನು ಹಳೆಯ ಅಧಿನಿಯಮಗಳ/ನಿಯಮಗಳ (ಜನನ, ಮರಣ ಮತ್ತು ವಿವಾಹ ನೋಂದಣಿ ಅಧಿನಿಯಮ 1886ನ್ನು ಹೊರತುಪಡಿಸಿ) ಉಪಬಂಧಗಳ ಮೇರೆಗೆ ಸಾರ್ವಜನಿಕರು ಅಂಥ ತಿದ್ದುಪಡಿ ಅಥವಾ ರದ್ದತಿಗೆ ಕೋರಿದಾಗ ತಿದ್ದುಪಡಿ ಮಾಡಬಹುದೇ ಅಥವಾ ರದ್ದುಗೊಳಿಸಬಹುದೇ ಅಥವಾ ಪ್ರಸ್ತುತ 1969ರ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಬಹುದೇ? ಈ ಸಂಬಂಧವಾಗಿ 1969ರ ಅಧಿನಿಯಮದ ಜಾರಿಗೆ ಮುಂಚೆ, ಟ್ರಾವಂಕೋರ್ ಕೊಚ್ಚಿ ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ 1953 (1953ರ ಅಧಿನಿಯಮ–VIII), ಕೇರಳ ಪುರಸಭಾ ಅಧಿನಿಯಮ 1960 (324ನೇ ಪ್ರಕರಣ), ಮದ್ರಾಸು ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1899 (1899ರ ಅಧಿನಿಯಮ–III) ಮುಂತಾದ ಜನನ ಮತ್ತು ಮರಣಗಳ ನೋಂದಣಿಗೆ (1886ರ ಅಧಿನಿಯಮವನ್ನು ಹೊರತುಪಡಿಸಿ) ಸಂಬಂಧಪಟ್ಟಂತೆ ರಾಜ್ಯಗಳಲ್ಲಿ ಜಾರಿಯಲ್ಲಿದ್ದ ಆಯಾ ರಾಜ್ಯದ ಅಧಿನಿಯಮಗಳು ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969 31(1)ನೇ ಪ್ರಕರಣದನುಸಾರವಾಗಿ ನಿರಸನಗೊಂಡಿವೆ ಎಂಬುದನ್ನು ನಮೂದಿಸಬಹುದಾಗಿದೆ.

ಸ್ಪಷ್ಟೀಕರಣ : ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ 31(1)ನೇ ಪ್ರಕರಣವು, ಈ ಅಧಿನಿಯಮವು ಒಳಗೊಂಡಿರುವ ವಿಷಯಗಳಿಗೆ ಸಂಬಂಧಿಸಿದಂತೆ ವಿವಿಧ ರಾಜ್ಯಗಳಲ್ಲಿ ಜಾರಿಯಲ್ಲಿರುವ ಕಾನೂನಿನ ಉಪಬಂಧಗಳನ್ನು ನಿರಸನಗೊಳಿಸಿದೆ. ಅದರ (2)ನೇ ಉಪಪ್ರಕರಣವು, ಹಾಗೆ ನಿರಸನಗೊಳಿಸಿದ್ದರೂ, ನಿರಸನಗೊಂಡ ಕಾನೂನಿನ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು 1969ರ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ತೆಗೆದುಕೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಎಂದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮದಿಂದ ಅದನ್ನು ರದ್ದುಗೊಳಿಸುವವರೆಗೆ ಹಾಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಎಂದು ಉಪಬಂಧಿಸುತ್ತದೆ.

ಅಧಿನಿಯಮದ 15ನೇ ಪ್ರಕರಣವು, ಈ ಅಧಿನಿಯಮದ ಮೇರೆಗೆ ರಿಜಿಸ್ಟ್ರಾರರು ಕಾಯ್ದಿರಿಸಿದ ಜನನ ಮತ್ತು ಮರಣಗಳ ರಿಜಿಸ್ಟರಿನಲ್ಲಿರುವ ಯಾವುದೇ ನಮೂದನ್ನು ಸರಿಪಡಿಸಲು ಅಥವಾ ರದ್ದುಗೊಳಿಸಲು ಅವರನ್ನು ಅಧಿಕೃತಗೊಳಿಸುತ್ತದೆ.

31(2) ಪ್ರಕರಣಗಳ ಉಪಬಂಧಗಳ ಕಾರಣದಿಂದಾಗಿ, ನಿರಸನಗೊಂಡ ಕಾನೂನಿನ ಮೇರೆಗೆ ಜನನ ಮತ್ತು ಮರಣಗಳಿಗೆ ಮಾಡಿದ ನಮೂದುಗಳನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಕಾರ್ಯದಿಂದ ಅಥವಾ ತೆಗೆದುಕೊಂಡ ಯಾವುದೇ ಕ್ರಮದಿಂದ

ಅವುಗಳನ್ನು ರದ್ದುಗೊಳಿಸುವವರೆಗೆ, ಅವು ಜಾರಿಯಲ್ಲಿರುತ್ತವೆ ಎಂದು ಭಾವಿಸಬೇಕು. ಅದೇ ರೀತಿಯಲ್ಲಿ, ಹಳೇ ನಮೂದುಗಳಿಗೆ ಸಂಬಂಧಿಸಿದ ಜನನ ಮತ್ತು ಮರಣಗಳ ರಿಜಿಸ್ಟರನ್ನು ರಿಜಿಸ್ಟ್ರಾರನು ಈ ಅಧಿನಿಯಮದ ಮೇರೆಗೆ ಇಟ್ಟುಕೊಂಡು ಬಂದಿರುವುದೆಂಬುದಾಗಿ ಭಾವಿಸಬೇಕು.

ಮೇಲೆ ಹೇಳಿದ ಕಾರಣಗಳಿಂದಾಗಿ, 1969ರ ಅಧಿನಿಯಮದ 15ನೇ ಪ್ರಕರಣದ ಮೇರೆಗೆ ವಿವಿಧ ರಾಜ್ಯಗಳಲ್ಲಿ ನಿರಸನಗೊಂಡ ಕಾನೂನಿನ ಮೇರೆಗೆ ನೋಂದಾಯಿಸಲಾಗಿರುವ ಜನನ ಮತ್ತು ಮರಣಗಳಿಗೆ ಸಂಬಂಧಿಸಿದ ನಮೂದುಗಳನ್ನು ತಿದ್ದುಪಡಿ ಮಾಡುವುದಕ್ಕೆ ಅಥವಾ ರದ್ದುಗೊಳಿಸುವುದಕ್ಕೆ ರಿಜಿಸ್ಟ್ರಾರರು ಸಕ್ಷಮರಾಗಿರುತ್ತಾರೆ.

**68. ಪ್ರಶ್ನೆ** : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 15ನೇ ಪ್ರಕರಣವು ಜನನ ಮತ್ತು ಮರಣಗಳ ರಿಜಿಸ್ಟರಿನಲ್ಲಿ ನಮೂದಿನ ತಿದ್ದುಪಡಿ ಅಥವಾ ರದ್ದಿಯಾತಿಗೆ ಉಪಬಂಧ ಕಲ್ಪಿಸುತ್ತದೆ. ನಮೂದು ಅದರ ಸ್ವರೂಪದಲ್ಲಿ ಅಥವಾ ವಿಷಯದಲ್ಲಿ ತಪ್ಪಾಗಿದೆಯೆಂದು ಅಥವಾ ನಮೂದನ್ನು ಮೋಸದಿಂದ ಅಥವಾ ತಪ್ಪಾಗಿ ಮಾಡಲಾಗಿದೆಯೆಂದು ರಿಜಿಸ್ಟ್ರಾರಿಗೆ ಮನದಟ್ಟಾಗುವಂತೆ ರುಜುವಾತುಪಡಿಸಿದರೆ, ಅವರು ಇಟ್ಟುಕೊಂಡ ಯಾವುದೇ ರಿಜಿಸ್ಟರಿನ ಯಾವುದೇ ನಮೂದನ್ನು ತಿದ್ದುಪಡಿ ಮಾಡಲು ಅಥವಾ ರದ್ದುಗೊಳಿಸಲು ರಿಜಿಸ್ಟ್ರಾರನನ್ನು ಅಧಿಕೃತಗೊಳಿಸಲಾಗಿದೆ. ಅಧಿನಿಯಮದ 30(2) (ಕೆ) ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಮಾಡಿದ ನಿಯಮವನ್ನನುಸರಿಸಿ, ಜಿಲ್ಲಾ ರಿಜಿಸ್ಟ್ರಾರನಿಗೆ ಅಥವಾ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದ ಯಾರೇ ಇತರ ಅಧಿಕಾರಿಗೆ ರಿಜಿಸ್ಟರುಗಳನ್ನು ವರ್ಗಾಯಿಸಲಾಗಿದೆ. ರಿಜಿಸ್ಟ್ರಾರನು ರಿಜಿಸ್ಟರುಗಳನ್ನು ತಾನು ಇಟ್ಟುಕೊಂಡಿರದ 12 ತಿಂಗಳುಗಳ ಅವಧಿಯ ನಂತರ ತಿದ್ದುಪಡಿಯನ್ನು ಅಥವಾ ರದ್ದಿಯಾತಿಯನ್ನು ಮಾಡಲು ಅಧಿಕಾರ ಹೊಂದಿರುವನೇ ಅಥವಾ ರಿಜಿಸ್ಟರಿನ ಸ್ವಾಧೀನತೆಯನ್ನು ಹೊಂದಿರುವ ಅಧಿಕಾರಿಯ ರಿಜಿಸ್ಟರಿನಲ್ಲಿ ಮಾಡಿದ ನಮೂದುಗಳನ್ನು ಸರಿಪಡಿಸಬಹುದೇ ಅಥವಾ ರದ್ದುಗೊಳಿಸಬಹುದೇ?

**ಸ್ಪಷ್ಟೀಕರಣ** : ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ 16(1)ನೇ ಪ್ರಕರಣದ ಮೇರೆಗೆ, ಪ್ರತಿಯೊಬ್ಬ ರಿಜಿಸ್ಟ್ರಾರನು ತನ್ನ ನೋಂದಣಿ ಪ್ರದೇಶಕ್ಕಾಗಿ ಜನನ ಮತ್ತು ಮರಣಗಳ ರಿಜಿಸ್ಟರನ್ನು ಇಡುವುದು ಅಗತ್ಯ. 15ನೇ ಪ್ರಕರಣದ ಮೇರೆಗೆ, ರಿಜಿಸ್ಟ್ರಾರನನ್ನು, ಅವನು ನಿರ್ವಹಿಸಿಕೊಂಡು ಬಂದಿರುವ ರಿಜಿಸ್ಟರಿನಲ್ಲಿ ಜನನ ಅಥವಾ ಮರಣದ ನಮೂದನೆಯನ್ನು ತಿದ್ದುಪಡಿ ಮಾಡಲು ಅಥವಾ ರದ್ದುಗೊಳಿಸಲು ಅಧಿಕೃತಗೊಳಿಸಲಾಗಿದೆ.

30(2) (ಕೆ) ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಮಾಡಿದ ನಿಯಮವನ್ನನುಸರಿಸಿ, ಸದರಿ ರಿಜಿಸ್ಟರನ್ನು 12 ತಿಂಗಳುಗಳ ಅವಧಿಯ ನಂತರ ಜಿಲ್ಲಾ ರಿಜಿಸ್ಟ್ರಾರನಿಗೆ ಅಥವಾ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದ ಅಧಿಕಾರಿಗೆ ವರ್ಗಾಯಿಸಲಾಗಿದೆ ಎಂಬುದು ಕಂಡುಬಂದಿದೆ. ರಿಜಿಸ್ಟರುಗಳನ್ನು ಹಾಗೆ ವರ್ಗಾಯಿಸಿದ ನಂತರ ರಿಜಿಸ್ಟರುಗಳನ್ನು ರಿಜಿಸ್ಟ್ರಾರನು ಇಟ್ಟುಕೊಂಡಿದ್ದಾನೆಂದು ಹೇಳಲಾಗದು. ಅದರ ಪರಿಣಾಮವಾಗಿ ಅಧಿನಿಯಮದ 15ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಸದರಿ ರಿಜಿಸ್ಟರುಗಳಲ್ಲಿ ತಿದ್ದುಪಡಿಯನ್ನು ಅಥವಾ ರದ್ದಿಯಾತಿಯನ್ನು ಮಾಡಲು ತೊಂದರೆಯಾಗುತ್ತದೆ ಎಂಬುದು ರಾಜ್ಯ ಸರ್ಕಾರದ ಅಭಿಪ್ರಾಯವಾಗಿದೆ. ರಿಜಿಸ್ಟರುಗಳನ್ನು ರಿಜಿಸ್ಟ್ರಾರನು ನಿರ್ವಹಿಸತಕ್ಕದ್ದೆಂಬುದನ್ನು 15ನೇ ಪ್ರಕರಣವು ಸ್ಪಷ್ಟವಾಗಿ ಉಪಬಂಧಿಸುತ್ತದೆ. 30(2)(ಕೆ) ಪ್ರಕರಣವನ್ನುಸರಿಸಿ,

ರಾಜ್ಯ ಸರ್ಕಾರವು ಮಾಡಿದ ನಿಯಮವನ್ನು ಹೊಂದಿಕೆಯಾಗುವ ರೀತಿಯಲ್ಲಿಯೇ ಅರ್ಥೈಸಬೇಕಾಗುತ್ತದೆ. ರಿಜಿಸ್ಟರುಗಳನ್ನು ಇಟ್ಟುಕೊಳ್ಳುವ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳದೆ, ರಿಜಿಸ್ಟರನು ರಿಜಿಸ್ಟ್ರಾರನು ನಿರ್ವಹಿಸಿದ್ದಾನೆಂದೇ ಭಾವಿಸತಕ್ಕದ್ದು ಮತ್ತು ಜಿಲ್ಲಾ ರಿಜಿಸ್ಟ್ರಾರನ ಅಥವಾ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದ ಯಾರೇ ಇತರ ಅಧಿಕಾರಿಯ ಕಚೇರಿಗೆ ಈ ರಿಜಿಸ್ಟರುಗಳನ್ನು ವರ್ಗಾಯಿಸುವುದು. ಅನುಕೂಲಕರವಾದ ಮತ್ತು ಕೇಂದ್ರೀಕೃತ ಸ್ಥಳದಲ್ಲಿ ದಾಖಲೆಗಳನ್ನು ಇಡುವುದು ಆಡಳಿತಾತ್ಮಕವಾಗಿ ಅನುಕೂಲಕರವಾದದ್ದು ಎಂಬ ನಿಲುವನ್ನು ತಳೆಯುವುದು ಸೂಕ್ತವಾದದ್ದು.

ಹೀಗಿದ್ದರೂ, ರಿಜಿಸ್ಟರುಗಳನ್ನು ಜಿಲ್ಲಾ ರಿಜಿಸ್ಟ್ರಾರನ ಕಚೇರಿಗೆ ವರ್ಗಾಯಿಸಿ, ಅಲ್ಲಿ ಸಂಗ್ರಹಿಸಿದ್ದರೂ, ರಿಜಿಸ್ಟ್ರಾರನು ಈ ರಿಜಿಸ್ಟರುಗಳ ಸರಿಯಾದ ಅಭಿರಕ್ಷಕನಾಗಿರುತ್ತಾನೆ. ಆದ್ದರಿಂದ, ಅಧಿನಿಯಮದ 15ನೇ ಪ್ರಕರಣದ ಮೇರೆಗೆ ತಿದ್ದುಪಡಿಗಳು, ಇತ್ಯಾದಿ ಮಾಡುವುದುಕ್ಕೆ ಅವನಿಗೆ ಅಧಿಕಾರವಿರುತ್ತದೆ ಮತ್ತು ಆ ಉದ್ದೇಶಕ್ಕಾಗಿ ಅವನು ದಾಖಲೆಗಳನ್ನು ತರಿಸಿಕೊಳ್ಳಬಹುದು ಅಥವಾ ತಾನೇ ಆ ಸ್ಥಳಕ್ಕೆ ತೆರಳಿ ನಮೂದುಗಳನ್ನು ದೃಢೀಕರಿಸಬಹುದು.

**69. ಪ್ರಶ್ನೆ** : ಅಧಿನಿಯಮದ 15ನೇ ಪ್ರಕರಣದ ಮೇರೆಗೆ ಜನನ/ಮರಣಗಳ ರಿಜಿಸ್ಟರಿನಲ್ಲಿ ನಮೂದುಗಳ ತಿದ್ದುಪಡಿ ಅಥವಾ ರದ್ದಿಯಾತಿಯು ಹೆಸರಿನ ಬದಲಾವಣೆಯನ್ನು ಸಹ ಒಳಗೊಳ್ಳುತ್ತದೆಯೇ? 1969ನೇ ಅಧಿನಿಯಮದ ಜಾರಿಗೆ ಮುಂಚೆ ಘಟಿಸಿದ ಮತ್ತು ನೋಂದಾಯಿಸಿದ ಜನನ/ಮರಣಕ್ಕೆ ಸಂಬಂಧಿಸಿ ಹೆಸರಿನ ಬದಲಾವಣೆಯು ಸೇರಿದಂತೆ ತಿದ್ದುಪಡಿಯನ್ನು ಮಾಡಲು ರಿಜಿಸ್ಟ್ರಾರನು ಅಧಿಕಾರ ಹೊಂದಿರುವನೇ?

**ಸ್ಪಷ್ಟೀಕರಣ** : ಹೆಸರಿನ ಬದಲಾವಣೆಯ ಪ್ರಶ್ನೆಯನ್ನು ಎರಡು ದೃಷ್ಟಿಗಳಿಂದ ಅವಲೋಕಿಸಬೇಕಾಗುತ್ತದೆ. ಮೊದಲನೆಯದು, ರಿಜಿಸ್ಟರಿನಲ್ಲಿ ಹೆಸರನ್ನು ಬರೆಯುವಾಗ ಉಂಟಾಗುವ ಕೆಲವು ಲಿಪಿಕ ತಪ್ಪುಗಳಿರಬಹುದು. ಉದಾಹರಣೆಗೆ, ರಾಮ ಎಂಬುದನ್ನು ಪ್ರಮಾದದಿಂದ ರಾಮಲಾಲ್ ಎಂದು ಬರೆಯಲಾಗಿರುತ್ತದೆ ಅಥವಾ 'ಚಂದ್ರ' ಎಂಬ ಪದವನ್ನು 'ಚಂದರ್' ಎಂದು ಬರೆಯಲಾಗಿರುತ್ತದೆ. ಇಂಥ ಪರಿಸ್ಥಿತಿಗಳಲ್ಲಿ ಹೆಸರಿನ ತಿದ್ದುಪಡಿಯನ್ನು ಅಧಿನಿಯಮದ 15ನೇ ಪ್ರಕರಣದ ಮೇರೆಗೆ ಸೇರಿಸಿಕೊಳ್ಳಬಹುದು. ಅದೇ ರೀತಿಯಲ್ಲಿ ಹೆಸರು ಮೋಸ ಅಥವಾ ತಪ್ಪಾಗಿ ರಿಜಿಸ್ಟರಿನಲ್ಲಿ ನಮೂದಾಗಿರಬಹುದು. ಇದು 15ನೇ ಪ್ರಕರಣದಡಿಯಲ್ಲಿ ಬರುತ್ತದೆ. ಎರಡನೆಯ ಅಂಶವೆಂದರೆ ಒಬ್ಬ ವ್ಯಕ್ತಿಯು ತನ್ನ ಹೆಸರನ್ನು ಬದಲಾಯಿಸಿಕೊಂಡು, ತದನಂತರ, ರಿಜಿಸ್ಟರಿನಲ್ಲಿಯೂ ಸಹ ಹೆಸರಿನ ಬದಲಾವಣೆಗೆ ಕೋರಿಕೆಯನ್ನು ಸಲ್ಲಿಸಿದಂಥ ಪ್ರಕರಣಗಳನ್ನು ಒಳಗೊಳ್ಳುತ್ತದೆ. ಇಂಥ ಪ್ರಕರಣ ನಿಸ್ಸಂಶಯವಾಗಿಯೂ ಅಧಿನಿಯಮದ 15ನೇ ಪ್ರಕರಣದ ವ್ಯಾಪ್ತಿಯಲ್ಲಿ ಬರುವುದಿಲ್ಲ.

ರಿಜಿಸ್ಟರಿನಲ್ಲಿ ನಮೂದಿಸಬೇಕೆಂದು ಗೊತ್ತುಪಡಿಸಲಾಗಿರುವ ವಿವಿಧ ನಮೂದುಗಳಲ್ಲಿ ಹೆಸರು ಒಂದು. ಆದ್ದರಿಂದ, ಹೆಸರಿನ ಬದಲಾವಣೆ ಎಂದರೆ ವಾಸ್ತವಿಕವಾಗಿ ಹೆಸರಿಗೆ ಸಂಬಂಧಿಸಿದ ನಮೂದಿನ ತಿದ್ದುಪಡಿಯಾಗಿರುತ್ತದೆ. ಆದ್ದರಿಂದ, ಹೆಸರಿನ ಬದಲಾವಣೆಯ ಕೋರಿಕೆಗೆ ಸಂಬಂಧಿಸಿದ ಪ್ರತಿಯೊಂದು ಸಂದರ್ಭವನ್ನು ಮೇಲೆ ಹೇಳಿದ ಅವಲೋಕನಗಳ ಹಿನ್ನೆಲೆಯಲ್ಲಿ ಪರಿಶೀಲಿಸತಕ್ಕದ್ದು.

**70. ಪ್ರಶ್ನೆ** : ಜನನ ಮತ್ತು ಮರಣಗಳಿಗೆ ಸಂಬಂಧಿಸಿದಂತೆ ಹಳೆಯ ನಿಯಮಗಳ ಮೇರೆಗೆ, ಮಾಡಲಾದ ಅನೇಕ ನಮೂದುಗಳಲ್ಲಿ

ಲಿಪಿಕ ಅಥವಾ ವಾಸ್ತವಿಕ ತಪ್ಪುಗಳಿವೆ. ಹಾಗಾಗಿ ಸರಿಯಾದ ವಿವರಗಳಿರುವ ಪ್ರಮಾಣಪತ್ರಗಳನ್ನು ಪಡೆಯುವಲ್ಲಿ ಜನರು ತೊಂದರೆಗಳನ್ನನುಭವಿಸುತ್ತಿದ್ದಾರೆ. ಹಳೆಯ ದಾಖಲೆಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಈ ವಿಷಯಗಳನ್ನು ನಿರ್ವಹಿಸುವ ಕೆಲವು ವ್ಯಕ್ತಿಗಳಿಗೆ 1969ರ ಅಧಿನಿಯಮದ 15ನೇ ಪ್ರಕರಣದ ಮೇರೆಗೆ ಅಧಿಕಾರಗಳನ್ನು ನೀಡುವುದು ಅವಶ್ಯಕವಾಗಿದೆ. ಸಹಜವಾಗಿ ಇಂಥ ಪರಿಸ್ಥಿತಿಗಳಲ್ಲಿ ಗೋವಾ, ದಾಮನ್ ಮತ್ತು ಡಿಯುಗಳಲ್ಲಿ ಇವನ್ನು ಪಡೆಯುವುದು ಕಷ್ಟ ಈ ಕೆಲಸವನ್ನು ಮಾಡುವುದಕ್ಕೆ ಸಿವಿಲ್ ರಿಜಿಸ್ಟ್ರಾರರೇ ಅತ್ಯುತ್ತಮ ವ್ಯಕ್ತಿಯಾಗಿರುತ್ತಾರೆ. ಈ ವಿಷಯದ ಬಗ್ಗೆ ಸಮಾಲೋಚಿಸಿದ ಈ ಆಡಳಿತದ ಕಾನೂನು ಇಲಾಖೆಯು, 15ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರುಗಳ ಪ್ರಕಾರ್ಯಗಳನ್ನು ಯಾರೇ ಇತರ ಪ್ರಾಧಿಕಾರಿಗೆ ಪ್ರತ್ಯಾಯೋಜಿಸುವ ಬಗ್ಗೆ ಅಧಿನಿಯಮದಲ್ಲಿ ಯಾವುದೇ ಉಪಬಂಧ ಇಲ್ಲದಿರುವುದರಿಂದ ಹಾಗೇ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಅಭಿಪ್ರಾಯಪಟ್ಟಿದೆ. 15ನೇ ಪ್ರಕರಣದ ಮೇರೆಗಿನ ಪ್ರಕಾರ್ಯಗಳನ್ನು ರಿಜಿಸ್ಟ್ರಾರುಗಳು ಮಾತ್ರ ಚಲಾಯಿಸತಕ್ಕದ್ದೆಂದು ಅವರು ಸಲಹೆ ನೀಡಿದ್ದಾರೆ. ಹಳೆಯ ದಾಖಲೆಗಳಲ್ಲಿ ತಿದ್ದುಪಡಿಯನ್ನು ಮಾಡಲು ರಿಜಿಸ್ಟ್ರಾರುಗಳಿಗೆ ವಾಸ್ತವವಾಗಿ ತೊಂದರೆಗಳಿರುವುದರಿಂದ ಮತ್ತು ವಿಷಯವು ತುರ್ತಿನದಾಗಿರುವುದರಿಂದ, ಈ ಸರ್ಕಾರವು ಅಧಿನಿಯಮದ 32ನೇ ಪ್ರಕರಣದ ಮೇರೆಗೆ ಭಾರತ ಸರ್ಕಾರದ ಅನುಮೋದನೆಯನ್ನು ಪಡೆಯಲು ನಿರ್ಧರಿಸಿದೆ ಮತ್ತು ಅನುಮೋದನೆಯನ್ನು, ಹಳೆಯ ರಿಜಿಸ್ಟರುಗಳಲ್ಲಿ ದೋಷಯುತ ನಮೂದುಗಳನ್ನು ಸರಿಪಡಿಸಲು ಪ್ರತೀ ತಾಲೂಕಿನ ಸಿವಿಲ್ ರಿಜಿಸ್ಟ್ರಾರನನ್ನು ಅಧಿಕೃತಗೊಳಿಸಿದೆ. ಇಂಥ ಆದೇಶವು ಅಧಿನಿಯಮದ ಮೇರೆಗೆ ಸಿಂಧುವಾಗಿರುತ್ತದೆಯೇ?

ಸ್ಪಷ್ಟೀಕರಣ : ಗೋವಾ, ದಾಮನ್ ಮತ್ತು ಡಿಯು ಆಡಳಿತಗಾರನು ಅಧಿನಿಯಮದ 15ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ಮೂಲಕ ಗೋವಾ, ದಾಮನ್ ಮತ್ತು ಡಿಯುನ ಪ್ರತಿ ತಾಲೂಕಿನ ಸಿವಿಲ್ ರಿಜಿಸ್ಟ್ರಾರನನ್ನು ಸದರಿ ಪ್ರಕರಣದ ಮತ್ತು ಅದರ ಮೇರೆಗೆ ಮಾಡಿದ ನಿಯಮಗಳ ಮೇರೆಗೆ ತಿದ್ದುಪಡಿಗಳನ್ನು ಅಥವಾ ರದ್ದಿಯಾತಿಯನ್ನು ಮಾಡಲು ಅನುಮತಿಸಲಾದ ಮಟ್ಟಿಗೆ ಹಳೆಯ ರಿಜಿಸ್ಟರಿನಲ್ಲಿ ದೋಷಯುಕ್ತ ನಮೂದನೆಯ ತಿದ್ದುಪಡಿಗಳನ್ನು ಅಥವಾ ರದ್ದಿಯಾತಿಯನ್ನು ಮಾಡಲು ಅಧಿಕೃತಗೊಳಿಸಿದೆ ಎಂಬುದು ಕಂಡುಬಂದಿದೆ. ಅಂಥ ಆದೇಶವು ಅಧಿನಿಯಮದ ಮೇರೆಗೆ ಸಿಂಧುವಾಗಿರುತ್ತದೆಯೆ ಮತ್ತು ಅಧಿನಿಯಮದ ಮೇರೆಗೆ ನೇಮಕಗೊಂಡ ರಿಜಿಸ್ಟ್ರಾರನನ್ನು ಹೊರತುಪಡಿಸಿ ಯಾವುದೇ ಪ್ರಾಧಿಕಾರಕ್ಕೆ ಪರಿಮಿತಿ ಉದ್ದೇಶಕ್ಕಾಗಿ ಅಂಥ ಪ್ರತ್ಯಾಯೋಜನೆಯನ್ನು ಮಾಡಬಹುದೇ ಎಂಬುದು ಪ್ರಶ್ನೆ.

15ನೇ ಪ್ರಕರಣದ ಉಪಬಂಧವು, ಯಾವ ಷರತ್ತಿಗೆ ಅಥವಾ ಯಾವ ಪರಿಸ್ಥಿತಿಗಳಿಗೆ ಒಳಪಟ್ಟು ನಮೂದುಗಳನ್ನು ತಿದ್ದುಪಡಿ ಮಾಡಬಹುದು ಅಥವಾ ರದ್ದುಗೊಳಿಸಬಹುದು ಮುಂತಾದವುಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಮಾಡಬಹುದಾದಂಥ ನಿಯಮಗಳಿಗೆ ಒಳಪಟ್ಟಿರುತ್ತದೆ ಎಂಬುದು ಸ್ಪಷ್ಟವಾಗಿವೆ. 15ನೇ ಪ್ರಕರಣದ ಮೇರೆಗೆ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸುವುದಕ್ಕೆ ರಾಜ್ಯ ಸರ್ಕಾರ ಕೇಂದ್ರಾಡಳಿತ ಪ್ರದೇಶದ ಸಂದರ್ಭದಲ್ಲಿ ಆಡಳಿತಗಾರನು ಮಾಡಿದ ಯಾವುದೇ ಇತರ ಪ್ರಾಧಿಕಾರದ ನೇಮಕವು, ರಿಜಿಸ್ಟ್ರಾರನಿಂದ ಅಧಿಕಾರಗಳ ಪ್ರತ್ಯಾಯೋಜನೆ ಎನಿಸುವುದಿಲ್ಲ ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು ಕಾನೂನು ಪ್ರಕಾರ ಅಂಥ ಪ್ರಕಾರ್ಯಗಳನ್ನು ನೆರವೇರಿಸಬಹುದು.

ಈ ದೃಷ್ಟಿಯಿಂದ, ಸದರಿ ಆದೇಶಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ಕಾನೂನು ಅಡಚಣೆಯುಂಟಾಗುವುದಿಲ್ಲ ಮತ್ತು ಸಿವಿಲ್ ರಿಜಿಸ್ಟ್ರಾರನು ತೆಗೆದುಕೊಂಡ ಕ್ರಮವು ಕಾನೂನುಬದ್ಧವಾಗಿರುತ್ತದೆ. ಆದಾಗ್ಯೂ, ಈ ತೊಂದರೆಯನ್ನು ನಿವಾರಿಸುವುದಕ್ಕೆ ಅಧಿನಿಯಮದ ಮೇರೆಗೆ ಯಾವುದೇ ವ್ಯಕ್ತ ಉಪಬಂಧವಿಲ್ಲ. ಈ ಕಾರಣದಿಂದ, ಅಧಿನಿಯಮದ 32ನೇ ಪ್ರಕರಣದ ಉಪಬಂಧಗಳನ್ನು ಸಹ ತೊಂದರೆಗಳನ್ನು ನಿವಾರಿಸಲು ಬಳಸಿಕೊಳ್ಳಬಹುದು.

71. ಪ್ರಶ್ನೆ : ಹೆಣ್ಣು ಮಗುವಿನ ಜನನವನ್ನು 26.11.44 ಜನನ ದಿನಾಂಕವೆಂದು ನೋಂದಾಯಿಸಲಾಗಿದೆ. ತರುವಾಯ ಹಾಗೇ ನೋಂದಾಯಿಸಿದ ಹೆಣ್ಣು ಮಗುವಿನ ಜನನವನ್ನು ಅದು ವಾಸ್ತವಿಕವಾಗಿ ಗಂಡು ಮಗುವಿನದಾಗಿತ್ತೆಂದು ಹೇಳುವ ಅರ್ಜಿಯನ್ನು ಸ್ವೀಕರಿಸಲಾಗಿದೆ. ಯಾರ ಜನನವನ್ನು ಹಾಗೇ ನೋಂದಾಯಿಸಲಾಗಿದೆಯೋ ಆ ವ್ಯಕ್ತಿಯು ಜನನ ರಿಜಿಸ್ಟರಿನಲ್ಲಿ ದಾಖಲಿಸಿದ ಹೆಸರು ಮತ್ತು ಲಿಂಗವನ್ನು ಸರಿಪಡಿಸಬೇಕೆಂದು ಕೋರಿದ್ದಾನೆ. ತನ್ನ ಹಕ್ಕಿಗೆ ಆಧಾರವಾಗಿ, ಆ ವ್ಯಕ್ತಿಯು ಇಬ್ಬರು ಪುರಸಭಾ ಕಮಿಷನರುಗಳು ದೃಢೀಕರಿಸಿದ ಅಫಿಡಾವಿಟನ್ನು ಮತ್ತು ಮೇಲೆ ಹೇಳಿದ ಹೆಣ್ಣು ಮಗುವಿನ ಜನನವನ್ನು ನೋಂದಾಯಿಸಲಾದ ಜನನ ದಿನಾಂಕವನ್ನೇ ತೋರಿಸುವ ತನ್ನ ಮೆಟ್ರಿಕ್ಯುಲೇಷನ್ ಪ್ರಮಾಣಪತ್ರವನ್ನು ಸಲ್ಲಿಸಿದ್ದಾನೆ.

ಸ್ಪಷ್ಟೀಕರಣ : ಇದು ಹೆಸರಿನ ಮತ್ತು ಲಿಂಗದ ತಿದ್ದುಪಡಿ ಪ್ರಕರಣ ಮಾತ್ರವಲ್ಲ, ಜನನಕ್ಕೆ ಸಂಬಂಧಿಸಿದ ಹಳೆಯ ನಮೂದಿನ ಸಂಪೂರ್ಣ ರದ್ದಿಯಾತಿಯಾಗಿದೆ. ಇದರ ಬಗ್ಗೆ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಸ್ಥಳೀಯ ರಿಜಿಸ್ಟ್ರಾರನಿಗೆ ತದನುಸಾರವಾಗಿ ಮಾಹಿತಿದಾರನಿಗೆ ಮಾಹಿತಿ ನೀಡುವಂತೆ ತಿಳಿಸಬಹುದು.

72. ಪ್ರಶ್ನೆ : ಸಕ್ಷಮ ನ್ಯಾಯಾಲಯದಿಂದ ಮತ್ತೊಬ್ಬ ಮಾಹಿತಿದಾರನು ಪಡೆದ ಘೋಷಣಾತ್ಮಕ ಡಿಕ್ರಿಯ ಆಧಾರದ ಮೇರೆಗೆ ಜನನ ದಿನಾಂಕವನ್ನು ಸರಿಪಡಿಸಬಹುದೇ?

ಸ್ಪಷ್ಟೀಕರಣ : ವಯಸ್ಸನ್ನು ಸರಿಪಡಿಸುವಂತೆ ಕೋರಿ ಸಂಬಂಧಪಟ್ಟ ವ್ಯಕ್ತಿಯ ಅರ್ಜಿಯನ್ನು ಸಲ್ಲಿಸಬೇಕೇ ವಿನಃ ಮತ್ತೊಬ್ಬ ವ್ಯಕ್ತಿಯಲ್ಲ.

73. ಪ್ರಶ್ನೆ : ನೋಂದಣಿ ದಾಖಲೆಗಳಲ್ಲಿ ತಿದ್ದುಪಡಿ ಮಾಡುವ ಮೂಲಕ ತಂದೆ ಮತ್ತು ತಾಯಿಯ ಹೆಸರನ್ನು ಸೇರಿಸಿ ಹೆಸರಿನ ವಿಸ್ತರಣೆ ಮಾಡುವುದು ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ 15ನೇ ಪ್ರಕರಣದ ಅಡಿಯಲ್ಲಿ ಬರುತ್ತದೆಯೇ?

ಸ್ಪಷ್ಟೀಕರಣ : ಇಲ್ಲಿ ಹೆಸರಿನ ಬದಲಾವಣೆ ಆಗಿರುವದರಿಂದ ಅಧಿನಿಯಮದ 15ನೇ ಪ್ರಕರಣದ ಉಪಬಂಧಗಳು ಅಂಥ ಪ್ರಕರಣದ ಉಪಬಂಧಗಳು ಅಂಥ ಪ್ರಕರಣಗಳಲ್ಲಿ ಅನ್ವಯಿಸುವುದಿಲ್ಲ.

74. ಪ್ರಶ್ನೆ : ಜನನ, ಮರಣಗಳ ನೋದಣಿ ಅಧಿನಿಯಮ, 1969 ಜಾರಿಗೆ ಬರುವುದಕ್ಕೆ ಮುಂಚೆ ಘಟಿಸಿದ ಮತ್ತು ನೋಂದಾಯಿಸಿದ ಘಟನೆಗಳಿಗೆ ಸಂಬಂಧಿಸಿದ ಹಳೆಯ ಜನನ ರಿಜಿಸ್ಟರಿನಲ್ಲಿ ಹೆಸರಿನ ಸೇರ್ಪಡೆಯನ್ನು ಮಾಡಬಹುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 31(2)ನೇ ಉಪಬಂಧಗಳ ಆಧಾರದ ಮೇಲೆ, ನಿರಸನಗೊಂಡ ಕಾನೂನಿನ ಮೇರೆಗೆ ಜನನ ಮತ್ತು ಮರಣಗಳಿಗೆ ಸಂಬಂಧಿಸಿದಂತೆ ಮಾಡಿದ ನಮೂದುಗಳನ್ನು

ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಭಾವಿಸಲಾಗುತ್ತದೆ ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮದಿಂದ ರದ್ದಾಗುವವರೆಗೆ ಅದು ಜಾರಿಯಲ್ಲಿರುವುದು ಮುಂದುವರಿಯುತ್ತದೆ. ಆದ್ದರಿಂದ 1969ರ ಈ ಅಧಿನಿಯಮದ ಜಾರಿಗೆ ಮುಂಚೆ ನೋಂದಾಯಿತವಾದ ಘಟನೆಗಳಿಗೆ ಮೇಲೆ ಹೇಳಿದ ಅಧಿನಿಯಮದ ಉಪಬಂಧಗಳು ಅನ್ವಯಿಸುವುದು ಮುಂದುವರಿಯುತ್ತದೆ.

**75. ಪ್ರಶ್ನೆ** : ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ ಮೇರೆಗೆ ಹೆಸರಿನ ಹಿಂದಿರುವ ಸಂಕ್ಷಿಪ್ತಾಕ್ಷರ (ಇನಿಷಿಯಲ್)ದ ವಿಸ್ತರಣೆಯನ್ನು ಮಾಡುವುದು ಸಾಧ್ಯವೇ?

**ಸ್ಪಷ್ಟೀಕರಣ** : ಸಂಕ್ಷಿಪ್ತ ಹೆಸರಿನ (ಇನಿಷಿಯಲ್) ಮೊದಲ ಬರಹವು ರೂಪದಲ್ಲಿ ಅಥವಾ ವಿಷಯದಲ್ಲಿ ತಪ್ಪಾಗಿದೆಯೆಂದು ರಿಜಿಸ್ಟ್ರಾರನು ಮನಗಂಡರೆ ಅವನು ಅದನ್ನು ತಿದ್ದುಪಡಿ ಮಾಡಬಹುದು.

**76. ಪ್ರಶ್ನೆ** : ನ್ಯಾಯಾಲಯದ ತೀರ್ಪಿನ ಆಧಾರನ ಮೇರೆಗೆ ಜನನ ನಮೂದುಗಳಲ್ಲಿ ತಂದೆ ಮತ್ತು ತಾತನ ಹೆಸರನ್ನು ತಿದ್ದುಪಡಿ ಮಾಡಬಹುದೇ?

**ಸ್ಪಷ್ಟೀಕರಣ** : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 15ನೇ ಪ್ರಕರಣವು ರಿಜಿಸ್ಟರಿನಲ್ಲಿ ನಮೂದಿನ ತಿದ್ದುಪಡಿ ಅಥವಾ ರದ್ದತಿಯ ಬಗ್ಗೆ ಉಪಬಂಧ ಕಲ್ಪಿಸುತ್ತದೆ. ಈ ಉದ್ದೇಶಕ್ಕಾಗಿ, ಯಾವುದೇ ಸುಸಂಬಂದ್ಧ ನಮೂದು, ರೂಪದಲ್ಲಿ ಅಥವಾ ವಿಷಯದಲ್ಲಿ (ಇತ್ಯಾದಿ) ತಪ್ಪಾಗಿದೆಯೆಂದು ರಿಜಿಸ್ಟ್ರಾರನಿಗೆ ಸಮಾಧಾನವಾಗುವಂತೆ ರುಜುವಾತುಪಡಿಸಬೇಕು. ಹೀಗಿದ್ದರೂ, ಮೂಲ ನಮೂದನ್ನು ತೆಗೆಯಬಾರದು ಅಥವಾ ಬದಲಾಯಿಸಬಾರದು, ಅಂಚಿನಲ್ಲಿ ನಮೂದನ್ನು ಮಾಡಬೇಕು. 12ನೇ ನಿಯಮವು ನಂತರ ಅನುಸರಿಸಬೇಕಾದ ನಿರ್ದಿಷ್ಟ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಈ ಪ್ರಕರಣದಲ್ಲಿ ವಸ್ತು ಸ್ಥಿತಿಯ ವಿವರಗಳಲ್ಲಿ ತಪ್ಪಾದಂತೆ ಕಂಡು ಬರುವುದಿಲ್ಲ. ತಪ್ಪಾಗಿರುವುದೇ ಆದಲ್ಲಿ ವಿಷಯದಲ್ಲಿ ತಪ್ಪಾಗಿರುವಂತೆ ಕಂಡುಬರುತ್ತದೆ. ಈ ಉದ್ದೇಶಕ್ಕಾಗಿ (4)ನೇ ಉಪನಿಯಮವು, ಪ್ರಕರಣದ ವಾಸ್ತವಾಂಶಗಳ ಬಗ್ಗೆ ತಿಳುವಳಿಕೆ ಹೊಂದಿರುವ ಇಬ್ಬರು ನಂಬಲರ್ಹ ವ್ಯಕ್ತಿಗಳ ಘೋಷಣೆಯನ್ನು ಪಡೆಯಬೇಕೆಂದು ನಿರ್ದಿಷ್ಟವಾಗಿ ಉಪಬಂಧಿಸುತ್ತದೆ. ಅಲ್ಲದೆ, ರಿಜಿಸ್ಟ್ರಾರನು ಅದನ್ನು ಮನದಟ್ಟು ಮಾಡಿಕೊಳ್ಳುವುದಕ್ಕೆ ಮುಂಚೆ, ಮೊದಲಿಗೆ ವರದಿಯನ್ನು ನೀಡಿದ ತಾಯಿಗೆ ಅಥವಾ ವ್ಯಕ್ತಿಗೆ ಕಾರಣವನ್ನು ತೋರಿಸುವ ಅವಕಾಶವನ್ನು ನೀಡಬೇಕು.

**77. ಪ್ರಶ್ನೆ** : ಶಿಶುವಿನ ಜನನ ನೋಂದಣಿಯ ದಿನಾಂಕಕ್ಕೆ ತರುವಾಯ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಥವಾ ಅನ್ಯಥಾ ತಂದೆ/ತಾಯಿಯು ಹೆಸರಿನಲ್ಲಿ ಬದಲಾವಣೆ ಮಾಡಿಕೊಂಡರೆ ಅದನ್ನು ಜನನ ರಿಜಿಸ್ಟರಿನಲ್ಲಿ ಸೇರಿಸಬಹುದೇ?

**ಸ್ಪಷ್ಟೀಕರಣ** : ಹೆಸರಿನ ಇಂಥ ಬದಲಾವಣೆಗಳು ಅಧಿನಿಯಮದ 15ನೇ ಪ್ರಕರಣದಡಿಯಲ್ಲಿ ಬರುವುದಿಲ್ಲ. ಆದ್ದರಿಂದ ಇವುಗಳನ್ನು ಜನನ ರಿಜಿಸ್ಟರಿನಲ್ಲಿ ಸೇರಿಸುವ ಅವಶ್ಯಕತೆಯಿಲ್ಲ.

**78. ಪ್ರಶ್ನೆ** : ಜನನ/ಮರಣ ರಿಜಿಸ್ಟರಿನಲ್ಲಿ ನಮೂದುಗಳನ್ನು ತಿದ್ದುಪಡಿ ಮಾಡಲು ರದ್ದುಗೊಳಿಸಲು ಶುಲ್ಕವನ್ನು ವಿಧಿಸಬಹುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 30(2)(ಇ) ಪ್ರಕರಣವು, ಅಧಿನಿಯಮದ 15ನೇ ಪ್ರಕರಣದ ಉಪಬಂಧಗಳ ಮೇರೆಗೆ ಜನನ/ಮರಣ ರಿಜಿಸ್ಟರಿನಲ್ಲಿ ನಮೂದುಗಳನ್ನು ತಿದ್ದುಪಡಿ ಮಾಡಲು/ ರದ್ದುಗೊಳಿಸಲು ಶುಲ್ಕ ವಿಧಿಸುವುದಕ್ಕೆ ರಾಜ್ಯ ನಿಯಮಗಳಲ್ಲಿ ಉಪಬಂಧ ಮಾಡಲು ಅವಕಾಶವನ್ನು ಕಲ್ಪಿಸಿಲ್ಲ. ಆದ್ದರಿಂದ, ಈ ಬಗ್ಗೆ ಯಾವುದೇ ಶುಲ್ಕವನ್ನು ವಿಧಿಸುವಂತಿಲ್ಲ.

**79. ಪ್ರಶ್ನೆ** : ಜನನ ರಿಜಿಸ್ಟ್ರರಿನಲ್ಲಿ ಹೆಸರು ಮತ್ತು ಲಿಂಗಕ್ಕೆ ಸಂಬಂಧಸಿದ ನಮೂದುಗಳನ್ನು, ಅಂಥ ಸಮರ್ಪಕ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಲು ಶಸ್ತ್ರ ಚಿಕಿತ್ಸಕನಿಂದ ತಂದ ಪ್ರಮಾಣಪತ್ರದ ಆಧಾರದ ಮೇರೆಗೆ ತಿದ್ದಬಹುದೇ?

ಸ್ಪಷ್ಟೀಕರಣ : ಅಂಥ ಶಿಶುವಿನ ಹೆಸರು ಮತ್ತು ಲಿಂಗಕ್ಕೆ ಸಂಬಂಧಿಸಿದ ನಮೂದುಗಳನ್ನು ಸಮರ್ಪಕ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಿದ ಶಸ್ತ್ರ ಚಿಕಿತ್ಸಕನು ಶಿಶುವಿನ ಲಿಂಗವನ್ನು ಪ್ರಮಾಣೀಕರಿಸಿದರೆ ಅನುಮತಿಸಬಹುದು.

## ಪ್ರಕರಣ 17 :

**80. ಪ್ರಶ್ನೆ** : ಕಂಟೋನ್ಮೆಂಟ್ ಕಚೇರಿಯಲ್ಲಿ ಕೆಲಸ ಮಾಡುವ ಮಾಧ್ಯಮವು ಇಂಗ್ಲಿಷ್ ಆಗಿದೆ. ಆದ್ದರಿಂದ, ಅಧಿನಿಯಮದ ಮೇರೆಗೆ ರಿಜಿಸ್ಟರುಗಳನ್ನು ಮತ್ತು ಇತರ ನಮೂನೆಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುತ್ತಿಲ್ಲ. ದೇಶದ ವಿವಿಧ ಭಾಗಗಳ ಜನರು ಕಂಟೋನ್ಮೆಂಟ್ ಪ್ರದೇಶದಲ್ಲಿ ವಾಸಿಸುವುದರಿಂದ, ಇವರು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಜನನ ಮತ್ತು ಮರಣ ಪ್ರಮಾಣಪತ್ರಗಳನ್ನು ಕೊಡುವಂತೆ ಒತ್ತಾಯಿಸುತ್ತಾರೆ. ಆದ್ದರಿಂದ ಕಂಟೋನ್ಮೆಂಟಿನಂಥ ಕೆಲವು ನೋಂದಣಿ ಘಟಕಗಳಲ್ಲಿ ಗೊತ್ತುಪಡಿಸಿದ ರಿಜಿಸ್ಟರುಗಳನ್ನು ಮತ್ತು ನಮೂನೆಗಳನ್ನು ಇಂಗ್ಲಿಷ್ ಭಾಷೆಯಲ್ಲಿ ನಿರ್ವಹಿಸಲು ಸಾಧ್ಯವಿದೆಯೇ ಎಂಬುದರ ಬಗ್ಗೆ ದಯವಿಟ್ಟು ಸ್ಪಷ್ಟೀಕರಣ ನೀಡಿ?

ಸ್ಪಷ್ಟೀಕರಣ : ಕಂಟೋನ್ಮೆಂಟ್ ಮಂಡಳಿಯ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಮಾಧ್ಯಮವು ಇಂಗ್ಲೀಷ್ ಆಗಿರುವುದರಿಂದ, ಅವರು ರಿಜಿಸ್ಟರು, ಇತ್ಯಾದಿಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಇಟ್ಟುಕೊಳ್ಳುವುದಕ್ಕೆ ಅನುಮತಿಸಬಹುದು.

**81. ಪ್ರಶ್ನೆ** : ಜನನ ಮತ್ತು ಮರಣ ರಿಜಿಸ್ಟರಿನಲ್ಲಿ ನಮೂದುಗಳನ್ನು ಮಾಡಲು ಬಾಲ್ ಪೆನ್ನು ಅಥವಾ ಡಾಟ್ ಪೆನ್ನನ್ನು ಬಳಸಬಹುದೇ?

ಸ್ಪಷ್ಟೀಕರಣ : ಜನನ ಮತ್ತು ಮರಣ ರಿಜಿಸ್ಟರಿನಲ್ಲಿ ನಮೂದುಗಳನ್ನು ಮಾಡುವಾಗ ಬಾಲ್/ಡಾಟ್ ಪೆನ್ನನ್ನು ಬಳಸುವುದು ಅಪೇಕ್ಷಣೀಯವಲ್ಲ. ಯಾಕೆಂದರೆ ಇದರ ಬಳಕೆಯಿಂದ ಪೇಪರಿನ ಮೇಲೆ ಹೆಚ್ಚಿನ ಒತ್ತು ಹೇಳುತ್ತದೆ. ಬಹುಶಃ ಈ ಒಂದು ಕಾರಣದಿಂದಾಗಿ, ರಿಜಿಸ್ಟರುಗಳಲ್ಲಿ ನಮೂದುಗಳನ್ನು ಮಾಡುವುದಕ್ಕೆ ಶಾಯಿಯನ್ನು ಬಳಸಲು ಮುಖ್ಯ ರಿಜಿಸ್ಟ್ರಾರುಗಳ ಪ್ರಥಮ ಸಮ್ಮೇಳನದಲ್ಲಿ ನಿರ್ದಿಷ್ಟವಾಗಿ ಶಿಫಾರಸ್ಸು ಮಾಡಲಾಗಿದೆ. ಆದಾಗ್ಯೂ, ಮಾಹೆವಾರು ವರದಿಗಳು ಇತ್ಯಾದಿಗಳನ್ನು ತಯಾರಿಸುವಾಗ ಬಾಲ್/ಡಾಟ್ ಪೆನ್ನು ಬಳಸುವುದರ ಬಗ್ಗೆ ಯಾವುದೇ ಆಕ್ಷೇಪಣೆಯಿಲ್ಲ. ಯಾಕೆಂದರೆ ಇವನ್ನು ಶಾಶ್ವತವಾಗಿ ರಕ್ಷಿಸಿಡುವುದಿಲ್ಲ.

**82. ಪ್ರಶ್ನೆ** : ಮೃತನ ಪೂರ್ಣ ಹೆಸರು, ತಂದೆ/ಗಂಡನ ಹೆಸರು ಮತ್ತು ಶಾಶ್ವತ ವಿಳಾಸವನ್ನು ವೈದ್ಯಕೀಯ ಗರ್ಭಪಾತವಾಗಿರುವ ಸಂದರ್ಭದಲ್ಲಿ ನಮೂನೆ ಸಂಖ್ಯೆ 4ರಲ್ಲಿ ಪ್ರಭಾರಿ ವೈದ್ಯಕೀಯ ಅಧಿಕಾರಿಯು ಒದಗಿಸಬೇಕೇ ಅಥವಾ ಬೇಡವೇ,

ಒದಗಿಸಬೇಕಿಲ್ಲ ಎಂದಾದರೆ ಮಾಹಿತಿದಾರನು ಮರಣ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಮರಣ ಪ್ರಮಾಣಪತ್ರವನ್ನು ಹೇಗೆ ನೀಡಲು ಸಾಧ್ಯವಾಗುತ್ತದೆ?

ಸ್ಪಷ್ಟೀಕರಣ : ನಮೂನೆ ಸಂಖ್ಯೆ 8ರಲ್ಲಿ ಮೃತನ ಎಲ್ಲ ಅವಶ್ಯಕ ವಿವರಗಳನ್ನು, ಮರಣ ರಿಜಿಸ್ಟರಿನಲ್ಲಿ ನಮೂದನ್ನು ದಾಖಲಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಆಸ್ಪತ್ರೆಯಿಂದ ಪಡೆಯುವುದು ಅವಶ್ಯಕವಾಗಿದೆ. ಈ ವಿವರಗಳಿಲ್ಲದೆ ನೋಂದಣಿಯನ್ನು ಮಾಡತಕ್ಕುದಲ್ಲ. ಅಧಿನಿಯಮದ ಪ್ರಕಾರ ಇದು ಅಗತ್ಯ. ಪ್ರಸ್ತುತ ಪ್ರಕರಣದ ಮೇರೆಗೆ "ಮರಣದ ಕಾರಣ" ರಹಸ್ಯ ಸ್ವರೂಪದ್ದಾಗಿದೆ. ಆಸ್ಪತ್ರೆ ಪ್ರಾಧಿಕಾರಿಗಳು ತಿಳಿಸುವ ಮರಣದ ಕಾರಣವನ್ನು ನೋಂದಣಿ ಪ್ರಾಧಿಕಾರಿಗಳು ರಹಸ್ಯವೆಂದು ಪರಿಗಣಿಸುತ್ತಾರೆ ಮತ್ತು ಅಧಿನಿಯಮದ 17ನೇ ಪ್ರಕರಣದ ಮೇರೆಗೆ ಮರಣ ಪ್ರಮಾಣಪತ್ರವನ್ನು ನೀಡುವಾಗ ಬಹಿರಂಗಪಡಿಸುವುದಿಲ್ಲ ಎಂಬುದನ್ನು ಅವರಿಗೆ ತಿಳಿಸಬಹುದು.

83. ಪ್ರಶ್ನೆ : ಕೆಲವು ನೋಂದಣಿ ಘಟಕಗಳಲ್ಲಿ ಜನನ ಮತ್ತು ಮರಣ ರಿಜಿಸ್ಟರುಗಳ ನಿಯತ ಬಳಕೆಯಿಂದ ಅವು ತುಂಬಾ ಹಳೆಯದಾಗಿವೆ ಮತ್ತು ಜೀರ್ಣಾವಸ್ಥೆಯಲ್ಲಿವೆ ಎಂದು ಕೆಲವು ಮುಖ್ಯ ರಿಜಿಸ್ಟ್ರಾರರು ವರದಿ ಮಾಡಿದ್ದಾರೆ. ಇವುಗಳನ್ನು ಸಕಾಲದಲ್ಲಿ ಪ್ರತಿ ಮಾಡದಿದ್ದಲ್ಲಿ, ಹಳೆಯ ರಿಜಿಸ್ಟರುಗಳನ್ನು ಮತ್ತೆ ಬಳಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಇವರು, ಅಂಥ ರಿಜಿಸ್ಟರುಗಳ ನಕಲು ದ್ವಿಪ್ರತಿಯನ್ನು ತೆಗೆದುಕೊಳ್ಳುವುದಕ್ಕೆ ಈ ಕಚೇರಿಯ ಅನುಮತಿಯನ್ನು ಕೋರಿದ್ದಾರೆ.

ಸ್ಪಷ್ಟೀಕರಣ : ಜನನ ಮತ್ತು ಮರಣ ರಿಜಿಸ್ಟರುಗಳು ನಿಗದಿತ ಸಮಯದ ನಂತರ ಬಳಕೆಗೆ ಅನರ್ಹವಾಗುತ್ತವೆ ಎಂಬುದು ನಿಜ. ಈ ಕಾರಣದಿಂದಾಗಿ, ನಾವು ಈ ದಾಖಲೆಗಳನ್ನು ತುಂಬಾ ಜಾಗರೂಕತೆಯಿಂದ ನಿರ್ವಹಿಸಬೇಕೆಂದು ರಾಜ್ಯಗಳಿಗೆ ಸೂಚಿಸದ್ದೇವೆ. ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯಿರುವುದರ ಜೊತೆಗೆ ಈ ದಾಖಲೆಗಳನ್ನು ಪ್ರತಿ ಮಾಡುವಲ್ಲಿ ಮಾನವ ತಪ್ಪುಗಳಾಗುವ ಸಾಧ್ಯತೆ ಇರುವುದರಿಂದ ಈ ರಿಜಿಸ್ಟರುಗಳ ಪ್ರತಿಗಳನ್ನು ಮಾಡುವುದು ಇದಕ್ಕೆ ಸೂಕ್ತ ಪರಿಹಾರವಲ್ಲ. ಉತ್ತಮ ಕ್ರಮವೆಂದರೆ ಅಂಥ ದಾಖಲೆಗಳ ಫೋಟೋಸ್ಟಾಟ್ ಪ್ರತಿಗಳನ್ನು ಅಥವಾ ಮೈಕ್ರೋಫಿಲ್ಮ್‌ಗಳನ್ನು ತೆಗೆಯುವುದಾಗಿದೆ. ಜನನ/ಮರಣ ಪ್ರಮಾಣಪತ್ರವನ್ನು ಜನನ/ಮರಣಗಳ ಮೂಲ ದಾಖಲೆಗಳಿಂದ ನೀಡಬೇಕಾಗಿದೆ. ಈ ವ್ಯವಸ್ಥೆಯಿಂದಾಗಿ, ಕೆಲವು ನಿರ್ದಿಷ್ಟ ವರ್ಷದ ಪೂರ್ಣ ದಾಖಲೆಯನ್ನು ಪ್ರತಿ ಮಾಡುವ ಪ್ರಸ್ತಾವನೆಯನ್ನು, ಅಂಥ ಮರು ಬರಹದ ದಾಖಲೆಯನ್ನು ಜನನ ಮತ್ತು ಮರಣ ಪ್ರಮಾಣಪತ್ರದ ಶೋಧನೆ ಮತ್ತು ತಯಾರಿಕೆಗೆ ಬಳಸಬೇಕು ಎಂಬ ಷರತ್ತಿನ ಮೇರೆಗೆ, ಸಮ್ಮತಿಸಲಾಗಿದೆ. ಆದರೆ ಪ್ರಮಾಣಪತ್ರವನ್ನು ನೀಡುವಾಗ ನಮೂದನ್ನು ಮೂಲ ಹಳೆಯ ದಾಖಲೆಯಿಂದ ಪರಿಶೀಲಿಸಬೇಕಾಗಿದೆ. ಇದನ್ನು ಟಿಶ್ಯೂ/ಪಾರದರ್ಶಕ ಕಾಗದ ಇತ್ಯಾದಿಯಲ್ಲಿ ನವೀಕರಿಸಿದ ನಂತರ, ಮೇಲಿನ ಉದ್ದೇಶಕ್ಕಾಗಿ ಸಂರಕ್ಷಿಸಿಡಬೇಕಾಗುತ್ತದೆ. ಈ ರೀತಿಯಾಗಿ ಮರುಬರಹದ ದಾಖಲೆಯನ್ನು ನಿಯತವಾಗಿ ಬಳಸಬಹುದು. ಜನನ/ಮರಣ ಪ್ರಮಾಣಪತ್ರವನ್ನು ನೀಡುವ ಸಂದರ್ಭದಲ್ಲಿ ಮೂಲ ದಾಖಲೆಗಳನ್ನು ಪರಾಮರ್ಶಿಸಬೇಕು.

84. ಪ್ರಶ್ನೆ : ಹರಿಯಾಣ ರಾಜ್ಯದ ಹಳೆಯ ಪದ್ಧತಿಯ ಜನನ ಮತ್ತು ಮರಣ ನೋಂದಣಿಯಲ್ಲಿ, ಉದ್ಧೃತಗಳನ್ನು ಪಡೆಯುವುದಕ್ಕೆ ಸಾರ್ವಜನಿಕರು ಜನನ ಮತ್ತು ಮರಣ ದಾಖಲೆಗಳನ್ನು ಪರಿಶೀಲಿಸುವ ಅವಕಾಶವಿದೆ. ಆದರೆ ಹೊಸ

ನಿಯಮಗಳಡಿಯಲ್ಲಿ ಈ ಸೌಲಭ್ಯವನ್ನು ಒದಗಿಸಿಲ್ಲ. ಆದಕಾರಣ ಸಾರ್ವಜನಿಕರಿಗೆ ದಾಖಲೆಯನ್ನು ಪರಿಶೀಲಿಸಲು ಅನುಮತಿಸಬಹುದೇ ಅಥವಾ ಇಲ್ಲವೇ ಎಂಬುದು ಅರ್ಥವಾಗುತ್ತಿಲ್ಲ. ದಯವಿಟ್ಟು ಸ್ಪಷ್ಟೀಕರಣ ನೀಡಿ.

ಸ್ಪಷ್ಟೀಕರಣ : ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ 17(1)ನೇ ಪ್ರಕರಣವು, ಜನನ ಮತ್ತು ಮರಣಗಳ ರಿಜಿಸ್ಟರಿನಲ್ಲಿನ ಯಾವುದೇ ನಮೂದನ್ನು ಸಾರ್ವಜನಿಕರು ರಿಜಿಸ್ಟ್ರಾರನಿಂದ ಶೋಧನೆ ಮಾಡಿಸಬಹುದು ಎಂದು ಉಪಬಂಧಿಸುತ್ತದೆ. ಮೇಲಿನ ಪ್ರಕರಣದ ಮೇರೆಗೆ ಸಾರ್ವಜನಿಕರು ದಾಖಲೆಗಳನ್ನು ಪರಿಶೀಲಿಸಲು ಅನುಮತಿಸುವುದು ಸಾಧ್ಯವಿಲ್ಲ. ಆದಾಗ್ಯೂ, ಗೊತ್ತುಪಡಿಸಿದ ಶುಲ್ಕವನ್ನು ಸಂದಾಯ ಮಾಡಿದ ಮೇಲೆ, ಶೋಧನೆಯನ್ನು ಸೂಕ್ತ ಪ್ರಾಧಿಕಾರವು ಮಾಡಬೇಕು ಮತ್ತು ಪ್ರಮಾಣೀಕೃತ ಉದ್ಧೃತಗಳನ್ನು ಅರ್ಜಿದಾರನಿಗೆ ನೀಡಬಹುದು.

85. ಪ್ರಶ್ನೆ : ಪುರಸಭಾ ಪರಿಷತ್ತುಗಳ ಹಳೆಯ ಉಪನಿಧಿಗಳ ಮೇರೆಗೆ ನೋಂದಾಯಿಸಲಾದ ಘಟನೆಗಳಿಗೆ ಉದ್ಧೃತಗಳನ್ನು ನೀಡಬೇಕಾದಾಗ ಹಳೆಯ ಉಪವಿಧಿಗಳಿಗನುಸಾರವಾಗಿ ಶುಲ್ಕವನ್ನು ವಿಧಿಸಬೇಕೇ ಅಥವಾ ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ 30ನೇ ಪ್ರಕರಣದ ಮೇರೆಗೆ ರೂಪಿಸಲಾದ ಹೊಸ ನಿಯಮಗಳ ಮೇರೆಗೆ ಗೊತ್ತುಪಡಿಸಿದ ದರಗಳ ಪ್ರಕಾರ ವಿಧಿಸಬೇಕೇ ಎಂಬುದನ್ನು ದಯವಿಟ್ಟು ಸ್ಪಷ್ಟಪಡಿಸಿ.

ಸ್ಪಷ್ಟೀಕರಣ : ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ ಜಾರಿಯ ನಂತರ, 1969ರ ಅಧಿನಿಯಮದಲ್ಲಿ ಬಂದಿರುವ ವಿಷಯಗಳಿಗೆ ಸಂಬಂಧಿಸಿದ ಹಿಂದಿನ ಅಧಿನಿಯಮಗಳ/ಉಪವಿಧಿಗಳ ಎಲ್ಲ ಉಪಬಂಧಗಳು, ಅಧಿನಿಯಮದ 31(1)ನೇ ಪ್ರಕರಣದ ಮೇರೆಗೆ ಉಪಬಂಧಿಸಿದಂತೆ ನಿರಸನಗೊಂಡಿದೆ. ಹಳೆಯ ಉಪವಿಧಿಗಳ ಮೇರೆಗೆ ಹಳೆಯ ಸಂಗತಿಗಳಿಗೆ ಸಂಬಂಧಿಸಿದ ಉದ್ಧೃತಗಳನ್ನು ನೀಡುವ ಪ್ರಶ್ನೆಯೇ ಈಗ ಉದ್ಭವಿಸುವುದಿಲ್ಲ. 1969ನೇ ಅಧಿನಿಯಮದ 17ನೇ ಪ್ರಕರಣದ ಮತ್ತು ಅದರ ಮೇರೆಗಿನ ಸುಸಂಬದ್ಧವಾದ ರಾಜ್ಯ ನಿಯಮಗಳ ಮೇರೆಗೆ ಗೊತ್ತುಪಡಿಸಿದ ಶುಲ್ಕವೇ ಅಂಥ ಸಂದರ್ಭಗಳಿಗೂ ಸಹ ಅನ್ವಯವಾಗುತ್ತದೆ.

86. ಪ್ರಶ್ನೆ : ಜನನ ಮತ್ತು ಮರಣಗಳ ನೋಂದಣಿಯ ಹಳೆಯ ಪದ್ಧತಿಯಡಿಯಲ್ಲಿ, ಸರ್ಕಾರಿ ಕೆಲಸಕ್ಕೆ ಯಾವುದೇ ಸಂದಾಯವಿಲ್ಲದೆ ಉದ್ಧೃತಗಳನ್ನು ನೀಡಲಾಗುತ್ತಿತ್ತು. ಸೈನಿಕ ಮಂಡಳಿಗೂ ಸಹ ಅದೇ ರೀತಿಯ ರಿಯಾಯಿತಿ ಲಭ್ಯವಿತ್ತು. ಆದರೆ ಹೊಸ ನಿಯಮಗಳಲ್ಲಿ ಅಂಥ ವ್ಯವಸ್ಥೆಯಿಲ್ಲ, ಸರ್ಕಾರಿ ಕೆಲಸಕ್ಕಾಗಿ ಸರ್ಕಾರಿ ಕಚೇರಿಗಳಿಗೆ ಮತ್ತು ಸೈನಿಕ ಮಂಡಳಿಗೂ ಸಹ ಸಂದಾಯವಿಲ್ಲದೆ ಉದ್ಧೃತಗಳನ್ನು ಒದಗಿಸಬಹುದೇ? ದಯವಿಟ್ಟು ಸಲಹೆ ನೀಡಿ.

ಸ್ಪಷ್ಟೀಕರಣ : ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ 17(1)ನೇ ಪ್ರಕರಣವು ಉದ್ಧೃತಗಳ ನೀಡಿಕೆಗೆ ಶುಲ್ಕ ಸಂದಾಯ ಮಾಡುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಮಾಡಲು ರಾಜ್ಯ ಸರ್ಕಾರವನ್ನು ಅಧಿಕೃತಗೊಳಿಸುತ್ತದೆ. ಆದ್ದರಿಂದ, ರಾಜ್ಯ ಸರ್ಕಾರವು ಸರ್ಕಾರಿ ಕಚೇರಿಗಳ ಪ್ರವರ್ಗಕ್ಕೆ ಮತ್ತು ಸೈನಿಕ ಮಂಡಳಿಗೆ ಉದ್ಧೃತಗಳನ್ನು ನೀಡುವುದಕ್ಕೆ ಶುಲ್ಕ ಸಂದಾಯ ಮಾಡುವ ಬಗ್ಗೆ ಯಾವುದೇ ರಿಯಾಯಿತಿಗಳನ್ನು ನೀಡಲು ಬಯಸಿದರೆ, ರಾಜ್ಯ ನಿಯಮವನ್ನು ತಿದ್ದುಪಡಿ ಮಾಡುವುದಕ್ಕಾಗಿ ಅಧಿನಿಯಮದ 30(1)ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಒಂದು ಪ್ರಸ್ತಾವನೆಯನ್ನು ಸಲ್ಲಿಸಬಹುದು.

87. ಪ್ರಶ್ನೆ : ನಿಯಮಗಳ ಮೇರೆಗೆ ಶುಲ್ಕವನ್ನು ಎರಡು ಉದ್ದೇಶಗಳಿಗಾಗಿ ಎಂದರೆ ಶೋಧನೆಗೆ ಮತ್ತು ಉದ್ಧೃತಗಳಿಗೆ ಎಂಬುದಾಗಿ ಪ್ರತ್ಯೇಕವಾಗಿ ಗೊತ್ತುಪಡಿಸಲಾಗಿದೆ. ಅಧಿನಿಯಮದ 17ನೇ ಪ್ರಕರಣವು ಜನನ ಮತ್ತು ಮರಣಗಳ ರಿಜಿಸ್ಟರಿನಲ್ಲಿ ಯಾವುದೇ ನಮೂದಿನ ಶೋಧನೆ ಮಾಡುವಂತೆ ಕೋರಲು ಯಾರೇ ವ್ಯಕ್ತಿಯನ್ನು ಅಧಿಕೃತಗೊಳಿಸುತ್ತದೆ. ಸಂಬಂಧಪಟ್ಟ ವ್ಯಕ್ತಿಯು, ಸದರಿ ನಮೂದಿನ ಬಗ್ಗೆ ಎಂದರೆ ತಾನು ಜನನ/ಮರಣದ ದಿನಾಂಕ, ತಿಂಗಳು ಮತ್ತು ವರ್ಷದ ಬಗ್ಗೆ ಯಾವುದೇ ವಿವರಗಳನ್ನು ಹೊಂದಿಲ್ಲದಿರುವಾಗ ಇದು ಅವಶ್ಯವಾಗಿರುತ್ತದೆ. ಈ ವಿವರಗಳು ಆತನಲ್ಲಿ ಲಭ್ಯವಿದ್ದರೆ ಅದರ ಶೋಧನೆ ಮಾಡಿಸುವ ಅವಶ್ಯಕತೆಯಿರುವುದಿಲ್ಲ ಮತ್ತು ಮರಣದ ವಿವರಗಳನ್ನು ನೀಡಿ ನಮೂದಿನ ಉದ್ಧೃತವನ್ನು ಅವನು ಕೇಳಬಹುದು. ಹೀಗೆ ವ್ಯಕ್ತಿಯು ಜನನ ಮತ್ತು ಮರಣದ ವಿವರಗಳನ್ನು ನೀಡಿ, ಉದ್ಧೃತವನ್ನು ಕೇಳಿದಾಗ, ಶೋಧನೆ ಮಾಡುವ ಅವಶ್ಯಕತೆಯಿರುವುದಿಲ್ಲ ಮತ್ತು ಶೋಧನಾ ಶುಲ್ಕವನ್ನು ವಿಧಿಸಬೇಕಿಲ್ಲ. ಹಾಗಾಗಿ ಉದ್ಧೃತ ಶುಲ್ಕವನ್ನು ಮಾತ್ರ ಅವನಿಗೆ ವಿಧಿಸಬಹುದೇ? ದಯವಿಟ್ಟು ಸ್ಪಷ್ಟೀಕರಣ ನೀಡಿ.

ಸ್ಪಷ್ಟೀಕರಣ : ವ್ಯಕ್ತಿಯು ಜನನ ಅಥವಾ ಮರಣದ ನೋಂದಣಿಯ ದಿನಾಂಕದ ವಿವರಗಳನ್ನು ನೀಡಿ (ಘಟನೆ ನಡೆದ ದಿನಾಂಕದಿಂದ ಬೇರೆಯಾದ) ಮತ್ತು ಉದ್ಧೃತವನ್ನು ಕೇಳಿದರೆ, ಅವನು ಶೋಧನೆ ಮಾಡುವುದಕ್ಕೆ ಕಾರಣನಾಗುವುದಿಲ್ಲ. ನಿಯಮಗಳಲ್ಲಿ ಎರಡು ಬಾಬ್ತುಗಳನ್ನು ಪ್ರತ್ಯೇಕವಾಗಿ ಗೊತ್ತುಪಡಿರುವುದರಿಂದ ಇಂಥ ಸಂದರ್ಭಗಳಲ್ಲಿ ಶೋಧನಾ ಶುಲ್ಕವನ್ನು ವಿಧಿಸುವಂತಿಲ್ಲ ಮತ್ತು ಉದ್ಧೃತ ಶುಲ್ಕವನ್ನು ಅವನಿಗೆ ವಿಧಿಸಬಹುದು.

88. ಪ್ರಶ್ನೆ : ಒಬ್ಬ ವ್ಯಕ್ತಿಯು ಶೋಧನೆಗೆ ಮಾತ್ರ ಅರ್ಜಿ ಸಲ್ಲಿಸಬಹುದೇ ಅಥವಾ ಒಂದೇ ಸಮಯದಲ್ಲಿ ಶೋಧನೆಗೆ ಹಾಗು ಉದ್ಧೃತಕ್ಕಾಗಿ ಅರ್ಜಿಸಲ್ಲಿಸಬೇಕೇ?

ಸ್ಪಷ್ಟೀಕರಣ : ಅಧಿನಿಯಮದ 17ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಮಾಡಿದ ನಿಯಮಗಳ ಮೇರೆಗೆ ಘಟನೆಯ ಶೋಧನೆಯನ್ನು ಮಾಡಿಸುವದಕ್ಕೆ ಮತ್ತು ಜನಸಂಖ್ಯೆ ಅಥವಾ ಮರಣಕ್ಕೆ ಸಂಬಂಧಿಸಿದ ರಿಜಿಸ್ಟರಿನಿಂದ ಉದ್ಧೃತಗಳನ್ನು ನೀಡುವುದಕ್ಕೆ ಶುಲ್ಕದೊಂದಿಗೆ ಪ್ರತ್ಯೇಕ ಉಪಬಂಧಗಳು ಅಸ್ತಿತ್ವದಲ್ಲಿವೆ. ಈ ಕಾರಣದಿಂದಾಗಿ ಒಬ್ಬ ವ್ಯಕ್ತಿಗೆ ರಿಜಿಸ್ಟರಿನಲ್ಲಿನ ಯಾವುದೇ ನಮೂದಿನ ಶೋಧನೆಯನ್ನು ಮಾತ್ರ ಮಾಡಿಸುವುದಕ್ಕೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತದೆ. ಅವನು ಶೋಧನೆ ಮತ್ತು ಉದ್ಧೃತವನ್ನು ಪಡೆಯಲು, ಎರಡನ್ನೂ ಸೇರಿಸಿಯೇ ಅರ್ಜಿ ಸಲ್ಲಿಸಬೇಕಿಲ್ಲ. ಅವನಿಗೆ ರಿಜಿಸ್ಟರಿನಲ್ಲಿ ಅಸ್ತಿತ್ವದಲ್ಲಿರುವ ಘಟನೆಯ ಬಗ್ಗೆ ಮಾಹಿತಿ ನೀಡಬಹುದು.

89. ಪ್ರಶ್ನೆ : ಜನನ, ಮರಣಗಳ ನೋಂದಣಿ ಅಧಿನಿಯಮ, 1969ರ 17ನೇ ಪ್ರಕರಣ ಮತ್ತು ಅದರ ಮೇರೆಗೆ ಮಾಡಿದ ಸುಸಂಬದ್ಧ ರಾಜ್ಯ ನಿಯಮಗಳು ಜನನ ಮತ್ತು ಮರಣ ರಿಜಿಸ್ಟರುಗಳ ಶೋಧನೆಗೆ ಮತ್ತು ಅಂಥ ಶೋಧನೆಗೆ ಮತ್ತು ರಿಜಿಸ್ಟರಿನಿಂದ ಉದ್ಧೃತ ಪಡೆಯಲು ಸಂದಾಯವಾಗಬೇಕಾದ ಶುಲ್ಕವನ್ನು ಉಪಬಂಧಿಸುತ್ತದೆ. ರಾಜ್ಯಸರ್ಕಾರಿ ಇಲಾಖೆಗಳು ಅಧಿನಿಯಮದ 17ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಿದ ಶೋಧನಾ ಶುಲ್ಕವನ್ನು ಸಂದಾಯ ಮಾಡದೆ ಸರ್ಕಾರಿ ಉದ್ದೇಶಗಳಿಗಾಗಿ ರಿಜಿಸ್ಟರುಗಳಿಂದ ವಿವರಗಳನ್ನು ಪಡೆಯಬಹುದೇ?

ಪೊಲೀಸ್ ಪ್ರಾಧಿಕಾರವು, ಜನನ ಮತ್ತು ಮರಣಗಳ ರಿಜಿಸ್ಟರನ್ನು ವಶಪಡಿಸಿಕೊಳ್ಳುವ ಅಧಿಕಾರವನ್ನು ಹೊಂದಿದೆ ಅಥವಾ ಕಾನೂನು ನ್ಯಾಯಾಲಯವು ಅದನ್ನು ತರಿಸಿಕೊಳ್ಳಬಹುದು. ಈ ಎರಡೂ ಸಂದರ್ಭಗಳಲ್ಲಿ ನೋಂದಣಿ

ಕಾರ್ಯಕ್ಕೆ ಅಡ್ಡಿಯುಂಟಾಗುತ್ತದೆ ಎಂಬುದನ್ನು ಗಮನಕ್ಕೆ ತರಲಾಗಿದೆ. ಅಲ್ಲದೆ ರಿಜಿಸ್ಟ್ರಾರನ ಶಾಸನಬದ್ಧ ಜವಾಬ್ದಾರಿಯನ್ನು ಉಲ್ಲಂಘಿಸಿದಂತಾಗುತ್ತದೆ ಇಂಥ ಸಂದರ್ಭಗಳಲ್ಲಿ ಏನು ಮಾಡಬಹುದು?

ಸ್ಪಷ್ಟೀಕರಣ : ಜನನ ಅಥವಾ ಮರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಇಲಾಖೆಯು ಕೆಲವು ಮಾಹಿತಿಯನ್ನು ಬಯಸಿದಾಗ, ಈ ವಿಷಯದಲ್ಲಿ ತುಂಬಾ ಕಾನೂನುಬದ್ಧವಾಗಿರುವುದು ಸಮಂಜಸವಲ್ಲ, ಇಲಾಖೆಗೆ ಅನೌಪಚಾರಿಕವಾಗಿ ಅಂಥ ಮಾಹಿತಿಯನ್ನು ಒದಗಿಸುವುದರಲ್ಲಿ ಯಾವುದೇ ಕಾನೂನು ತೊಡಕಿರುವುದಿಲ್ಲ. ಆದಾಗ್ಯೂ, 17ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಮೂದಿಸಿದ ಉದ್ದೇಶಕ್ಕಾಗಿ ಮಾಹಿತಿಯನ್ನು ಬಯಸಿದರೆ, ರಿಜಿಸ್ಟ್ರಾರನು ಅಥವಾ ಅಧಿಕೃತಗೊಂಡ ವ್ಯಕ್ತಿಯು ಕ್ರಮಬದ್ಧವಾಗಿ ಪ್ರಮಾಣೀಕರಿಸಿದ ಉದ್ಧೃತಗಳನ್ನು ನೀಡಲು ಗೊತ್ತುಪಡಿಸಿದ ಶುಲ್ಕವನ್ನು ಇಲಾಖೆಗೆ ವಿಧಿಸುವುದು ಅವಶ್ಯಕವಾಗಿದೆ. (87ನೇ ಸ್ಪಷ್ಟೀಕರಣವನ್ನು ಸಹ ದಯವಿಟ್ಟು ಗಮನಿಸಿ).

ರಿಜಿಸ್ಟ್ರಾರನಿಂದ ನಿರ್ವಹಿಸಲ್ಪಡುವ ಜನನ ಮತ್ತು ಮರಣಗಳ ನಮೂದುಗಳನ್ನು ಒಳಗೊಂಡಿರುವ ರಿಜಿಸ್ಟರನ್ನು ಪೊಲೀಸ್ ವಶಪಡಿಸಿಕೊಳ್ಳುವುದನ್ನು ಅಥವಾ ಕಾನೂನು ನ್ಯಾಯಾಲಯದ ಕಡ್ಡಾಯ ಕೋರಿಕೆಯನ್ನು ತಡೆಯುವುದು ಸಾಧ್ಯವಿಲ್ಲ. ಆದಾಗ್ಯೂ, ಇಂಥ ಪ್ರಕರಣಗಳು ತುಂಬಾ ಕಡಿಮೆಯಿರುತ್ತವೆ ಮತ್ತು ಸುಳ್ಳು ಪತ್ರ ಸೃಷ್ಟನೆ ಮುಂತಾದ ಅನುಮಾನಾಸ್ಪದ ಸಂದರ್ಭದಲ್ಲಿ ಮಾತ್ರ ಉದ್ಭವವಾಗಬಹುದು. ದಾಖಲೆಗಳನ್ನು ವಯಸ್ಸು ಅಥವಾ ವ್ಯಕ್ತಿಯ ಮರಣವನ್ನು ರುಜುವಾತುಪಡಿಸುವ ಉದ್ದೇಶಕ್ಕೆ ವಶಪಡಿಸಿಕೊಳ್ಳುವ ಅವಶ್ಯಕತೆ ಉಂಟಾಗುವುದಿಲ್ಲ. ಪೊಲೀಸರಿಗೆ ಪ್ರಮಾಣೀಕೃತ ಪ್ರತಿಗಳನ್ನು ನೀಡುವುದರಿಂದ ಇಂಥ ಉದ್ದೇಶವನ್ನು ಸಾಧಿಸಬಹುದು. ಅದೇ ರೀತಿಯಲ್ಲಿ, ರಿಜಿಸ್ಟ್ರಾರನ ಕಚೇರಿಯಿಂದ ಅಧಿಕೃತಗೊಂಡ ವ್ಯಕ್ತಿಯು ನ್ಯಾಯಾಲಯದಲ್ಲಿ ರಿಜಿಸ್ಟರನ್ನು ಹಾಜರುಪಡಿಸುವ ಮೂಲಕ ಸಾಕ್ಷ್ಯವನ್ನು ನೀಡಬಹುದು. ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969, ರಿಜಿಸ್ಟ್ರಾರನು ನಿರ್ವಹಿಸಿಕೊಂಡು ಬರುವ ರಿಜಿಸ್ಟರುಗಳನ್ನು ವಶಪಡಿಸಿಕೊಳ್ಳುವಿಕೆ ಇತ್ಯಾದಿಯಿಂದ ಯಾವುದೇ ವಿನಾಯಿತಿಯನ್ನು ನೀಡಿಲ್ಲ. ಜೊತೆಗೆ ಅಧಿನಿಯಮದಲ್ಲಿ ಅಂಥ ಉಪಬಂಧವನ್ನು ಹೊಂದಿರುವ ಅವಶ್ಯಕತೆಯೂ ಇಲ್ಲ. ಅಂಥ ವಶಪಡಿಸಿಕೊಳ್ಳುವಿಕೆ ಅಥವಾ ದಾಖಲೆಗಳ ಕಡ್ಡಾಯ ಕೋರಿಕೆಯಿಂದ ನೋಂದಣಿ ಕಾರ್ಯಕ್ಕೆ ಅಡ್ಡಿಯುಂಟಾಗುತ್ತದೆ ಅಥವಾ ರಿಜಿಸ್ಟ್ರಾರನ ಶಾಸನಬದ್ಧ ಹೊಣೆಗಾರಿಕೆಗೆ ಬಾಧಕವಾಗುತ್ತದೆ ಎಂದು ಪರಿಗಣಿಸಬೇಕಾಗಿಲ್ಲ.

**90. ಪ್ರಶ್ನೆ** : ಈ ಅಧಿನಿಯಮದ 15ನೇ ಪ್ರಕರಣದಲ್ಲಿ ಮತ್ತು ರಾಜ್ಯ ನಿಯಮಗಳಲ್ಲಿ ಹೇಳಲಾದ ಪ್ರಕ್ರಿಯೆಗನುಸಾರವಾಗಿ, 17ನೇ ಪ್ರಕರಣದ ಮೇರೆಗೆ ಜನನ ಮತ್ತು ಮರಣಗಳ ರಿಜಿಸ್ಟರಿನಿಂದ ನೀಡಲಾಗುವ ಉದ್ಧೃತಗಳು ಮೂಲ ಹಾಗೂ ತಪ್ಪುಗಳನ್ನು ಸರಿಪಡಿಸಿದ ನಮೂದುಗಳೆರಡನ್ನೂ ಒಳಗೊಂಡಿರುತ್ತದೆ. ಆದರೆ, 17ನೇ ಪ್ರಕರಣದ ಮೇರೆಗೆ ಉದ್ಧೃತಗಳನ್ನು ಕೋರುವ ಸಾರ್ವಜನಿಕರು ತಪ್ಪುಗಳನ್ನು ಸರಿಪಡಿಸಿದ ನಮೂದುಗಳ ಮಟ್ಟಿಗೆ ಮಾತ್ರ ಆಸಕ್ತಿ ತೋರುವ ಸಂದರ್ಭಗಳು ಇವೆ. ಇಂತಹ ಪ್ರಕರಣಗಳಲ್ಲಿ ಸಾರ್ವಜನಿಕರು ಒತ್ತಾಯಿಸಿದಂತೆ, ಸರಿಪಡಿಸಿದ ನಮೂದುಗಳ ಉದ್ಧೃತಗಳನ್ನು ಮಾತ್ರ ನೀಡಬಹುದೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಸ್ಪಷ್ಟೀಕರಣ : ಅಧಿನಿಯಮದ 17ನೇ ಪ್ರಕರಣವು ಜನನ ಮತ್ತು ಮರಣಗಳ ರಿಜಿಸ್ಟರಿನಿಂದ ಉದ್ಧೃತಗಳನ್ನು ಒದಗಿಸುವ ಬಗ್ಗೆ ತಿಳಿಸುತ್ತದೆ. 'ಉದ್ಧೃತ' ಎಂಬ ಪದಕ್ಕೆ "............................ಗೆ ಸಂಬಂಧಿಸಿದಂತೆ ಸತ್ಯತೆಯನ್ನು ಮತ್ತು ನಿಖರತೆಯನ್ನು ಸ್ಥಿರೀಕರಿಸುವುದು ಎಂಬ ಸಾಮಾನ್ಯ ಅರ್ಥವಿದೆ. ಹೀಗಿರುವಲ್ಲಿ, ಮೂಲ ನಮೂದು ಮತ್ತು

ಸರಿಪಡಿಸಿದ ದಿನಾಂಕದೊಂದಿಗೆ ಸರಿಪಡಿಸಿದ ನಮೂದನ್ನು ಸರಿಪಡಿಸಿದ ನಮೂದುಗಳ ಉದ್ಧೃತಗಳಲ್ಲಿ ತೋರಿಸಬೇಕಾಗುತ್ತದೆ. ಪ್ರಸ್ತುತ ಈ ಪದ್ಧತಿಯನ್ನು ಅನುಸರಿಸಲಾಗುತ್ತಿದ್ದು ಅದನ್ನೇ ಮುಂದುವರಿಸಬಹುದಾಗಿದೆ.

## ಪ್ರಕರಣ 18 :

**91. ಪ್ರಶ್ನೆ :** ಜಿಲ್ಲಾ ರಿಜಿಸ್ಟ್ರಾರರು ನಿರ್ದಿಷ್ಟಪಡಿಸಬಹುದಾದ ಅಧಿಕಾರಿಯು ನೋಂದಣಿ ಕಚೇರಿಗಳನ್ನು ಪರಿವೀಕ್ಷಿಸತಕ್ಕದ್ದೆಂದು ಪ್ರಕರಣ 18ರಲ್ಲಿ ಉಪಬಂಧ ಕಲ್ಪಿಸಿದೆ. ನೋಂದಣಿ ಅಧಿಕಾರ ಶ್ರೇಣಿಯಲ್ಲಿ ಜಿಲ್ಲಾ ರಿಜಿಸ್ಟ್ರಾರರಿಗಿಂತ ಮೇಲಿನ ಅಧಿಕಾರಿಯನ್ನು ಈ 18ನೇ ಪ್ರಕರಣದ ಉದ್ದೇಶಗಳಿಗಾಗಿ ಜಿಲ್ಲಾ ರಿಜಿಸ್ಟ್ರಾರರು ನಿರ್ದಿಷ್ಟಪಡಿಸಬಹುದೇ?

**ಸ್ಪಷ್ಟೀಕರಣ :** ಜಿಲ್ಲಾ ರಿಜಿಸ್ಟ್ರಾರರು, ಜನನ ಮರಣಗಳ ನೋಂದಣಿ ಅಧಿನಿಯಮ, 1969ರ 18ನೇ ಪ್ರಕರಣದ ಮೇರೆಗೆ ಪರಿವೀಕ್ಷಣೆಯ ಉದ್ದೇಶಗಳಿಗಾಗಿ ಅಧಿಕಾರಿಗಳನ್ನು ನಿರ್ದಿಷ್ಟಪಡಿಸಬಹುದು. ಬಹುಶಃ ಯಾರೇ ಅಂಥ ಅಧಿಕಾರಿಯು ತನ್ನ ಪರಿವೀಕ್ಷಣಾ ವರದಿಯನ್ನು ಜಿಲ್ಲಾ ರಿಜಿಸ್ಟ್ರಾರರಿಗೆ ಕಳುಹಿಸಬೇಕಾಗುತ್ತದೆ. ಸ್ವಾಭಾವಿಕವಾಗಿಯೇ, ಯಾರೇ ಅಂಥ ಅಧಿಕಾರಿಯು, ಜಿಲ್ಲಾ ರಿಜಿಸ್ಟ್ರಾರರ ಅಧಿಕಾರ ವ್ಯಾಪ್ತಿ ಅಥವಾ ನಿಯಂತ್ರಣದಲ್ಲಿ ಬರುವ ಅಧಿಕಾರಿಯೇ ಆಗಿರುತ್ತಾರೆ. ಅವರು ಜಿಲ್ಲಾ ರಿಜಿಸ್ಟ್ರಾರರ ದರ್ಜೆಗಿಂತ ಉನ್ನತಾಧಿಕಾರಿಯಾಗಿರತಕ್ಕದ್ದಲ್ಲ.

**92. ಪ್ರಶ್ನೆ :** ಜನನ ಮರಣಗಳ ನೋಂದಣಿ ಅಧಿನಿಯಮ, 1969ರ ಪ್ರಕರಣ 19(1) ಮತ್ತು ನಿಯಮ 15, ಉಪನಿಯಮಗಳು (1), (2) ಮತ್ತು (3)ರ ಮೇರೆಗೆ ರಿಜಿಸ್ಟ್ರಾರರು ಜನನ ಮತ್ತು ಮರಣಗಳ ರಿಜಿಸ್ಟರಿನ ಮೂರು ಪ್ರತಿಗಳನ್ನು ತಯಾರಿಸುತ್ತಾರೆ. ಇದರ ಒಂದು ಪ್ರತಿಯನ್ನು ಬಿಹಾರದ ಮುಖ್ಯ ರಿಜಿಸ್ಟ್ರಾರರಿಗೆ ಕಳುಹಿಸಲಾಗುವುದು; ಇನ್ನೊಂದು ಪ್ರತಿಯನ್ನು ಜಿಲ್ಲಾ ರಿಜಿಸ್ಟ್ರಾರರಿಗೆ ಕಳುಹಿಸಿ ಮೂರನೇ ಪ್ರತಿಯನ್ನು ರಿಜಿಸ್ಟ್ರಾರರೇ ಕಚೇರಿ ಪ್ರತಿಯನ್ನಾಗಿ ಇಟ್ಟುಕೊಳ್ಳುತ್ತಾರೆ. ಸಾಂಖ್ಯಿಕ ಸಿಬ್ಬಂದಿಯನ್ನು ನಿಯೋಜಿಸಿರುವಂತಹ ನಗರ ಪ್ರದೇಶಗಳಲ್ಲಿರುವ ಕಾರ್ಪೊರೇಷನ್‌ಗಳು/ ಮುನಿಸಿಪಾಲಿಟಿಗಳು ಮತ್ತು ಅಧಿಸೂಚಿತ ಪ್ರದೇಶ ಸಮಿತಿಗಳು ಜನನ ಮತ್ತು ಮರಣಗಳ ನೋಂದಣಿಯನ್ನು 7, 8 ಮತ್ತು 9ನೇ ನಮೂನೆಗಳಲ್ಲಿ ತ್ರಿಪ್ರತಿಯಲ್ಲಿ ತಯಾರಿಸಬೇಕಾಗುತ್ತದೆಯೇ ಎಂಬುದನ್ನು ದಯವಿಟ್ಟು ಸ್ಪಷ್ಟೀಕರಿಸಿ.

**ಸ್ಪಷ್ಟೀಕರಣ :** 30,000ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವಂತಹ ಮುನಿಸಿಪಾಲಿಟಿಯ ರಿಜಿಸ್ಟ್ರಾರನು ಒಳಗೊಂಡಂತೆ ಪ್ರತಿಯೊಬ್ಬ ರಿಜಿಸ್ಟ್ರಾರನು ಜನನ ಮರಣಗಳ ಶಾಸನಬದ್ಧ ರಿಜಿಸ್ಟರಿನ ಒಂದು ಪ್ರತಿಯನ್ನು ಮಾತ್ರ ತಯಾರಿಸಬಹುದಾಗಿರುತ್ತದೆ. ಬಿಹಾರ ಜನನ ಮತ್ತು ಮರಣಗಳ ನೋಂದಣಿ ನಿಯಮಗಳು, 1970ರ ನಿಯಮ 15(1)ರಲ್ಲಿ ಗೊತ್ತುಪಡಿಸಲಾಗಿರುವಂತೆ, ಈ ಪ್ರತಿಯನ್ನು, ಮುಖ್ಯ ರಿಜಿಸ್ಟ್ರಾರರಿಗೆ ಅವರು ನಿರ್ದಿಷ್ಟಪಡಿಸಿದ ಅಧಿಕಾರಿಯ ಮೂಲಕ ಕಳುಹಿಸಬೇಕು. 30,000 ಮತ್ತು ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಮುನಿಸಿಪಾಲಿಟಿಗಳ ರಿಜಿಸ್ಟ್ರಾರ್‌ಗಳು, ಬಿಹಾರ ಜನನ ಮತ್ತು ಮರಣಗಳ ನಿಯಮಗಳು, 1970ರ ನಿಯಮ 15ರ ಉಪನಿಯಮ (4)ರ ಮೇರೆಗೆ ಸಂಕಲಿತ ವಿವರಣ ಪಟ್ಟಿಯನ್ನು ಮಾತ್ರ ಮುಖ್ಯ ರಿಜಿಸ್ಟ್ರಾರರಿಗೆ ಕಳುಹಿಸಲು ಅಗತ್ಯಪಡಿಸಿರುವುದರಿಂದ ಅವರು ಈ ಶಾಸನಬದ್ಧ ರಿಜಿಸ್ಟರಿನ ಎರಡು ಅಥವಾ ಮೂರು ಪ್ರತಿಗಳನ್ನು ತಯಾರಿಸುವ ಅಗತ್ಯವಿರುವುದಿಲ್ಲ. ಆದಾಗ್ಯೂ, ದೊಡ್ಡ ಪ್ರಮಾಣದ ಮುನಿಸಿಪಾಲಿಟಿ/ಕಾರ್ಪೊರೇಷನ್‌ಗಳು, ಸ್ಥಳೀಯ ಸಂಸ್ಥೆಯ ಸಂಪೂರ್ಣ ಅಧಿಕಾರ ಕ್ಷೇತ್ರದ ಮಾಹಿತಿಯನ್ನು ಸಂಕಲಿಸುವ ಉದ್ದೇಶದಿಂದ ಮುನಿಸಿಪಾಲಿಟಿ/

ಕಾರ್ಪೋರೇಷನ್ ರಿಜಿಸ್ಟ್ರಾರರಿಗೆ ಕಳುಹಿಸುವುದಕ್ಕಾಗಿ ಮುನಿಸಿಪಾಲಿಟಿ/ಕಾರ್ಪೋರೇಷನ್ನಿನ ಉಪಕ್ಷೇತ್ರದ ಸಬ್‌ರಿಜಿಸ್ಟ್ರಾರುಗಳಿಗೆ ಒಂದು ಪ್ರತಿಯನ್ನು, ತಯಾರಿಸುವಂತೆ ತಿಳಿಸಬಹುದು.

**ಪ್ರಕರಣ 19 :**

**93. ಪ್ರಶ್ನೆ** : ಪ್ರತಿಯೊಂದು ನೋಂದಣಿ ಘಟಕದ ಜನನ ಮತ್ತು ಮರಣಗಳ ರಿಜಿಸ್ಟ್ರಾರ್‌ಗಳು, ಜನನ ಮತ್ತು ಮರಣಗಳ ಮಾಸಿಕ ಉದ್ಧೃತಗಳನ್ನು ರಾಜ್ಯ ನಿರ್ದೇಶನಾಲಯಕ್ಕೆ ಪ್ರತಿ ತಿಂಗಳೂ ಕಳುಹಿಸುತ್ತಾರೆ. ಈ ಉದ್ಧೃತಗಳನ್ನು ಸಾಂಖ್ಯಿಕ ಮಾಹಿತಿಯ ಸಂಕಲನಕ್ಕಾಗಿ ಉಪಯೋಗಿಸಿಕೊಳ್ಳಲಾಗುವುದು ಮತ್ತು ಒಂದು ವರ್ಷದವರೆಗೆ ಸಂರಕ್ಷಿಸಿಡಲಾಗುವುದು. ಸಾಂಖ್ಯಿಕ ಕಾರ್ಯ ಮುಗಿದ ತರುವಾಯ ಈ ಉದ್ಧೃತಗಳನ್ನು ನಾಶಪಡಿಸಲಾಗುವುದು. ತಾಲ್ಲೂಕು ಅಥವಾ ಘಟಕ ಮಟ್ಟದಿಂದ ಕೋರಿಕೆ ಬಂದಾಗ, ಇತರೆ ಕಾನೂನು ಉದ್ದೇಶಗಳಿಗಾಗಿ ಈ ಉದ್ಧೃತಗಳ ಅಥವಾ ಯಾವುದೇ ಸುಸಂಬದ್ಧ ಮಾಹಿತಿಯ ಪ್ರತಿಗಳನ್ನು ಈ ನಿರ್ದೇಶನಾಲಯವು ಕೊಡಬಹುದೇ?

**ಸ್ಪಷ್ಟೀಕರಣ** : ರಿಜಿಸ್ಟ್ರಾರ್‌ರಿಂದ ಪ್ರತಿ ತಿಂಗಳೂ ಈ ನಿರ್ದೇಶನಾಲಯ ಸ್ವೀಕರಿಸುವ ಜನನ ಮತ್ತು ಮರಣಗಳ ಉದ್ಧೃತಗಳು ಮೂಲ ದಾಖಲೆಗಳ ಪ್ರಮಾಣೀಕೃತ ಪ್ರತಿಗಳು ಆಗಿಲ್ಲದಿರುವುದರಿಂದ, ಇವುಗಳಿಗೆ ಕಾನೂನಿನ ಮಾನ್ಯತೆ ಇರುವುದಿಲ್ಲ. ಸಂಕಲನ ಕಾರ್ಯಕ್ಕೆ ಮಾತ್ರ ಇವುಗಳನ್ನು ಉಪಯೋಗಿಸಿಕೊಳ್ಳಲಾಗುವುದು. ಈ ಸಂಬಂಧವಾಗಿ ಬರುವ ಯಾವುದೇ ಕೋರಿಕೆ ಅಥವಾ ಸಂದೇಹಗಳನ್ನು, ಮೂಲ ದಾಖಲೆಗಳನ್ನು ಇಟ್ಟುಕೊಂಡಿರುವ ಅಧಿಕಾರಿಗೆ ಅಥವಾ ಅಂಥ ಉದ್ಧೃತಗಳನ್ನು ನೀಡಲು ಅಧಿಕಾರ ಹೊಂದಿರುವ ಅಧಿಕಾರಿಗೆ ಕಳುಹಿಸುವಂತೆ ತಿಳಿಸಬಹುದು.

**94. ಪ್ರಶ್ನೆ** : ರಾಜ್ಯ ನಿಯಮಗಳ ಮೇರೆಗೆ ಸ್ವೀಕರಿಸಿದ ಮಾಸಿಕ ವಿವರಪಟ್ಟಿಗಳನ್ನು, ಅವುಗಳನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ವರ್ಷಗಳ ತರುವಾಯ ಅಥವಾ ಸಂಬಂಧಪಟ್ಟ ರಾಜ್ಯದ ವಾರ್ಷಿಕ ಜನನ ಮರಣ ಅಂಕಿ ಅಂಶಗಳ ವರದಿಯಲ್ಲಿ ಅಂಥ ವಿವರಪಟ್ಟಿಗಳ ಮಾಹಿತಿಯು ಪ್ರಕಟಗೊಂಡ ತರುವಾಯ ನಾಶಪಡಿಸಬಹುದೇ?

**ಸ್ಪಷ್ಟೀಕರಣ** : ಅಂತಹ ಮಾಸಿಕ ಸಾಂಖ್ಯಿಕ ವಿವರಪಟ್ಟಿಗಳನ್ನು ಉಪಯೋಗಿಸಿಕೊಂಡ ಮೂರು ವರ್ಷಗಳ ತರುವಾಯ ಅವುಗಳನ್ನು ನಾಶಪಡಿಸುವುದರಲ್ಲಿ ಯಾವುದೇ ಆಕ್ಷೇಪಣೆ ಇರುವುದಿಲ್ಲ. ಮಾಹಿತಿಯನ್ನು ತಖ್ತೀಕರಣಗೊಳಿಸಿದ ತರುವಾಯ, ಈ ಮಾಸಿಕ ಸಾಂಖ್ಯಿಕ ವಿವರಪಟ್ಟಿಕೆಗಳಿಗೆ ಹೆಚ್ಚಿನ ಮಹತ್ವ ಇಲ್ಲದಿರುವ ಕಾರಣ, ಆಯಾ ರಾಜ್ಯಗಳು, ಈ ವಿವರಪಟ್ಟಿಗಳು ಉಪಯುಕ್ತತೆ ಕಳೆದುಕೊಂಡಿವೆಯೆಂದು ಮನಗೊಂಡಾಗ ಅವುಗಳನ್ನು ನಾಶಪಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು.

**95. ಪ್ರಶ್ನೆ** : ಜನನ ಮತ್ತು ಮರಣಗಳ ಮಾಸಿಕ ವರದಿಗಳ ಪ್ರತಿಗಳನ್ನು ಎಷ್ಟು ಕಾಲ ಸಂರಕ್ಷಿಸಿಡಬೇಕು ಮತ್ತು ಅಂಥ ವರದಿಗಳನ್ನು ನಾಶಪಡಿಸಲು ಅನುಸರಿಸಬೇಕಾದ ಪ್ರಕ್ರಿಯೆ ಏನು?

**ಸ್ಪಷ್ಟೀಕರಣ** : ಈ ಮಾಸಿಕ ಸಾಂಖ್ಯಿಕ ವರದಿಗಳ ಮಾಹಿತಿಯನ್ನು ತಖ್ತೀಕರಣಗೊಳಿಸಿದ ತರುವಾಯ ಈ ವರದಿಗಳಿಗೆ ಹೆಚ್ಚಿನ ಮಹತ್ವವಿರುವುದಿಲ್ಲ. ಆದಕಾರಣ, ಸಂಬಂಧಪಟ್ಟ ರಾಜ್ಯಗಳಲ್ಲಿ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಬಗ್ಗೆ ಅನುಸರಿಸುತ್ತಿರುವ ಪ್ರಕ್ರಿಯೆಗನುಸಾರವಾಗಿ ವರದಿಗಳು ತಮ್ಮ ಉಪಯುಕ್ತತೆಯನ್ನು ಕಳೆದುಕೊಂಡಿವೆಯೆಂದು

ಮನಗಂಡಾಗ ಮುಖ್ಯ ರಿಜಿಸ್ಟ್ರಾರರು ಅವುಗಳನ್ನು ನಾಶಪಡಿಸಲು ಕ್ರಮ ತೆಗೆದುಕೊಳ್ಳಬಹುದು.

**ಪ್ರಕರಣ 20 :**

**96. ಪ್ರಶ್ನೆ** : ದಿನಾಂಕ: 1.1.1971ಕ್ಕೆ ಮೊದಲು ಭಾರತದ ಪ್ರಜೆಗಳಿಗೆ ವಿದೇಶದಲ್ಲಿ ಜನಿಸಿದ ಮಕ್ಕಳ ಜನನಗಳನ್ನು ಅಧಿನಿಯಮದ 20(1)ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಭಾರತೀಯ ರಾಯಭಾರಿ ಕಛೇರಿ (ಕಾನ್ಸುಲೇಟ್)ಯಲ್ಲಿ ನೋಂದಾಯಿಸಿರದಿದ್ದರೆ, ಈಗ ಈ ಅಧಿನಿಯಮದ 20(2)ನೇ ಪ್ರಕರಣದ ಮೇರೆಗೆ ನೋಂದಾಯಿಸಬಹುದೇ?

ಅಂಥ ಜನನಗಳನ್ನು ನೋಂದಾಯಿಸಬಹುದಾಗಿದ್ದರೆ, ಭಾರತಕ್ಕೆ ಆಗಮಿಸಿದ 60 ದಿನಗಳ ತರುವಾಯ ನೋಂದಣಿಯನ್ನು ಬಯಸಿದ ಪ್ರಕರಣಗಳಿಗೆ 13ನೇ ಪ್ರಕರಣ ಅನ್ವಯಿಸುವುದು ಮುಂದುವರಿಯುವುದೇ?

**ಸ್ಪಷ್ಟೀಕರಣ** : ಕೇಳಿರುವ ಎರಡೂ ಪ್ರಶ್ನೆಗಳಿಗೆ ಉತ್ತರ ಸಕಾರಾತ್ಮಕವಾಗಿದೆ.

**97. ಪ್ರಶ್ನೆ** : ಗೋವಾ, ದಾಮನ್ ಮತ್ತು ಡಿಯು ಇವುಗಳ ಏಕೀಕರಣಕ್ಕೆ ಮೊದಲು, ಗೋವಾ ಮೂಲದ ಹಲವಾರು ವ್ಯಕ್ತಿಗಳು ಆಫ್ರಿಕಾದಲ್ಲಿನ ಪೋರ್ಚುಗೀಸ್ ಕಾಲೋನಿಗಳಿಗೆ ಅಂದರೆ, ಮೊಜಾಂಬಿಕ್, ಅಂಗೋಲಾ, ಮೊಂಬಾಸಾ ಮುಂತಾದೆಡೆಗಳಿಗೆ ವಿವಿಧ ಉದ್ದೇಶಗಳಿಗಾಗಿ ವಲಸೆ ಹೋದರು. ಆಫ್ರಿಕಾದಲ್ಲಿನ ಪೋರ್ಚುಗೀಸ್ ಕಾಲೋನಿಗಳಲ್ಲಿ ನೆಲಸಿದ ಪರಿಣಾಮವಾಗಿ ಅವರು ಆ ದೇಶದ ಪೌರತ್ವವನ್ನು ಪಡೆದರು. ಈಗ ಅಂತಹ ಹಲವಾರು ವ್ಯಕ್ತಿಗಳು ಭಾರತದಲ್ಲಿ ಖಾಯಂ ಆಗಿ ನೆಲಸುವ ದೃಷ್ಟಿಯಿಂದ ಭಾರತಕ್ಕೆ ವಾಪಸಾಗುತ್ತಿದ್ದಾರೆ. ಇಲ್ಲಿಗೆ ಹಿಂತಿರುಗಿದ ನಂತರ, ಸಾಮಾನ್ಯವಾಗಿ ಭಾರತೀಯ ಪೌರತ್ವಕ್ಕೆ ಅರ್ಜಿ ಸಲ್ಲಿಸುತ್ತಾರೆ ಮತ್ತು ಅವರು ಭಾರತೀಯ ಪೌರತ್ವ ಪಡೆಯುವುದಕ್ಕೆ ಮೊದಲು ಅಥವಾ ತರುವಾಯ ತಮ್ಮ ಮಕ್ಕಳ ಜನನದ ಬಗ್ಗೆ ನೋಂದಣಿಗಾಗಿ ಕೋರಿಕೆ ಸಲ್ಲಿಸುತ್ತಾರೆ.

ಹಾಗೆ ಹಿಂತಿರುಗಿ ಬಂದಂತಹ ಎಲ್ಲ ಆಫ್ರಿಕನ್ ಮಕ್ಕಳ ಜನನವನ್ನು ಪೋರ್ಚುಗೀಸ್ ಕಾಲೋನಿಗಳಲ್ಲಿನ ಪ್ರಾಧಿಕಾರಗಳಲ್ಲಿ ನೋಂದಾಯಿಸಲಾಗಿರುತ್ತದೆ. ಅವರ ಮಕ್ಕಳ ರಾಷ್ಟ್ರೀಯತೆಯನ್ನು ಅವರು ಬದಲಾಯಿಸಿದ ತರುವಾಯ, ಅವರ ಮಕ್ಕಳ ಜನನದ ನೋಂದಣಿಯನ್ನು ಗೋವಾದಲ್ಲಿ ಮಾಡಬಹುದೇ ಎಂಬ ಬಗ್ಗೆ ಸ್ಪಷ್ಟೀಕರಣ ಬೇಕಾಗಿದೆ.

**ಸ್ಪಷ್ಟೀಕರಣ** : ವಿದೇಶದಲ್ಲಿ ಈಗಾಗಲೇ ಘಟಿಸಿರುವ ಜನನಗಳನ್ನು ಮತ್ತು ಭಾರತೀಯನಲ್ಲದ, ಆ ದೇಶದ ರಾಷ್ಟ್ರೀಯತೆಯೊಂದಿಗೆ ನೊಂದಾಯಿಸಲಾಗಿದ್ದರೆ, ಅಂಥ ಜನನಗಳನ್ನು 1969ನೇ ಅಧಿನಿಯಮದ 20(2)ನೇ ಪ್ರಕರಣದ ಮೇರೆಗೆ ಮರು ನೋಂದಣಿ ಮಾಡಲು ಸಾಧ್ಯವಿರುವುದಿಲ್ಲ. ಅಂಥ ಪ್ರಕರಣಗಳಲ್ಲಿ, ವಿದೇಶಿ ಸರ್ಕಾರಗಳು ನೀಡಿದ ಜನನ ಪ್ರಮಾಣಪತ್ರಗಳನ್ನು ನಮ್ಮ ದೇಶದಲ್ಲಿ ಎಲ್ಲ ಉದ್ದೇಶಗಳಿಗೂ ಮಾನ್ಯತೆ ಹೊಂದಿರುತ್ತವೆ.

**98. ಪ್ರಶ್ನೆ** : ಪ್ರಕರಣ 20(2)ರ ಪ್ರಕಾರ ಭಾರತದ ಹೊರಗೆ, ಭಾರತೀಯ ಪ್ರಜೆಗೆ ಜನಿಸಿದ ಮಗುವಿನ ಜನನವನ್ನು, ಭಾರತೀಯ ರಾಯಭಾರಿಯಲ್ಲಿ ನೋಂದಾಯಿಸದಿರುವಲ್ಲಿ, ಆ ಮಗುವಿನ ತಂದೆ ತಾಯಿಯರು ಭಾರತದಲ್ಲಿ ಖಾಯಂ ಆಗಿ ನೆಲಸಲು ಹಿಂತಿರುಗಿದಾಗ ಭಾರತದಲ್ಲಿ ನೋಂದಾಯಿಸಬಹುದೇ. ಆದಾಗ್ಯೂ, ಸಂಬಂಧಪಟ್ಟ

ಮಗುವಿನ ಜನನ ಕಾಲದಲ್ಲಿ ತಂದೆ ತಾಯಿಯರು ವಾಸಿಸುತ್ತಿದ್ದಂತಹ ವಿದೇಶಗಳ ನೋಂದಣಿ ಕಚೇರಿಗಳಲ್ಲಿ ಜನನವನ್ನು ನೋಂದಾಯಿಸಿಕೊಂಡಿರುವಂತಹ ಮತ್ತು ಪ್ರಕರಣ 20(1) ಮೇರೆಗೆ ಉಪಬಂಧಿಸಿರುವಂತೆ ಸದರಿ ದೇಶಗಳಲ್ಲಿರುವ ಭಾರತೀಯ ರಾಯಭಾರಿಗಳಲ್ಲಿ ನೋಂದಾಯಿಸಿಕೊಂಡಿರುವಂತಹ ಪ್ರಕರಣಗಳೂ ಇವೆ. ಅಂಥ ವಿದೇಶಿ ನೋಂದಣಿ ಪ್ರಾಧಿಕಾರಿಗಳು ನೀಡಿದ ಜನನ ಪ್ರಮಾಣಪತ್ರಗಳನ್ನೂ ಸಹ ತಂದೆ ತಾಯಿಯರು ಹಾಜರುಪಡಿಸುತ್ತಾರೆ. ಈ ಪ್ರಮಾಣ ಪತ್ರಗಳನ್ನು, ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ 17ನೇ ಪ್ರಕರಣದ (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಕಾನೂನುಸಮ್ಮತ ಪ್ರಮಾಣಪತ್ರಗಳೆಂದು ಪರಿಗಣಿಸಬಹುದೇ?

ಸ್ಪಷ್ಟೀಕರಣ : 20ನೇ ಪ್ರಕರಣವು ಭಾರತದ ಹೊರಗಡೆ ಭಾರತದ ನಾಗರೀಕರ ಜನನ ಮತ್ತು ಮರಣಗಳ ನೋಂದಣಿಯ ಬಗ್ಗೆ ವಿಶೇಷ ಉಪಬಂಧಗಳನ್ನು ಹೊಂದಿದೆ. ಭಾರತದ ಹೊರಗಡೆ, ಆದ ಭಾರತದ ನಾಗರೀಕರ ಜನನ ಮತ್ತು ಮರಣಗಳನ್ನು ಪೌರತ್ವ ಅಧಿನಿಯಮ, 1955ರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಭಾರತೀಯ ರಾಯಭಾರಿ ನೊಂದಾಯಿಸಬೇಕು ಮತ್ತು ಆ ನೊಂದಣಿಯನ್ನು ಈ ಅಧಿನಿಯಮದ ಮೇರೆಗೆ ಮಾಡಿದುದೆಂಬುದಾಗಿ ಭಾವಿಸತಕ್ಕದ್ದು ಮತ್ತು ಈ ನಿಯಮಗಳ ಮೇರೆಗೆ ಹಾಗೆ ಸ್ವೀಕರಿಸಿದ ಮಾಹಿತಿಯನ್ನು ರಿಜಿಸ್ಟ್ರಾರ್ ಜನರಲ್‌ರವರು (ಭಾರತದ ಮಹಾ ನೋಂದಾಣಾಧಿಕಾರಿಗಳು) ನೊಂದಾಯಿಸುವಂತೆ ಮಾಡತಕ್ಕದ್ದು ಎಂದು (1)ನೇ ಉಪಪ್ರಕರಣ ಉಪಬಂಧ ಕಲ್ಪಿಸುತ್ತದೆ. ಜನನ ಮತ್ತು ಮರಣಗಳನ್ನು ಹಾಗೆ ನೋಂದಣಿ ಮಾಡದೇ ಇದ್ದಲ್ಲಿ (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವಂತೆ ರಿಜಿಸ್ಟ್ರಾರ್ ಜನರಲ್‌ರವರು (ಭಾರತದ ಮಹಾ ನೋಂದಾಣಾಧಿಕಾರಿಗಳು) ಅಂಥ ಯಾವುದೇ ಮಾಹಿತಿಯನ್ನು ಸ್ವೀಕರಿಸದೇ ಇರಬಹುದು. ಆ ಉದ್ದೇಶಕ್ಕಾಗಿ (2)ನೇ ಉಪಪ್ರಕರಣದಲ್ಲಿ ಹೇಳಲಾದ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ. ಮಗುವಿನ ತಂದೆ ತಾಯಿಯರು ಭಾರತದಲ್ಲಿ ನೆಲೆಸುವ ದೃಷ್ಟಿಯಿಂದ ಭಾರತಕ್ಕೆ ಹಿಂತಿರುಗಿದಾಗ, ಅವರು ಭಾರತಕ್ಕೆ ಆ ಮಗುವು ಆಗಮಿಸಿದ ದಿನಾಂಕದಿಂದ 60 ದಿನಗಳೊಳಗೆ ಯಾವುದೇ ಸಮಯದಲ್ಲಿ, ಮಗುವು ಭಾರತದಲ್ಲೇ ಹುಟ್ಟಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಈ ಅಧಿನಿಯಮದ ಮೇರೆಗೆ ಮಗುವಿನ ಜನನವನ್ನು ನೋಂದಾಯಿಸಬಹುದು. ಮಗುವಿನ ಜನನ ಕಾಲದಲ್ಲಿ ತಂದೆ ತಾಯಿಯರು ವಾಸಿಸುತ್ತಿದ್ದ ವಿದೇಶದಲ್ಲಿರುವ ನೋಂದಣಿ ಕಚೇರಿಯಲ್ಲಿ ಮಾಡಲಾದ ಭಾರತದ ನಾಗರೀಕರ ಜನನದ ನೋಂದಣಿಯು, ಈ ಅಧಿನಿಯಮದ ಮೇರೆಗೆ ರಿಜಿಸ್ಟ್ರಾರ್ ಜನರಲ್ ಕಚೇರಿಯಲ್ಲಿ ತಂತಾನೆ ನೋಂದಣಿಯಾಗುವುದಿಲ್ಲ. ಏಕೆಂದರೆ, ಈ ರೀತಿಯ ಪ್ರಕ್ರಿಯೆಗೆ ಈ ಅಧಿನಿಯಮದಲ್ಲಿ ಉಪಬಂಧ ಕಲ್ಪಿಸಿಲ್ಲ. ಆದಾಗ್ಯೂ, ಈ ಅಧಿನಿಯಮದ 32ನೇ ಪ್ರಕರಣದ ಮೇರೆಗೆ, ಯಾವುದೇ ರಾಜ್ಯದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ತೊಂದರೆ ಉದ್ಭವಿಸಿದ ಸಂದರ್ಭದಲ್ಲಿ ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ, ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯ ಅಥವಾ ವಿಹಿತವೆಂದು ರಾಜ್ಯ ಸರ್ಕಾರಕ್ಕೆ ಕಂಡುಬರುವಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗವಲ್ಲದಂಥ ಉಪಬಂಧಗಳನ್ನು ಮಾಡಬಹುದು ಅಥವಾ ಅಂಥ ನಿರ್ದೇಶನಗಳನ್ನು ನೀಡಬಹುದು.

**99. ಪ್ರಶ್ನೆ** : ಸಶಸ್ತ್ರಬಲಗಳ ಸಿಬ್ಬಂದಿಯೊಬ್ಬರನ್ನು ಬಾಂಗ್ಲಾ ದೇಶದಲ್ಲಿ ನಿಯೋಜಿಸಿದ್ದಾಗ, ಆತನ ಪತ್ನಿಯು ಬಾಂಗ್ಲಾ

ದೇಶದಲ್ಲಿನ ಆಸ್ಪತ್ರೆಯಲ್ಲಿ ಒಂದು ಮಗುವಿಗೆ ಜನ್ಮ ನೀಡುತ್ತಾಳೆ. ಈ ಜನನವನ್ನು ಸಾಬೀತುಪಡಿಸುವುದಕ್ಕಾಗಿ ಆಕೆಯ ಬಳಿ ಆಸ್ಪತ್ರೆಯ ದಾಖಲೆಗಳಿವೆ. ಭಾರತದಲ್ಲಿನ ಆಕೆಯ ಹುಟ್ಟೂರಿಗೆ ಬಂದ ನಂತರ, ಆ ಊರಿನಲ್ಲಿ ಜನನದ ನೋಂದಣಿಗಾಗಿ ಕೋರಿಕೆ ಸಲ್ಲಿಸುತ್ತಾಳೆ, ಈ ಜನನವನ್ನು ನೋಂದಾಯಿಸಬಹುದೇ?

ಸ್ಪಷ್ಟೀಕರಣ : ಬಾಂಗ್ಲಾ ದೇಶವು ಭಾರತದೊಂದಿಗೆ ರಾಜತಾಂತ್ರಿಕ ಸಂಬಂಧವನ್ನು ಹೊಂದಿರುವುದರಿಂದ, ಪೌರತ್ವ ಅಧಿನಿಯಮ, 1955 ಮೇರೆಗಿನ ಪೌರರ (ಭಾರತೀಯ ಕಾನ್ಸೂಲೇಟ್‌ಗಳಲ್ಲಿ ನೋಂದಣಿ) ನಿಯಮಗಳು, 1956 ಇದಕ್ಕನುಸಾರವಾಗಿ ಆ ದೇಶದಲ್ಲಿನ ಭಾರತೀಯ ದೂತಾವಾಸದಲ್ಲಿ ಈ ಪ್ರಶ್ನೆಯಲ್ಲಿರುವ ಜನನವನ್ನು ಸಾಮಾನ್ಯವಾಗಿ ನೋಂದಾಯಿಸಬೇಕಾಗಿರುತ್ತದೆ. ಈ ನಿರ್ದಿಷ್ಟ ಪ್ರಕರಣದಲ್ಲಿ, ಅರ್ಜಿದಾರರ ಪತಿಯನ್ನು ತಾತ್ಕಾಲಿಕ ಕರ್ತವ್ಯದ ಮೇಲೆ ಬಾಂಗ್ಲಾ ದೇಶದಲ್ಲಿ ನಿಯೋಜಿಸಲಾಗಿತ್ತು. ಆದುದರಿಂದ, ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ, 1969ರ ಪ್ರಕರಣ 20(2)ರ ಮೇರೆಗೆ ಸಾಮಾನ್ಯವಾಗಿ, ಮಗುವಿನ ತಂದೆ ತಾಯಿಯರು ವಾಸಿಸುತ್ತಿರುವ ಸ್ಥಳದಲ್ಲಿ ಅಂದರೆ, ಭಾರತದಲ್ಲಿನ ಆಕೆಯ ಹುಟ್ಟೂರಿನಲ್ಲಿ ನೋಂದಾಯಿಸಬಹುದಾಗಿದೆ.

100. ಪ್ರಶ್ನೆ : ಭಾರತದ ಹೊರಗೆ ಜನಿಸಿದ ಯಾವುದೇ ಮಗುವಿನ ಜನನವನ್ನು 20(1)ನೇ ಪ್ರಕರಣದ ಮೇರೆಗೆ ಭಾರತೀಯ ರಾಯಭಾರಿ ಕಛೇರಿಯಲ್ಲಿ ನೋಂದಾಯಿಸಿರದಿದ್ದರೆ, ಆ ಮಗುವಿನ ತಂದೆ ತಾಯಿಯರು ಭಾರತದಲ್ಲಿ ಖಾಯಂ ಆಗಿ ನೆಲಸಲು ಭಾರತಕ್ಕೆ ಹಿಂತಿರುಗಿದಾಗ ಅಧಿನಿಯಮದ 20(2)ನೇ ಪ್ರಕರಣವು ಆ ಮಗುವಿನ ಜನನವನ್ನು ನೋಂದಾಯಿಸಲು ಅನುಮತಿಸುತ್ತದೆ. ಆದರೆ, ರಾಷ್ಟ್ರದ ಹೊರಗಡೆ ಉಂಟಾದ ಮತ್ತು ಪ್ರಕರಣ 20(1)ರ ಮೇರೆಗೆ ನೋಂದಾಯಿಸಿರದ ಮರಣದ ಸಂಬಂಧದಲ್ಲಿ ಅದನ್ನು ನೋಂದಾಯಿಸುವುದಕ್ಕೆ ಅಂಥ ಅವಕಾಶ ಇರುವುದಿಲ್ಲ. ಇದರಿಂದಾಗಿ, ಭಾರತದ ಹೊರಗಡೆ ಮೃತರಾದ ವ್ಯಕ್ತಿಗಳ ಸಂಬಂಧಿಕರಿಗೆ/ವಾರಸುದಾರರಿಗೆ ತೀರಾ ತೊಂದರೆಯುಂಟಾಗುತ್ತಿದೆ. ಆದುದರಿಂದ, ಜನನಗಳ ನೋಂದಣಿಗೆ ಸಂಬಂಧಿಸಿದಂತೆ ಅನ್ವಯಿಸುವ ಪ್ರಕ್ರಿಯೆಯನ್ನೇ ಭಾರತದ ಹೊರಗಡೆ ಸಂಭವಿಸುವ ಮರಣಗಳಿಗೂ ಅನ್ವಯಿಸಿ ಭಾರತದಲ್ಲಿ ನೋಂದಣಿ ಮಾಡಬಹುದೇ ಎಂಬ ಬಗ್ಗೆ ಸ್ಪಷ್ಟೀಕರಣ ಬೇಕಾಗಿದೆ. ಒಂದು ವೇಳೆ ಹೌದೆನ್ನುವುದಾದರೆ, ಅಂಥ ನೋಂದಣಿಗಾಗಿರುವ ಕಾಲಮಿತಿಯೇನು?

ಸ್ಪಷ್ಟೀಕರಣ : 20(1)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವಂತೆ ಭಾರತದ ಹೊರಗಡೆ ಜನಿಸಿದ ಯಾವುದೇ ಮಗುವಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸ್ವೀಕರಿಸದೇ ಇರುವಾಗ, ಅಂಥ ಮಗುವಿನ ಜನನದ ನೋಂದಣಿಗಾಗಿ 20ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಪಬಂಧ ಕಲ್ಪಿಸಲಾಗಿದೆ. ಮಗುವಿನ ತಂದೆ ತಾಯಿಯರು ಭಾರತದಲ್ಲಿ ಖಾಯಂ ಆಗಿ ನೆಲೆಸಲು ಇಲ್ಲಿಗೆ ಹಿಂತಿರುಗಿದಾಗ, ಭಾರತದಲ್ಲಿ ಮಗುವು ಜನಿಸಿದ್ದರೆ ಹೇಗೋಹಾಗೆ ಅದೇ ರೀತಿಯಲ್ಲಿ, ಭಾರತಕ್ಕೆ ಮಗುವು ಆಗಮಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಯಾವುದೇ ಸಮಯದಲ್ಲಿ ಈ ಅಧಿನಿಯಮದ ಮೇರೆಗೆ ಮಗುವಿನ ಜನನವನ್ನು ನೋಂದಾಯಿಸಿಕೊಳ್ಳಬಹುದು ಮತ್ತು ಮೇಲೆ ಹೇಳಿದ ಅರವತ್ತು ದಿನಗಳ ಅವಧಿಯ ಮುಕ್ತಾಯದ ತರುವಾಯ ಅಂಥ ಮಗುವಿನ ಜನನದ ನೋಂದಣಿಗೆ 13ನೇ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು, ಅದೇ ರೀತಿಯಲ್ಲಿ ಭಾರತದ ಹೊರಗಡೆ ಸಂಭವಿಸುವ ಮರಣದ ನೋಂದಣಿಗೆ ಸದರಿ ಉಪಪ್ರಕರಣದಲ್ಲಿ ಉಪಬಂಧ ಕಲ್ಪಿಸಿಲ್ಲ.

## ಪ್ರಕರಣ 23 :

